ುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 38 ಸೆಪ್ಟಂಬರ್ 9, 2004 ಬೆಲೆ ರೂ. 3.00

ಹೈದ್ರಾಬಾದ್ _ ಕರ್ನಾಟಕ ವಿಮೋಚನಾ ದಿನ - ವಿವಾದ







- ಪ್ರತ್ಯೇಕತಾವಾದವೋ - ಹೈಕೋರ್ಟ್ ಪೀಠವೋ?
- ಕಾಮ್ರೇಡ್ ನೆರೂದ ಪ್ರೆಸೆಂಟ್
- ಉಮಾಭಾರತಿ ಹೊಂಟಿದ್ದಾಳೆ ಎಚ್ಚರ !

ಮಾಧ್ಯಮ ಮಂಥನ

ಕಮ್ಯುನಿಸ್ಟ್ - ವಿರೋಧಿ ಪ್ರಲಾಪ : ಏನು ಕಾರಣ?

ಮಾಧ್ಯಮಗಳು ಕಮ್ಯುನಿಸ್ಟ್ ವಿರೋಧಿ ಪ್ರಲಾಪ ಆರಂಭಿಸಿರುವುದರ ಹಿನ್ನೆಲೆಯೇನು? ಇದರಲ್ಲಿ ಯಾರ್ಯಾರು ಶಾಮೀಲಾಗಿದ್ದಾರೆ?

2004 ಚುನಾವಣೆಯ ಅಭೂತಪೂರ್ವ ಜನಾದೇಶದ ನಂತರ ಕಮ್ಯುನಿಸ್ಟ್-ವಿರೋಧಿ ಪ್ರಲಾಪ ವಿಪರೀತ ಹೆಚ್ಚಿದೆ. ಜನಾದೇಶ ಬರುತ್ತಿದ್ದಂತೆ ಬಿಜೆಪಿ-ವಿರೋಧಿ ಸರ್ಕಾರ ರಚನೆ ಆಗದ ಹಾಗೆ ಮಾಡುವ ಎಲ್ಲಾ ಪ್ರಯತ್ನಗಳು ವಿಫಲವಾದವು. ಅದರಲ್ಲೂ ಎಡ ಪಕ್ಷಗಳ ಬೆಂಬಲವಿಲ್ಲದೆ ಯಾವುದೇ ಸರ್ಕಾರ ಸಾಧ್ಯವಿಲ್ಲ ಎಂಬುದು ಆಳುವ ವರ್ಗ ಮತ್ತು ಮಾಧ್ಯಮಗಳಲ್ಲಿರುವ ಅವರ ತುತ್ತೂರಿಗಳಿಗೆ ನುಂಗಲಾರದ ತುತ್ತು ಆಯಿತು. ಆಗಿನಿಂದ 'ಕಮ್ಯುನಿಸ್ಟ್ ಬೆಂಬಲದ ಸರ್ಕಾರ ರಚನೆಯಾಗುವ ಮೊದಲೇ ಶೇರು ಮಾರುಕಟ್ಟೆ ಕುಸಿತದ ಪಿತೂರಿ ನಡೆಸಿ, ಅದನ್ನು ಸೀತಾರಾಂ ಯೆಚೂರಿಯವರ ಒಂದು ಹೇಳಿಕೆಯ ಮೇಲೆ ಆರೋಪಿಸುವುದರಿಂದ ಈ ಪ್ರಲಾಪ ಹೆಚ್ಚಲು ಆರಂಭವಾಯಿತು.

ಆಗಿನಿಂದ ಪ್ರತಿ ಹಂತದಲ್ಲೂ ಎಡಪಕ್ಷಗಳು ಹೊಸ ಸರ್ಕಾರವನ್ನು ನಿಯಂತ್ರಿಸುತ್ತವೆ. ತಮ್ಮ ಶಕ್ತಿ ಮೀರಿ ನಿರ್ದೇಶಿಸುತ್ತಿವೆ. ಕಾಂಗ್ರೆಸ್-ನಾಯಕತ್ವದ ಯುಪಿಎ ಸರ್ಕಾರದಲ್ಲಿ ಭಾಗವಹಿಸದೆ ಇರುವ ನಿರ್ಧಾರದ ಬಗೆಗೂ - 'ಜವಾಬ್ದಾರಿ - ರಹಿತ ಅಧಿಕಾರ' ಎಂಬ ನಿಂದೆಯೂ ವಾರಗಟ್ಟಲೆ ನಡೆಯಿತು. ಯುಪಿಎ ಸರ್ಕಾರದ ಜತೆ ಎಡಪಕ್ಷಗಳು ರೂಪಿಸಿದ ಕನಿಷ್ಟ ಸಮಾನ ಕಾರ್ಯಕ್ರಮವನ್ನು ಕಮ್ಯುನಿಸ್ಟ್ - ನಿರ್ದೇಶಿತ ಎಂದು ಹಳಿಯಲಾಯಿತು. ಆಗಿನಿಂದ ಯುಪಿಎ ಸರ್ಕಾರ ಜನಾದೇಶ ಮೀರದಂತೆ ಎಡಪಕ್ಷಗಳು ಮಧ್ಯಪ್ರವೇಶಿಸಿದಾಗೆಲ್ಲ ಕಮ್ಯುನಿಸ್ಟ್-ಪಿತೂರಿ ಎಂದೆಲ್ಲಾ ದೂಷಿಸಲಾಗುತ್ತಿದೆ. ಎಡಪಕ್ಷಗಳ ಕೆಲವು ಒತ್ತಾಯಗಳನ್ನು ಯುಪಿಎ ಸರ್ಕಾರ ಮನ್ನಿಸಿದಾಗಲೆಲ್ಲ ಈ ಸರ್ಕಾರ 'ದುರ್ಬಲ' 'ರಾಜಕೀಯ-ಒತ್ತಡ'ಕ್ಕೆ ಒಳಗಾಗುತ್ತಿದೆ ಎಂಬ ಕೂಗು ಏಳುತ್ತದೆ - ಮಾಧ್ಯಮಗಳಲ್ಲಿ.

'ಅಪ್ರಸ್ತುತ' ದಿಂದ 'ಅಪಾಯ ನಂ.1'

ಎಡಪಕ್ಷಗಳ ರಾಜಕೀಯ ಚಟುವಟಿಕೆಗಳಲ್ಲಿ ನಾಯಕರ ಹೇಳಿಕೆ, ಅಭಿಪ್ರಾಯಗಳಿಗೆ, ಚರ್ಚೆಗಳಲ್ಲಿ ಭಾಗವಹಿಸುವಿಕೆಗೆ - ಸುದ್ದಿಮಾಧ್ಯಮಗಳಲ್ಲಿ ಸ್ವಲ್ಪವಾದರೂ ಇದ್ದ ಅವಕಾಶ ಇಲ್ಲವಾಗಿದೆ. ಅದರ ಬದಲು ಎಡಪಕ್ಷಗಳ ಬಗ್ಗೆ ಅಪಪ್ರಚಾರ, ಪ್ರಲಾಪ ತುಂಬಿದೆ. ಎಡಪಕ್ಷಗಳು ಕೇಂದ್ರದಲ್ಲಿ ಯುಪಿಎ ಸರ್ಕಾರವನ್ನು ಅಸ್ಥಿರಗೊಳಿಸುತ್ತವೆ. ದಾರಿ ತಪ್ಪಿಸುತ್ತಿವೆ - ಎಂದೆಲ್ಲಾ ಸತತ ಪ್ರಚಾರ ನಡೆಯುತ್ತಿದೆ. ಈಗ ಅಧಿಕಾರದಲ್ಲಿರುವ ಯುಪಿಎ ಸರ್ಕಾರವನ್ನು ಸಂಪ್ರೀತಗೊಳಿಸಲು ಒಂದು ಕಡೆ, ಜನ-ಪರ ನೀತಿಗಳಿಗೆ ಒತ್ತಡ ಹೇರುವ ಎಡಪಕ್ಷಗಳ ಪ್ರಭಾವದಿಂದ ದೂರಮಾಡಲು ಇನ್ನೊಂದುಕಡೆ. ಎಡ ಮತ್ತು ಬಲ ಶಕ್ತಿಗಳು ಸೇರಿ ಯುಪಿಎ ಸರ್ಕಾರ ಅಸ್ಥಿರಗೊಳಿಸುತ್ತಿವೆ ಎಂಬ ಅಪ-ಪ್ರಚಾರ ನಡೆಸುತ್ತಿವೆ.

ಚುನಾವಣಾ ಪೂರ್ವದಲ್ಲಿ ಮತ್ತು ಕಳೆದ ಹಲವು ವರ್ಷಗಳಿಂದ ಎಡಪಕ್ಷಗಳು, ಸಮಾಜವಾದ ಅಪ್ರಸ್ತುತ, ಅವರು ಕಾಲದೊಟ್ಟಿಗೆ ಹೆಜ್ಜೆ ಇಡುತ್ತಿಲ್ಲ, ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ವ್ಯವಸ್ಥೆ ವಿಘಟನೆ ನಂತರ 'ಸತ್ತುಹೋದ' ವ್ಯವಸ್ಥೆಯ ಆಗದ-ಹೋಗದ ಕನಸು ಕಾಣುವವರು ಇವರು- ಎಂದೆಲ್ಲಾ ಮಾಧ್ಯಮಗಳ ಪ್ರಚಾರದ ವೈಖರಿ ಆಗಿತ್ತು. ಎಡಪಕ್ಷಗಳ ಜನ ಬೆಂಬಲ ಹೆಚ್ಚುತ್ತಿರುವುದು, ಹಲವು ಸಾಧನೆಗಳು, ಜನ-ಪರ ಅಜೆಂಡಾ, ಎಡಸರ್ಕಾರಗಳ ಸಾಧನೆಗಳನ್ನು ಮರೆಮಾಚುವುದೂ ಇದರ ಭಾಗವಾಗಿತ್ತು.

'ಭಯೋತ್ಪಾದಕತೆ ಮತ್ತು ಕಮ್ಯುನಿಸಂ'

ಆದರೆ ಈಗ ಚುನಾವಣೆ ನಂತರ ಎಡಪಕ್ಷಗಳು ದೇಶಕ್ಕೆ ಅತಿದೊಡ್ಡ ಅಪಾಯ - ಎಂಬ ಪ್ರಲಾಪ ಆರಂಭವಾಗಿದೆ. ಇದಕ್ಕೆ ಏನು ಕಾರಣ. ಇದಕ್ಕೆ ಚುನಾವಣಾ ನಂತರದ ಆಂತರಿಕ ಸನ್ನಿವೇಶದಷ್ಟೇ, ಅಂತರ್ರಾಷ್ಟ್ರೀಯ ಸನ್ನಿವೇಶವೂ ಕಾರಣ. ಇರಾಕ್ ಅತಿಕ್ರಮಣ ಮತ್ತು ಸಾಮ್ರಾಜ್ಯಶಾಹೀ ಯುದ್ಧಕೋರತನದ ವಿರುದ್ಧ ಪ್ರಬಲ ಜನಾಭಿಪ್ರಾಯ, ಆಂದೋಲನ ರೂಪಿತವಾಗುತ್ತಿದೆ. ಸೆಪ್ಟೆಂಬರ್ 11, 2001 ರ ವಿಶ್ವವಾಣಿಜ್ಯ ಕೇಂದ್ರದ ದುರಂತದ ನಂತರ ಸಾಮ್ರಾಜ್ಯಶಾಹಿ ಆರಂಭಿಸಿದ 'ಭಯೋತ್ಪಾದಕತೆ ವಿರುದ್ಧಯುದ್ಧ' ದ ಹೂರಣವೂ ಬಯಲಾಗುತ್ತಿದೆ. ಇದರ ಹೆಸರಲ್ಲಿ ಜನರ ಪ್ರಜಾಸತ್ತಾತ್ಮಕ ಹಕ್ಕುಗಳು, ಆರ್ಥಿಕ ನೀತಿಗಳ ವಿರುದ್ಧ ಆಕ್ರೋಶವನ್ನು ಹತ್ತಿಕ್ಕುವುದು ನಿಜವಾದ ಉದ್ದೇಶ ಎಂಬುದು ಬಯಲಾಗಿದೆ. ಈ ಎಲ್ಲದರ ವಿರುದ್ಧ ಏಳುತ್ತಿರುವ ಜನಾಂದೋಲನದ ಅಲೆಯನ್ನು ಪ್ರಬಲ ರಾಜಕೀಯ ಶಕ್ತಿಯಾಗುವಂತೆ ಪ್ರಯತ್ನದಲ್ಲಿ ತೊಡಗಿರುವವರು ಕಮ್ಯುನಿಸ್ಟರು. ಅವರ ಪಾತ್ರ ಹಲವು ಕಡೆ ಪ್ರಮುಖವಾದುದು, ಇನ್ನೂ ಹಲವು ಕಡೆ ಗಣನೀಯ ಸಾಮ್ರಾಜ್ಯಶಾಹಿ-ವಿರೋಧಿ, ಜಾಗತೀಕರಣ-ವಿರೋಧಿ ಚಳುವಳಿಗೆ ಪ್ರಬಲ ಸೈದ್ಧಾಂತಿಕ, ರಾಜಕೀಯ ಸಂಘಟನಾತ್ಮಕ ಚೌಕಟ್ಟು ಕೊಡಬಲ್ಲವರು ಕಮ್ಯುನಿಸ್ಟರು. ಇದು ಸಾಮ್ರಾಜ್ಯಶಾಹಿಗೆ ಚೆನ್ನಾಗಿ ಗೊತ್ತಿದೆ. ಇದರಿಂದಾಗಿಯೇ ಕಮ್ಯುನಿಸ್ಟರ ವಿರುದ್ಧ ಅಪಪ್ರಚಾರದ ಪ್ರಲಾಪ ಅಂತರ್ರಾಷ್ಟ್ರೀಯವಾಗಿ ಆರಂಭವಾಗಿದೆ. ಎರಡನೇ ಮಹಾಯುದ್ಧದ ನಂತರದ ಸಂದರ್ಭದಲ್ಲಿ 'ಫ್ಯಾಸಿಸಂ ಮತ್ತು ಕಮ್ಯುನಿಸಂ' ಎರಡೂ ಜನತೆಗೆ, ಪ್ರಜಾಪ್ರಭುತ್ವಕ್ಕೆ ವಿರೋಧಿಗಳು - ಎಂಬ ಪ್ರಚಾರ ನಡೆದಿತ್ತು. ಅದೇ ರೀತಿ ಕೆಲವು ಎಡ ದುಸ್ಸಾಹಸವಾದಿಗಳು ನಡೆಸುವ ಕೆಲವು ಸಣ್ಣ-ಪುಟ್ಟ ಭಯೋತ್ಪಾದಕ ಕೃತ್ಯಗಳನ್ನು ದೊಡ್ಡದು ಮಾಡಿ 'ಭಯೋತ್ಪಾದಕತೆ ಮತ್ತು ಕಮ್ಯುನಿಸಂ' ಇಂತ ಪ್ರಮುಖ ಅಪಾಯ ಎಂಬ ಪ್ರಚಾರಕ್ಕೆ ತಯಾರಿ ನಡೆದಿದೆ. ಮುಂದಿನ ದಿನಗಳಲ್ಲಿ ಈ ಪ್ರಲಾಪ ಹೆಚ್ಚಲಿದೆ.

ಹೀಗೆ ನಮ್ಮ ಆಳುವ ವರ್ಗಗಳು ಮತ್ತು ಸಾಮ್ರಾಜ್ಯಶಾಹಿ ಈ ಪ್ರಲಾಪದಲ್ಲಿ ಶಾಮೀಲಾಗಿವೆ. ಸಾಮ್ರಾಜ್ಯಶಾಹಿ ಮತ್ತು ಆಳುವವರ್ಗಗಳು ಜನರನ್ನು ದಾರಿ ತಪ್ಪಿಸಲು ಮಾಧ್ಯಮಗಳನ್ನು ಬಳಸುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿವೆ. ಆದರೆ ಎಚ್ಚೆತ್ತ ಜನರ ಎದುರು ಈ ಆಟ ನಡೆಯುವುದಿಲ್ಲ. ವೆನೆಜುವೆಲಾದಲ್ಲಿ ಕಳೆದ ಕೆಲವು ವರ್ಷಗಳ ಅನುಭವ ತೋರಿಸಿಕೊಟ್ಟಿದೆ. ಅಲ್ಲಿ ಮಾಧ್ಯಮಗಳ ಅಪಪ್ರಚಾರ ಧಿಕ್ಕರಿಸಿ ಜನ-ಪರ ಅಧ್ಯಕ್ಷ ಚವೇಝ್‌ರಿಗೆ ಜನಮತ ಸಂಗ್ರಹದಲ್ಲಿ ಪ್ರಚಂಡ ಬೆಂಬಲ ಸಿಕ್ಕಿದೆ. ಆಳುವ ವರ್ಗಗಳ ಈ ಕಮ್ಯುನಿಸ್ಟ್-ವಿರೋಧಿ ಪ್ರಲಾಪಕ್ಕೆ ಪ್ರತಿಯಾಗಿ ಪ್ರಚಾರ-ಪ್ರಕ್ಷೋಭೆಯ ಮಹತ್ವ ಹಿಂದೆಂದಿಗಿಂತಲೂ ಹೆಚ್ಚಿದೆ.

ಶರತ್‌ಚಂದ್ರ

'ಜನಸಂಖ್ಯೆ ಹೆಚ್ಚಳ' ದಲ್ಲೂ ಕೋಮು ವಾಸನೆ

2001 ರ ಜನಗಣತಿಯ ಪ್ರಕಾರ ಮುಸ್ಲಿಂ ಜನಸಂಖ್ಯೆ ಹಿಂದೂ ಜನಸಂಖ್ಯೆಗಿಂತ ವೇಗವಾಗಿ ಹೆಚ್ಚುತ್ತಿದೆ ಎಂದು 'ಕಳವಳ' ವ್ಯಕ್ತಪಡಿಸಿದ ಬಿಜೆಪಿ ಅಧ್ಯಕ್ಷ ವೆಂಕಯ್ಯನಾಯ್ಡು ಮತ್ತು ಸಂಘ ಪರಿವಾರದ ಬಳಗ ಅಪಹಾಸ್ಯಕ್ಕೆ ಈಡಾಗಿದೆ. ಜನಸಂಖ್ಯೆಯ ಏರಿಕೆಯ ಕುರಿತು ಮಾತನಾಡಿದ ವೆಂಕಯ್ಯನಾಯ್ಡು, ಇದರಿಂದ ದೇಶದ ಐಕ್ಯತೆಗೆ ಭಂಗ ಉಂಟಾಗುತ್ತದೆ ಎಂದು ಎಚ್ಚರಿಸಿದರೆ, ಉಳಿದ ಬಿಜೆಪಿ ಆರ್.ಎಸ್.ಎಸ್ ಬಳಗ, ಬಾಂಗ್ಲಾ ದೇಶದಿಂದ ಬಂದಿರುವ ನಿರಾಶ್ರಿತರಿಂದ ಜನಸಂಖ್ಯೆ ಏರುತ್ತಿದೆ ಎಂದು ಆರೋಪಿಸಿದರು.

ಜನಗಣನಾ ಆಯೋಗವು ನೀಡಿದ ಪರಿಷ್ಕೃತ ಅಂದಾಜಿನ ಪ್ರಕಾರ ಮುಸ್ಲಿಂ ಜನಸಂಖ್ಯೆಯ ಏರಿಕೆಯ ದರವೂ ಇಳಿಮುಖವಾಗುತ್ತಿದೆ.

ಜನಗಣನಾ ಆಯೋಗವು (census commissioner) ಮೊದಲು ನೀಡಿದ ಹೇಳಿಕೆಯ ಪ್ರಕಾರ ಮುಸ್ಲಿಂ ಜನಸಂಖ್ಯೆ ಶೇ.36ರಷ್ಟು ಏರುತ್ತಿದೆ. ಆದರೆ ಈ ಹೇಳಿಕೆಯನ್ನು 1991 ರ ಜನಗಣತಿಯ ಆಧಾರದಲ್ಲಿ ನೀಡಲಾಗಿತ್ತು.

1991 ರ ಜನಗಣತಿಯಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಪರಿಸ್ಥಿತಿ ಹದಗೆಟ್ಟಿರುವುದರಿಂದ ಅಲ್ಲಿ ಜನಗಣನಾ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಮುಸ್ಲಿಂ ದೊಡ್ಡ ಸಂಖ್ಯೆಯಲ್ಲಿರುವ ಜಮ್ಮು ಮತ್ತು ಕಾಶ್ಮೀರವನ್ನು 1991 ರ ಜನಗಣತಿಯಲ್ಲಿ ಕೈಬಿಟ್ಟು, 2001 ರ ಜನಗಣತಿಯಲ್ಲಿ ಸೇರಿಸಿರುವುದರಿಂದ ಅದು ಒಂದೇ ಸಮನೆ ಹೆಚ್ಚಾದಂತೆ ತೋರುತ್ತಿತ್ತು. ಜಮ್ಮು ಕಾಶ್ಮೀರದ ಜನಸಂಖ್ಯೆಯನ್ನು ತೆಗೆದು, ಶೇಕಡಾವಾರು ಲೆಕ್ಕಹಾಕಿದರೆ, ಜನಸಂಖ್ಯೆ ಹೆಚ್ಚಳ ದರ ಶೇ.36 ರ ಬದಲಿಗೆ ಶೇ.29.3 ಆಗುತ್ತದೆ.

ಲೆಕ್ಕಾಚಾರದಲ್ಲಿ ಆಗಿರುವ ಈ ಏರುಪೇರುಗಳನ್ನು ಕೋಮುಭಾವನೆ ಪ್ರಚೋದಿಸುವುದಕ್ಕೆ ಉಪಯೋಗಿಸಿಕೊಳ್ಳುವುದು, ಈ ಬಿಜೆಪಿ ಎಷ್ಟು ಅಪಾಯಕಾರಿ ಎಂಬುದನ್ನು ಸೂಚಿಸುತ್ತದೆ.

ಆರ್.ಎಸ್.ಎಸ್ ಹುಟ್ಟಿದಾಗಿನಿಂದ (ಸಾಧಾರಣ 1920 ರಿಂದ) 'ದೇಶದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚುತ್ತಿದೆ. ಒಂದು ದಿನ ಹಿಂದುಗಳಿಗಿಂತ ಜಾಸ್ತಿ ಆಗುತ್ತಾರೆ' ಎಂದೆಲ್ಲಾ ಪ್ರಚಾರ ನಡೆಸುತ್ತಾ ಬಂದಿತ್ತು. ಆದರೆ 2001 ರ ಜನಗಣತಿ ಪ್ರಕಾರ ಒಟ್ಟು 102.8 ಕೋಟಿ ಜನರಲ್ಲಿ ಹಿಂದೂ ಜನಸಂಖ್ಯೆ 82.8 ಕೋಟಿ (ಶೇ.80.5) ಮತ್ತು ಮುಸ್ಲಿಂ ಜನಸಂಖ್ಯೆ
13.8 ಕೋಟಿ (ಶೇ 13.4) ಮಾತ್ರ.

ಜನಸಂಖ್ಯೆ ಹೆಚ್ಚಳಕ್ಕೆ ಆಯೋಗವು ಈ ಕೆಳಗಿನ ಕಾರಣಗಳನ್ನು ನೀಡಿದೆ.

1. ಬಡತನ: ಶ್ರೀಮಂತರು, ಮಧ್ಯಮ ವರ್ಗದವರಿಗಿಂತ ಬಡಜನರಲ್ಲಿ ಜನಸಂಖ್ಯೆ ಹೆಚ್ಚಳ ಜಾಸ್ತಿ.
2. ಸಾಕ್ಷರತೆ: ಅದರಲ್ಲೂ ಮಹಿಳಾ ಸಾಕ್ಷರತೆ- ಮಹಿಳೆಯರು ವಿದ್ಯಾವಂತರಾದರೆ ಜನನ ಸಂಖ್ಯೆ ಕಡಿಮೆ. ಅವಿದ್ಯಾವಂತ ಮಹಿಳೆಯರಲ್ಲಿ ಜನನ ಸಂಖ್ಯೆ ಸರಾಸರಿ 3.5 ಆದರೆ ವಿದ್ಯಾವಂತ ಮಹಿಳೆಯರಲ್ಲಿ ಸರಾಸರಿ ಜನನ ಸಂಖ್ಯೆ 2.0 ಮಾತ್ರ. ಆದ್ದರಿಂದಲೇ ಅತಿ ಹೆಚ್ಚು ಸಾಕ್ಷರತಾ ಮಹಿಳೆಯರನ್ನು ಹೊಂದಿರುವ ಕೇರಳದಲ್ಲಿ ಜನನ ಸಂಖ್ಯೆ ತೀವ್ರ ಇಳಿಮುಖವಾಗುತ್ತಿದೆ.

ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಜೈನ್ ಇತ್ಯಾದಿ ಎಲ್ಲಾ ಧರ್ಮದವರಿಗೆ ಹೋಲಿಸಿದರೆ, ಮುಸ್ಲಿಂ ಮಹಿಳೆಯರಲ್ಲಿ ಶೇ.50 ಸಾಕ್ಷರತೆ ಮಟ್ಟ ಇದ್ದು ರಾಷ್ಟ್ರೀಯ ಸರಾಸರಿ ಶೇ 53.7 ಕ್ಕಿಂತ ಶೇ 3.7 ರಷ್ಟು ಕಡಿಮೆ ಇದೆ.


ವಿವಿಧ ಧರ್ಮದವರ ಸಾಕ್ಷರತಾಮಟ್ಟ ಈ ಕೆಳಗಿನಂತಿದೆ. ಕ್ರೈಸ್ತ ಶೇ.80.30, ಸಿಖ್ ಶೇ 69.4, ಹಿಂದೂ ಶೇ.65 ಮುಸ್ಲಿಂ ಶೇ.50

ಈ ಸಂದರ್ಭದಲ್ಲಿ ಸಪ್ಟೆಂಬರ್ 9 ರ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ವ್ಯಂಗ್ಯ ಚಿತ್ರವನ್ನು ಗಮನಿಸಬೇಕು.

ಲಿಂಗ ಅನುಪಾತದಲ್ಲಿ ಇಳಿಕೆ : ಜನಗಣತಿಯ ಪ್ರಕಾರ ಹೆಣ್ಣು ಮಕ್ಕಳ ಜನನ ಸಂಖ್ಯೆಯಲ್ಲಿ ಏರುಪೇರು ಆಗಿರುವುದು ಗಮನಕ್ಕೆ ಬಂದಿದೆ. ಅಂದರೆ ಸಾಮಾನ್ಯವಾಗಿ 1000 ಪುರುಷರಿದ್ದರೆ, ಮಹಿಳೆಯರ ಸಂಖ್ಯೆಯೂ ಹೆಚ್ಚು ಕಡಿಮೆ ಅಷ್ಟೆ ಇರಬೇಕು. ಆದರೆ ಮಹಿಳೆಯರ ಸಂಖ್ಯೆ ಅದರಲ್ಲೂ ಚಿಕ್ಕ ಹೆಣ್ಣುಮಕ್ಕಳ ಸಂಖ್ಯೆ ತೀವ್ರವಾಗಿ ಇಳಿಮುಖವಾಗುತ್ತಿದೆ. ಪಂಜಾಬ್, ಹರ್ಯಾಣಾ, ಹಿಮಾಚಲ ಪ್ರದೇಶ, ಗುಜರಾತ್ ಮೊದಲಾದ ರಾಜ್ಯಗಳಲ್ಲಿ ಇದು ಗಣನೀಯ ಪ್ರಮಾಣದಲ್ಲಿದೆ. ಹರ್ಯಾಣಾರಾಜ್ಯದಲ್ಲಂತೂ ಹೆಚ್ಚು ಆದಾಯ ಇರುವವರಲ್ಲಿ 1000 ಪುರುಷರಿಗೆ 541 ಮಹಿಳೆಯರಿದ್ದರೆ, ಬಡಜನ ವಿಭಾಗದಲ್ಲಿ 1000 ಪುರುಷರಿಗೆ 1567 ಮಹಿಳೆಯರಿದ್ದಾರೆ. ಅಂದರೆ ಹೆಚ್ಚು ಆದಾಯ ಹೊಂದಿರುವವರಲ್ಲಿ ಹೆಣ್ಣು ಭ್ರೂಣ ಹತ್ಯೆ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದು ಇದು ಇಡೀ ಸಮಾಜದ ಮೇಲೆ ಅಪಾಯಕಾರಿ ಪರಿಣಾಮ ಬೀರಲಿದೆ.

ಒಟ್ಟಾರೆಯಾಗಿ, ಜನಗಣತಿಯನ್ನು ಸಾಮಾಜಿಕ, ಆರ್ಥಿಕ, ಲಿಂಗ ಅನುಪಾತದ ಆಧಾರದಲ್ಲಿ ಗಮನಿಸಿ ಕ್ರಮಬದ್ಧವಾದ ಬೆಳವಣಿಗೆಗೆ ಪರ್ಯಾಯ ಮಾರ್ಗಗಳನ್ನು ಸೂಚಿಸಬೇಕೇ ಹೊರತು, ಬಿಜೆಪಿ ಆರ್‌ಎಸ್‌ಎಸ್‌ಗಳಂತೆ ಕೋಮು ಪ್ರಚೋದನೆಗೆ ಅಲ್ಲ.

ಬಾಲಕೃಷ್ಣ ಶೆಟ್ಟಿ



ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಸೆಪ್ಟೆಂಬರ್ 3, 2004 ರಿಂದ**
  ಅಂಗನವಾಡಿ ಕೇಂದ್ರಗಳನ್ನು ಗ್ರಾಮ ಪಂಚಾಯತಿಗೆ ವಹಿಸುವುದರ ವಿರುದ್ಧ ಮತ್ತು ಸೇವಾ ನಿಯಮಾವಳಿಗಳನ್ನು ರಚಿಸಲು ಆಗ್ರಹಿಸಿ ಅಂಗನವಾಡಿ ನೌಕರರ ಧರಣಿ - ಬೆಂಗಳೂರು
- **ಸೆಪ್ಟೆಂಬರ್ 15, 2004**
  ಅಂಗನವಾಡಿ ಕೇಂದ್ರ ಬಂದ್
- **ಸೆಪ್ಟೆಂಬರ್ 15, 2004**
  ನಿರುದ್ಯೋಗದ ವಿರುದ್ಧ, ಭತ್ಯೆಗಾಗಿ ಜಿಲ್ಲಾ ತಾಲೂಕು ಕೇಂದ್ರಗಳಲ್ಲಿ ಡಿವೈಎಫ್ಐ ಧರಣಿ.
- **ಸೆಪ್ಟೆಂಬರ್ 20, 2004**
  ಕಟ್ಟಡ ಕಾರ್ಮಿಕರ ರಾಜ್ಯಮಟ್ಟದ ಸಭೆ ಕರೂರು ವೈಶ್ಯಾಬ್ಯಾಂಕ್ ಎಂಪ್ಲಾಯಿಸ್ ಯೂನಿಯನ್ ಕಛೇರಿ, ಬಸವನಗುಡಿ, ಬೆಂಗಳೂರು, ಬೆಳಿಗ್ಗೆ 10.30 ಕ್ಕೆ
- **ಸೆಪ್ಟೆಂಬರ್ 24, 2004**
  ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ಜಂಟಿ ರಾಷ್ಟ್ರೀಯ ಸಮಾವೇಶ ನವದೆಹಲಿ.
- **ಸೆಪ್ಟೆಂಬರ್ 28 ರಿಂದ ಅಕ್ಟೋಬರ್ 1**
  ಡಿವೈಎಫ್ಐ ದಕ್ಷಿಣ ಭಾರತ ಸಂಘಟನಾ ಶಿಬಿರ ಹೈದರಾಬಾದ್.

ತಿಕ್ಕಲು ಹಿಡಿದವರ ತಿರಂಗ ಯಾತ್ರೆ


ಉಮಾಭಾರತಿಯ ನಿತ್ಯ ಭಜನೆಯಿಂದ 'ಭಾಜಪ'ದ ನಾಲಿಗೆಗಳು 'ತಿರಂಗಯಾತ್ರಾ'ದತ್ತ ತಿರುಗುತ್ತಿವೆ. ಹುಬ್ಬಳ್ಳಿಯ ಈದ್ಗಾ ಮೈದಾನದ ಗಲಭೆ ಸಂಬಂಧಿ ಕ್ರಿಮಿನಲ್ ಮೊಕದ್ದಮೆಯಲ್ಲಿ ಪ್ರಧಾನ ಆರೋಪಿಯಾಗಿದ್ದ ಉಮಾಭಾರತಿ ಎಸಗಿದ ಅಪರಾಧವನ್ನು ನ್ಯಾಯಾಲಯದ 28 ವಾರಂಟ್‌ಗಳನ್ನು ನಿರ್ಲಕ್ಷಿಸಿ ದೇಶದ ಕಾನೂನು, ಸಂವಿಧಾನವನ್ನು ಕಡೆಗಣಿಸಿದ ಖೋಟಾ 'ರಾಷ್ಟ್ರಭಕ್ತಿ'ಯನ್ನು ಸಂಘ ಪರಿವಾರ ಮತ್ತು ಮಾಧ್ಯಮಗಳು ಮರೆಮಾಚಿದ ಬಳಿಕ 'ಈಗ ರಾಜಕೀ ಬೇಳೆ ಬೇಯಿಸಿಕೊಳ್ಳಲು ಮತ್ತೊಂದು ಪ್ರಹಸನಕ್ಕೆ ಕೈಚಾಚಿವೆ. ಕೋಮುವಾದೀ ಬಿಜೆಪಿಯೊಂದಿಗೆ ಒಳಗೊಳಗೇ ಕೈ ಮಿಲಾಯಿಸಿ ಜನದ್ರೋಹವೆಸಗಿದ ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರವರ ಸಂದರ್ಭಸಾಧಕ ನೀತಿಯಿಂದಾಗಿ ಹುಬ್ಬಳ್ಳಿ - ಜೆಎಂಎಫ್‌ಸಿ ನ್ಯಾಯಾಲಯ ಉಮಾಭಾರತಿಯ ಮೇಲಿದ್ದ ಕ್ರಿಮಿನಲ್ ಕೇಸನ್ನು ಸೆಪ್ಟೆಂಬರ್ 6 ರಂದು ರದ್ದುಗೊಳಿಸಿತು. ಇದನ್ನೇ 'ಸಂಘಿ'ಗಳು ತಮ್ಮದೇ ಸಾಧನೆಯೆಂದೆ ಕೂಗಾಡಿದ್ದಲ್ಲದೇ ದೇಶದ ಎಲ್ಲಾ ನಾಯಕಗಣವನ್ನು ಬೆಂಗಳೂರಿಗೆ ಕರೆ ವಿಜಯೋತ್ಸವವನ್ನು ಆಚರಿಸಿತು. ಸೆಪ್ಟೆಂಬರ್ 10 ರಂದು ಹುಬ್ಬಳ್ಳಿಯಿಂದ 'ತಿರಂಗಾ ಯಾತ್ರೆ' ಆರಂಭ. ಈ ಯಾತ್ರೆ ಗುಲ್ಬರ್ಗಾ, ಹುಮ್ನಾಬಾದ್-ಬೀದರ್ ಮೂಲಕ ಮಹಾರಾಷ್ಟ್ರ ತಲುಪಲಿದೆ ಎಂಬುದು ಪಕ್ಕಾ ಮುಂಬರುವ ಚುನಾವಣೆಗಳ ಲಾಭ ಹೊಡೆಯಲೆಂದೇ. ರಾಷ್ಟ್ರಧ್ವಜದ ಮಾನ ಕಾಪಾಡುತ್ತೇವೆಂಬುದಾಗಲೀ, ಮೇಡಂ ಕಾಮಾರವರು ಹಾರಿಸಿದ ಧ್ವಜವನ್ನು ಉಮಾಭಾರತಿಯಂತಹ ಕಪಟ ಸನ್ಯಾಸಿನಿಗೆ ನೀಡಲಾಗುವುದೆಂಬುದಾಗಲೀ - ಅದು ಐತಿಹಾಸಿಕ ಜಲಿಯನ್ ವಾಲಾಬಾಗ್‌ನಲ್ಲೇ ಯಾತ್ರೆ ಕೊನೆಗೊಳ್ಳುವುದೆಂಬುದಾಗಲೀ, ಕೇವಲ ಕೇವಲ ಅಪರಾಧ ಮುಚ್ಚಿಕೊಳ್ಳುವ ಸೋಗಿನ ವರಸೆಗಳು ಅಷ್ಟೇ. ಮಧ್ಯಪ್ರದೇಶದ ಜನಕ್ಕೆ ಸಾಕುಸಾಕಾಗಿ ಹೋಗಿದ್ದ ಪಿಶಾಚಿಯನ್ನು ಕರುನಾಡಿನ ಗವಾಕ್ಷಿಯಲ್ಲಿ ತಲೆ ತೂರಿಸಿ ಜನ-ಪ್ರಿಯ ಮಾಡುವ ಕಲೆಗಾರಿಕೆ ಗೋಬೆಲ್ಸ್‌ನ ಸಂತತಿಗೆ ಬಿಟ್ಟರೆ ಇನ್ಯಾರಿಗೆ ಸಾಧ್ಯ?

ಈ ತಿರಂಗ ಯಾತ್ರೆಯ ರೂಪುರೇಷೆಗಳನ್ನು ಅಂತಿಮಗೊಳಿಸಿದ ಬಿಜೆಪಿ ಪದಾಧಿಕಾರಿಗಳು ಅಖಿಲ ಭಾರತ ಸಭೆ ಈ ಯಾತ್ರೆಯ ಅಜೆಂಡಾವನ್ನು ನಿಗದಿಪಡಿಸಿದೆ! 'ಹಿಂದುತ್ವ'ದ ಭಯಂಕರ ಫ್ಯಾಸಿಸ್ಟ್ ಮಾದರಿಯನ್ನೇ ಆದರ್ಶವಾಗಿರಿಸಿಕೊಳ್ಳುವುದಾಗಿ ಪುನರುಚ್ಚರಿಸಿದ ಬಿಜೆಪಿ, ಈ ಯಾತ್ರೆಗೆ ಮೊದಲು ಬಹಳ ಸೂಕ್ಷ್ಮವಾಗಿ... ಆದರೆ ಆಕ್ರಮಣಕಾರಿಯಾಗಿ ಭಾರತದ ಜನಗಣತಿಯ ವಿವರಗಳನ್ನು ತಿರುಚಿ ಮುಸ್ಲಿಮರ ವಿರುದ್ಧ ಯುದ್ಧ ಸಾರಿದೆ. ಸುಳ್ಳುಗಳ ಸರಮಾಲೆಯಿಂದ ಹಿಂದೂ ಕೋಮುವಾದವನ್ನು ಉನ್ಮಾದಕ್ಕೊಯ್ದು ಕೆರಳಿಸುತ್ತಿದೆ. ಜನಮಾನಸಕ್ಕೆ ವಿಷವುಣಿಸಲಿದೆ.

ಇನ್ನೊಂದೆಡೆ ಈ ಕೋಮುವಾದಿಗಳನ್ನು ನಿಜಕ್ಕೂ ಎದುರಿಸುವ ಮನಸ್ಸಿಲ್ಲದೆ, ರಾಜಕೀಯ ಇಚ್ಛಾ ಶಕ್ತಿಯೂ ಇಲ್ಲದೆ, ಹತ್ತಿ ಉರಿವ ಮನೆಯಲ್ಲಿ ನನಗೂ ಒಂದು ಗಳವಿರಲಿ ಎಂದು ಲೆಕ್ಕ ಹಾಕುವ ಕಾಂಗ್ರೆಸ್‌ನ ಮೇಲೆ ಧಾಳಿ ನಡೆಸುವುದು ಅದರ ಗುರಿ. ಕಾಂಗ್ರೆಸ್‌ನ ನಾಯಕತ್ವವನ್ನು, ಸೋನಿಯಾಗಾಂಧಿಯನ್ನು ನಿರ್ದಿಷ್ಟವಾಗಿ ಗುರಿಯಾಗಿಸಿ, ಜರ್ಝರಿತಗೊಳಿಸಲು ಉಮಾಭಾರತಿ, ಸುಷ್ಮಾಸ್ವರಾಜ್‌ರಂತಹವರನ್ನೇ ಬಳಸುವುದು ಅವರ ತಂತ್ರ. ಇವರು ಎಲ್ಲಾ ಸಭ್ಯತೆಗಳನ್ನು ನೈತಿಕತೆಯ ಎಲ್ಲೆಗಳನ್ನು ಎಷ್ಟು ಬೇಕೋ ಅಷ್ಟಕ್ಕೂ ಮೀರಬಲ್ಲ ಬಾಯ್ಬಡುಕಿಗಳು ಎಂಬುದು ಲೋಕಖ್ಯಾತಿ. ಇದನ್ನೇ ಬಿಜೆಪಿಯ ಹಿಂದಿನ ರಾಜಕೀಯ ಎಂದು ಗುರುತಿಸಲಾಗಿದೆ.

ಈ ಸಾಲಿನ ಸೇವೆಗೆ ತಾನೂ ಸಿದ್ಧವೆಂದು ಹಿಂದಿನ ವಿದೇಶಾಂಗ ಸಚಿವ ಯಶವಂತ ಸಿನ್ಹಾ ಬೆಂಗಳೂರಿನಲ್ಲಿ ಪ್ರಕಟಪಡಿಸಿದರು.

ಈ ಯಾತ್ರೆಯಲ್ಲಿ ಇನ್ನೂ ಅದೆಷ್ಟು ಜನ ತಮ್ಮನ್ನು ನಗ್ನಗೊಳಿಸಿಕೊಳ್ಳಲಿದ್ದಾರೋ ಕಾದು ನೋಡಬೇಕು. ಇಂತಹ ಕೊಳೆತು ನಾರುವ, ಭೀಕರ ರೋಗಗ್ರಸ್ತ ಯೋಚನೆ, ಮತ್ತು ಕೃತ್ಯಗಳನ್ನು ಮೈಮನಸ್ಸಿನ ತುಂಬಾ ತುಂಬಿಕೊಂಡಸ ಈ ಡೋಂಗಿಗಳ ಯಾತ್ರೆ ಎಂತಹ ಪರಿಣಾಮ ಬೀರಬಲ್ಲದು, ದ್ವೇಷದ ಕಿಚ್ಚು ಹಿಡಿದೇ ಹೊರಟಿರುವ ಈ ಯಾತ್ರೆ ಹಿಂಸೆಯನ್ನು ಹುಟ್ಟುಹಾಕದೆ? ಅಶಾಂತಿ ಹಬ್ಬದೇ? ನಿತ್ಯ ಬದುಕಿನ ಇರುವ ಅವಕಾಶಗಳನ್ನು ನೆಕ್ಕಿಬಿಡುವುದೇ? ಎಂಬ ಆತಂಕ ಎಲ್ಲರಲ್ಲೂ ಮನೆ ಮಾಡಿದೆ. ಸಂಕಷ್ಟಗಳ - ಸಮಸ್ಯೆಗಳ ಎದುರಿನಲ್ಲಿ ನಾಡಿನ ಜನಕೋಟಿ ಸಂಘರ್ಷಿಸುತ್ತಾ ಎದ್ದು ನಿಲ್ಲುತ್ತಿರುವಾಗ ಅದಕ್ಕೆ ನೀರೆರಚಿ ಹಿಂದಕ್ಕಟ್ಟುವುದು ಅದರ ಅಜೆಂಡಾವಾಗಿದೆ. ಆದ್ದರಿಂದಲೇ ಬರದ ಭೀಕರತೆಯಲ್ಲಿ ಮೂರು ಪಕ್ಷಗಳು ಜನ ತತ್ತರಗೊಂಡಾಗ, ರೈತರು ಆತ್ಮಹತ್ಯೆಗೀಡಾಗಿ ಸಾವಿನ ಮನೆ ಸೇರುತ್ತಿರುವಾಗ, ಕೈಗಾರಿಕೆ ನಾಶದಿಂದ ನಿರುದ್ಯೋಗ, ಶಿಕ್ಷಣದ ವಂಚಿತರು ತತ್ತರಗೊಂಡಾಗ, ಈ 'ರಾಷ್ಟ್ರಭಕ್ತ'ರು ಎಂದೂ ಇಲ್ಲಿಗೆ ಧಾವಿಸಿರಲಿಲ್ಲ. ಆಗ ಅಡ್ವಾಣಿಗೆ ಗಂಟಲು ನೋವು, ವಾಜಪೇಯಿಗೆ ಮಂಡಿನೋವು ಇತ್ತಲ್ಲ!



ಮುಖ್ಯವಾಗಿ ರಾಷ್ಟ್ರದ ಮಾನವಿರುವುದು ಜನರಲ್ಲಿ ಅಲ್ಲ! ಝುಂಡಾದಲ್ಲೇ ಎಂದು ನಂಬಿಸುವ ಭೂಪರು ಇವರಲ್ಲವೇ?

ಈ ಕ್ಷಣದ ಮುಖ್ಯಪ್ರಶ್ನೆ ಬಿಜೆಪಿಯ ಅಪ್ರಬುದ್ಧ ಯಾತ್ರೆಯ ಮೂಲಕ ಶಾಂತಿ- ನಾಗರೀಕ ಜೀವ, ಆಸ್ತಿಗೆ ಹಾನಿಯಾಗುವಂತಹ ಕೋಮುದ್ವೇಷ ಹಬ್ಬಿಸುವಂತಹ ಕೃತ್ಯ ಎಸಗುವುದನ್ನು ಸರ್ಕಾರ ಕಟ್ಟುನಿಟ್ಟಾಗಿ ತಡೆಯಬೇಕು. ಶಾಂತಿ-ಸುವ್ಯವಸ್ಥೆ ಕಾಯಬೇಕು. ಉಮಾಭಾರತಿ ಪ್ರಕರಣವನ್ನು ಅರೆಬರೆಯಾಗಿ ಎದುರಿಸಿದಂತೆ ಧರಂ ಸರ್ಕಾರ ಮಂಪರಿನ [illegible] ಸಾರದು. ಕಠಿಣ ಕ್ರಮಕ್ಕೆ ಮ[illegible] ಬುದ್ಧಿವಂತಿಕೆಯನ್ನು ಕರ್ನಾಟಕದಜನ ಅರಿಯುತ್ತಿದ್ದಾರೆ. ಉಮಾಭಾರತಿ ಬಂಧನವಾದರೆ ಇಡೀ ಕರ್ನಾಟಕವೇ ಹತ್ತಿ ಉರಿಯುತ್ತದೆ ಎಂದೆಲ್ಲಾ ಭ್ರಾಮಕವಾಗಿ ಕಿರಿಚಾಡುತ್ತಿದ್ದ ಬಿಜೆಪಿಯು ಕರ್ನಾಟಕ ಬಂದ್‌ಗೆ ಕರೆ ನೀಡಿದಾಗ ಬಂದ್‌ನ್ನು ಜನ ತಿರಸ್ಕರಿಸಿದರು. ಅಡ್ವಾಣಿ-ವಾಜಪೇಯಿಗಳು ಬಂದರೆ ಜನಸಾಗರವೇ ಸೇರುವುದೆಂಬ ಲೆಕ್ಕಾಚಾರವೂ ಕುಸಿಯಿತು. ಇನ್ನು ಚುನಾವಣಾಪೂರ್ವದ ಅಡ್ವಾಣಿ ಯಾತ್ರೆಗೆ ಒದಗಿದ ಗತಿ ಗೊತ್ತೇ ಇದೆ. ಆದ್ದರಿಂದ ನಾಡಿನ ಜನತೆಯೂ ಸಹ ಕೋಮುವಾದಿಗಳ ಆರ್ಭಟಕ್ಕೆ - ತಂತ್ರಕ್ಕೆ ಸೊಪ್ಪು ಹಾಕದೆ ತಿರಸ್ಕರಿಸಬೇಕು. ಶಾಂತಿ-ಸೌಹಾರ್ದತೆ ಕಾಯ್ದುಕೊಳ್ಳಬೇಕು.

ಉತ್ತರ ಕರ್ನಾಟಕದಲ್ಲಿ ನ್ಯಾಯಪೀಠವೋ - ಪ್ರತ್ಯೇಕ ರಾಜ್ಯವೋ?

ಈ ವಾರ ಕರ್ನಾಟಕ ಒಂದು ನೋಟ

ಎಸ್.ವೈ.ಗುರುಶಾಂತ್

ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆಯನ್ನು ಮುಖ್ಯನ್ಯಾಯಮೂರ್ತಿ ಎನ್.ಕೆ.ಜೈನ್ ರವರು ನಿರಾಕರಿಸಿ ಪತ್ರ ಬರೆದಿರುವುದು ಅಸಮಂಜಸ, ಅಸಮರ್ಥನೀಯ. ಇದನ್ನು ಜನತೆಯ ಅಗತ್ಯತೆಯಾಗಿದೆ. ನ್ಯಾಯಾಂಗ ಮತ್ತು ಕಾರ್ಯಾಂಗಗಳು ಪರಿಗಣಿಸಬೇಕು. ಇದೇ ಸಂದರ್ಭದಲ್ಲಿ ನ್ಯಾಯಪೀಠದ ಪ್ರಶ್ನೆ ಎತ್ತಿ - ಪ್ರತ್ಯೇಕ ರಾಜ್ಯದ ಬೇಡಿಕೆಯನ್ನು ಕೆಲವರು ಪ್ರಸ್ತಾಪಿಸಿರುವುದು ಖಂಡನೀಯ. ಪೀಠದ ಬೇಡಿಕೆ ಕೇವಲ ಉತ್ತರಕರ್ನಾಟಕದಷ್ಟೇ ಅಲ್ಲ ಅದು ಸಮಸ್ತ ಕರ್ನಾಟಕದ ಜನತೆಯದ್ದು ಕೂಡ...


ಈ ಸಲ ಕುತೂಹಲವಿತ್ತು. ದಶಕಗಳ ಕಾಲ ನೆನೆಗುದಿಗೆ ಬಿದ್ದಿದ್ದ, ವಿವಾದದಲ್ಲಿ ಸುಸ್ತುಹೊಡೆದಿದ್ದ ಪ್ರಶ್ನೆಯೊಂದಕ್ಕೆ ಇತ್ಯರ್ಥಕಾಣುವ ಕಾತುರ, ನಿರೀಕ್ಷೆ ಇದ್ದವು. ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಎನ್.ಕೆ.ಜೈನ್‌ರವರು ಬೆಂಗಳೂರಿನ ಆಚೆಗೆ ಉತ್ತರ ಕರ್ನಾಟಕ, ಹೈದರಬಾದ್ ಕರ್ನಾಟಕ ಪ್ರದೇಶದಲ್ಲಿ ಇನ್ನೊಂದು ಪೀಠಸ್ಥಾಪನೆಗೆ ಸಂಬಂಧಿಸಿ ಸರ್ಕಾರಕ್ಕೆ ಪತ್ರ ಬರೆದರೆಂದು ಸುದ್ದಿ ಹೊರಬಂದಾಗ ನ್ಯಾಯಾಂಗ ವಲಯದಲ್ಲೇ ಜನತೆಯಲ್ಲಿ ಇಂತಹ ಭಾವನೆ ಮೂಡಿದ್ದು ಸಹಜ. ಆದರೆ ಅವರು ಜನರ ನಿರೀಕ್ಷೆ, ಅಗತ್ಯಗಳನ್ನು ಪರಿಗಣಿಸಲಿಲ್ಲ. ಹೈ.ಕಾ.ದಲ್ಲಿ ಪೂರ್ಣಪೀಠ ಸ್ಥಾಪನೆ ಅನಗತ್ಯ, ಅಸಾಧ್ಯ ಎಂದು ನಿರಾಕರಿಸಿದರು. ಹೀಗಿರುವಾಗ ತೀಕ್ಷ್ಣ ಪ್ರತಿಕ್ರಿಯೆಯೂ ಎದ್ದು ಬಂದಿದೆ. ಈ ಭಾಗದಲ್ಲಿ ಎಲ್ಲೆಡೆ ಹೈಕೋರ್ಟ್ ಪೀಠಕ್ಕಾಗಿ ಚಳುವಳಿ ನಡೆದಿದೆ. ನ್ಯಾಯವಾದಿಗಳು ಅವರವರ ಸಂಘಗಳ ಮೂಲಕ ನಿರ್ಣಯ ಕೈಗೊಂಡು ಆಗ್ರಹಿಸಿದ್ದಾರೆ. ಕೋರ್ಟ್‌ನ ಕಲಾಪ ಬಹಿಷ್ಕರಿಸಿದ್ದಾರೆ. ಇನ್ನೂ ಇದು ಅತಿರೇಕಕ್ಕೆ ವಾಲಿ ಪ್ರತ್ಯೇಕ ರಾಜ್ಯದ ಬೇಡಿಕೆ ಇಟ್ಟು, ಧ್ವಜವನ್ನು ರಚಿಸಿ, ಹಾರಿಸಿ ಅತಿರೇಕಕ್ಕೆ ಹೋಗಿದ್ದಾರೆ.

ಈ ಭಾಗದಿಂದ ಹೈಕೋರ್ಟ್‌ಗೆ ಬರುವ ಮೊಕದ್ದಮೆಗಳ ಸಂಖ್ಯೆ ಕಡಿಮೆ. ಆದ್ದರಿಂದ ಪೀಠ ಸ್ಥಾಪನೆ ಅಸಾಧ್ಯ ಎಂದು ನ್ಯಾಯಮೂರ್ತಿ ಜೈನ್ ಅಭಿಪ್ರಾಯ ಪಟ್ಟಿದ್ದಾರೆ. ನಿರಾಕರಣೆಯ ಕಾರಣ ಅಸಮಂಜಸವಾದುದು. ಹೈಕೋರ್ಟ್‌ಗೆ ಹೋಗುವ ಮೊಕದ್ದಮೆಗಳ ಸಂಖ್ಯೆ ನ್ಯಾಯಮೂರ್ತಿಯವರು ಹೇಳುವಂತೆ ತೀರಾ ಕಡಿಮೆಯೇನಿಲ್ಲ. ಕೆಳಕೋರ್ಟ್‌ನಿಂದ ನೇರವಾಗಿ ಹೈಕೋರ್ಟ್‌ಗೆ ಹೋಗುವ ಅವಕಾಶ-ಅನಿವಾರ್ಯತೆ ಇರುವುದರಿಂದ ಅಲ್ಲಿ ಬೆಂಗಳೂರಿನಿಂದ ಹೆಚ್ಚು ಮೊಕದ್ದಮೆ ಇರುವುದನ್ನು ಬಿಟ್ಟರೆ ಉತ್ತರ ಕರ್ನಾಟಕದ ಮೊಕದ್ದಮೆಗಳು ಅರ್ಧಕ್ಕಿಂತ ಹೆಚ್ಚು ಎನ್ನುತ್ತಾರೆ ಈ ಭಾಗದ ವಕೀಲರು. ಹೈಕೋರ್ಟ್ ಪೀಠ ಸ್ಥಾಪನೆಗೆ ಮೊಕದ್ದಮೆಗಳ ಸಂಖ್ಯೆಯನ್ನು ಪರಿಗಣಿಸುವುದು ಒಂದಂಶ ಎಂದರೂ ಅದೇ ಪ್ರಮುಖ ಕಾರಣವಾಗಬಾರದು. ಹೈಕೋರ್ಟ್‌ಗೆ ತಲುಪುವ ಪ್ರಾದೇಶಿಕ ದೂರ, ಸಾಮಾನ್ಯ ಕಕ್ಷಿದಾರನಿಗೆ ತಗಲುವ ವೆಚ್ಚ, ಇನ್ನಿತರೆ ಅನಾನುಕೂಲಗಳೂ ಸಹ ಗಂಭೀರವಾಗಿ ಪರಿಗಣಿಸಬೇಕಾದುದು. ಹೀಗಾಗಿ ಉತ್ತರ ಕರ್ನಾಟಕ ಅಥವಾ ಹೈ.ಕ. ಪ್ರದೇಶದಲ್ಲಿ ಇಂತಹ ಪೀಠದ ಸ್ಥಾಪನೆಯು ಜನಸಾಮಾನ್ಯರಿಗೆ ಹೆಚ್ಚು ಅನುಕೂಲವಾಗಲಿದೆ ಮಾತ್ರವಲ್ಲ ನ್ಯಾಯ ನೀಡಿಕೆ ಜನರಿಗೆ ಹತ್ತಿರವಾಗಲಿದೆ. ಅದರಲ್ಲಿಯೂ ಪ್ರಾದೇಶಿಕ ಅಸಮಾನತೆ-ಸಾಂಸ್ಕೃತಿಕ ಭಿನ್ನತೆಗಳು ದಟ್ಟವಾಗಿರುವಾಗ ಹೈಕೋರ್ಟ್ ಪೀಠ ಸ್ಥಾಪನೆ ಅತ್ಯಗತ್ಯ. ಈ ವಾಸ್ತವ ಸಂಗತಿಗಳನ್ನು ಮುಖ್ಯ ನ್ಯಾಯಮೂರ್ತಿಗಳು ಪರಿಗಣಿಸದೇ ಹೋದುದು ಸರಿಯಲ್ಲ.

ಈ ಹಿಂದೆಯೂ ಇಂತಹ ಪ್ರಶ್ನೆ-ಪ್ರಸ್ತಾಪಗಳು ಬಂದಿವೆ. ಕೆಲವು ಮುಖ್ಯ ನ್ಯಾಯಮೂರ್ತಿಗಳು ಅತ್ಯಗತ್ಯ ಎಂದು ಭಾವಿಸಿದ್ದರೆ, ನ್ಯಾಯಮೂರ್ತಿ ಭರೂಚ ಸಮಿತಿಯೂ ಸಹ ಇಂತಹ ಪೀಠದ ಅಗತ್ಯತೆ ಪ್ರತಿಪಾದಿಸಿತ್ತು. ಬಳಿಕ ಪೀಠ ಸ್ಥಾಪನೆಯ ಪೂರ್ವಭಾವಿ ಅಗತ್ಯಗಳು, ಹಣಕಾಸು ಪ್ರಶ್ನೆ ಬಂದು ಅದನ್ನು ಪೂರೈಸಲು ಸರ್ಕಾರ ಮುಂದಾಗಿತ್ತು. ಆದರೆ ಈ ಪೀಠ ಸ್ಥಾಪಿತವಾಗಬೇಕಾದ ಸ್ಥಳದ ವಿವಾದ ಎದ್ದು ಅದು ಗುಲ್ಬರ್ಗವೋ, ವಿಜಾಪುರವೋ, ಧಾರವಾಡವೋ ಎಂದು ಗೊಂದಲ ಏರ್ಪಟ್ಟಾಗ, ಮೊದಲು ಪೀಠ ಸ್ಥಾಪಿಸುವ ತೀರ್ಮಾನವಾಗಲಿ, ನಂತರ ಸಹಮತದಿಂದ ಸಮಸ್ಯೆ ಬಗೆಹರಿಸಿಕೊಳ್ಳೋಣ ಎಂಬ ನಿಲುವಿಗೆ ಎಲ್ಲಾ ಪ್ರದೇಶಗಳ ಚಳುವಳಿಗಾರರು ಅಭಿಪ್ರಾಯಕ್ಕೆ ಬಂದಿದ್ದರು. ಆದರೆ ಇದಕ್ಕೆಲ್ಲಾ ಇತಿಶ್ರೀ ಹಾಡಿದ್ದಾರೆ ಮುಖ್ಯನ್ಯಾಯಮೂರ್ತಿಗಳು.

ಒಂದೆಡೆ ನ್ಯಾಯಮೂರ್ತಿಗಳ ಪತ್ರ, ಇನ್ನೊಂದೆಡೆ ಚಳುವಳಿ ಸ್ಥಿತಿಯಿಂದ ಉಂಟಾಗಿರುವ ಬಿಕ್ಕಟ್ಟಿಗೆ ಪರಿಹಾರ ರೂಪಿಸಲು ಮುಖ್ಯಮಂತ್ರಿಗಳು ಈ ಭಾಗದ ವಕೀಲರು, ಪ್ರತಿನಿಧಿಗಳ ಸಭೆಯನ್ನು ಕರೆದಿದ್ದರು. ದೇಶದಲ್ಲಿ ಈಗಾಗಲೇ ಉತ್ತರ ಪ್ರದೇಶ, ಬಿಹಾರ, ತಮಿಳುನಾಡು ಮತ್ತು ಮಹಾರಾಷ್ಟ್ರಗಳಲ್ಲಿ ಇಂತಹ ಪೀಠಗಳಿವೆ. ಹೀಗಿರುವಾಗ ಕರ್ನಾಟಕದಲ್ಲಿಯೂ ಜನತೆಯ ಅನುಕೂಲಕ್ಕಾಗಿ ಅಂತಹಪೀಠ ಸ್ಥಾಪಿಸುವುದು ಅಸಾಧ್ಯವೇನಲ್ಲ. ಅದು ಜಿದ್ದುಗಟ್ಟಿದ ವಿಚಾರವಾಗಬೇಕಿಲ್ಲ. ಈ ಅಂಶಗಳನ್ನು ಪ್ರಧಾನಿಗೆ, ಕೇಂದ್ರಕ್ಕೆ ಮನವರಿಕೆ ಮಾಡಿಕೊಡಲು ಒಂದು ನಿಯೋಗವೂ ತೆರಳುವ ಪ್ರಸ್ತಾಪವಿದೆ. ಈ ವಿಷಯದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗ ಪರಸ್ಪರ ಸಹಕಾರದಿಂದ ಜನರ ಅಗತ್ಯ ಪರಿಗಣಿಸಿ ಹೆಜ್ಜೆ ಇಡಬೇಕು.

ಇದೇ ಸನ್ನಿವೇಶದಲ್ಲಿ ಉತ್ತರ ಕರ್ನಾಟಕದ (ಹೈ.ಕ. ಅಲ್ಲ ಈ ಬಾರಿ) ಧಾರವಾಡ,



ಬೆಳಗಾವಿಯಂತಹ ಜಿಲ್ಲೆಗಳಲ್ಲಿ ಪೀಠ ಸ್ಥಾಪನೆಗೆ ನಿರಾಕರಿಸಲಾಗಿದೆಯೆಂದು ಪ್ರತ್ಯೇಕ ರಾಜ್ಯದ ಬಾವುಟ ಹಾರಿಸಿ ಬೇಡಿಕೆ-ಘೋಷಣೆ ಮಾಡಿರುವುದು ಖಂಡನೀಯ. ಪ್ರತ್ಯೇಕ ರಾಜ್ಯವಾದರೆ ಪ್ರತ್ಯೇಕ ಹೈಕೋರ್ಟ್ ಆಗುತ್ತದೆಎಂಬ ವಾದ ಬಾಲಿಶ-ಅಪಾಯಕಾರಿ. ಇಂತಹ ಛಿದ್ರಕಾರಿ ಬೇಡಿಕೆಗಳನ್ನು ಎಲ್ಲರೂ ಒಕ್ಕೊರಲಿನಿಂದ ವಿರೋಧಿಸಬೇಕು. ಆಡಳಿದ ತಾರತಮ್ಯದ ವಿರುದ್ಧ ವಿಶಾಲವಾದ ಪ್ರಜಾಸತ್ತಾತ್ಮಕ ಹೋರಾಟ ಒಗ್ಗಟ್ಟಿನ ಸಂಘರ್ಷ ಬೆಳೆಯಬೇಕು.

ಆದ್ದರಿಂದ ಸರ್ಕಾರ ಇಂತಹ ಅನಾಹುತಕಾರಿ ಪ್ರವೃತ್ತಿಗಳು ಬೆಳೆಯದಂತೆ, ಜನರ ಪ್ರಶ್ನೆಗೆ ಸ್ಪಂದಿಸಲು ಮುಂದಾಗಬೇಕು. ನ್ಯಾಯಪೀಠದ ಸ್ಥಾಪನೆ ಕೇವಲ ಉ.ಕರ್ನಾಟಕದವರ ಬೇಡಿಕೆಯೆನ್ನದೇ ರಾಜ್ಯದ ಜನರ ಪ್ರಜಾಸತ್ತಾತ್ಮಕ ಬೇಡಿಕೆ ಎಂಬುದನ್ನು ಗಮನಿಸಬೇಕು.

ನೂರು ಅವಕಾಶ ಕಳೆದುಕೊಂಡ ಧರಮ್ ಸರಕಾರ

ನೂರು ದಿನಗಳನ್ನು ಪೂರೈಸಿದ ಧರಂಸಿಂಗ್ ಸರ್ಕಾರ ಸಾಗಿದ ಹಾದಿ ಯಾವುದು? ಇರಿಸಿದ ಹೆಜ್ಜೆಗಳೇನು? ಒಂದು ನೋಟ.

ಧರಮ್‌ಸಿಂಗ್ ಸರಕಾರ ನೂರು ದಿನಗಳನ್ನು ಪೂರೈಸಿತು ಎನ್ನುವುದಕ್ಕಿಂತ ಜನತೆಗೆ ಒಳಿತು ಮಾಡಬಹುದಾಗಿದ್ದ ನೂರು ಅವಕಾಶಗಳನ್ನು ಕಳೆದುಕೊಂಡಿರುವುದೇ ಹೆಚ್ಚು ಸೂಕ್ತ ಎನ್ನಿಸುತ್ತದೆ.

ಹಾಗೆ ನೋಡಿದರೆ ನೂರು ದಿನಗಳು ಸರಕಾರವೊಂದರ ಸಾಧನೆ - ವೈಫಲ್ಯಗಳನ್ನು ಪೂರ್ಣವಾಗಿ ಮೌಲ್ಯಮಾಪನ ಮಾಡಲು ಸಾಕಾಗುವುದಿಲ್ಲ. ಆದರೆ ನೂರು ದಿನಗಳಲ್ಲಿ ಚಲಿಸಿದ ಹಾದಿ, ಇಟ್ಟ ಹೆಜ್ಜೆ ಭವಿಷ್ಯದ ಪರಿಣಾಮವನ್ನು ಗ್ರಹಿಸಲು ಸಹಾಯಕವಾಗುತ್ತದೆ. ಸರಕಾರ ರಚಿಸಲು ಯಾರಿಗೂ ಬಹುಮತ ನೀಡದ ಮತದಾರರ ತೀರ್ಪಿನಿಂದಾಗಿ, ಕೋಮುವಾದಿ ಶಕ್ತಿಗಳು ಅಧಿಕಾರ ಹಿಡಿಯದಂತೆ ತಡೆಯಲೆಂದೇ ಅನಿವಾರ್ಯವಾಗಿ ಅಸ್ತಿತ್ವಕ್ಕೆ ಬಂತು ಕಾಂಗ್ರೆಸ್ ಮತ್ತು ಜಾತ್ಯತೀತ ಜನತಾ ದಳದ ಸರಕಾರ. ಒಂದೆಡೆ ಹಿಂದಿನ ಕೃಷ್ಣರ ಕಾಂಗ್ರೆಸ್ ಸರಕಾರ ಅನುಸರಿಸಿದ ಜನದ್ರೋಹಿ, ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಮತ್ತೊಂದೆಡೆ ಕೋಮುವಾದದ ಅಪಾಯ ಹಾಗೂ ರಾಜೀತನದ ವಿರುದ್ಧ ಜನಾದೇಶವಿತ್ತು. ಈ ಜನಾದೇಶವನ್ನು ಪಾಲಿಸುವ ಮಹತ್ತರ ಹೊಣೆ ಈ ಮೈತ್ರಿಕೂಟದ ಹೆಗಲ ಮೇಲಿತ್ತು. ಆರಂಭದಲ್ಲಿ ಸರಕಾರ ರಚನೆಯ ವಿಳಂಬ, ಮುಖ್ಯಮಂತ್ರಿ-ಮಂತ್ರಿ ಖಾತೆಗಳ ಹಂಚಿಕೆಯ ಕೊಂಚ ರಂಪಾಟ ಕಂಡು ಜನತೆ ಅಸಹನೆ ವ್ಯಕ್ತಪಡಿಸಿದರೂ ಮೊದಲಾದ ಸಂದರ್ಭದಲ್ಲಿ ಪರಿಹಾರದ ನಿರೀಕ್ಷೆಗೆ ಕಾದರು.

ರಾಜ್ಯಪಾಲರ ಭಾಷಣವಾಯಿತು, ಬಜಟ್ ಅಧಿವೇಶನವೂ ಮುಗಿಯಿತು, ಜನರ ನಿರೀಕ್ಷೆಗಳನ್ನು ಈಡೇರಿಸುವ ಒಂದೆರಡು ಇಂಗಿತ ಪ್ರಸಂಗ ಬಿಟ್ಟರೆ ಉಳಿದಂತೆ ಈಡೇರದ ಆಸೆಗಳೆ ಅಧಿಕ ಎಂಬುವುದು ಕಂಡುಬಂತು. ಸತತ ಬರಗಾಲ, ಸಾಲದ ಹೊರೆ - ಬೆಳೆ ಹಾನಿ, ಆತ್ಮಹತ್ಯೆ, ಕೆಲಸವಿಲ್ಲದ ಕಂಗಾಲುತನ, ಕೈಗಾರಿಕಾ ಬಿಕ್ಕಟ್ಟು, ಮಸುಕಾದ ಬದುಕು.... ಇಂತಹ ಜಲ್ವಂತ ಸಮಸ್ಯೆಗಳಿಂದ ಬಸವಳಿದ ಜನತೆಗೆ ಪರಿಹಾರ ದಕ್ಕಲಿಲ್ಲ. ಬಜಟ್ ಸಂದರ್ಭದಲ್ಲಿ ಜನಾದೇಶ ಪಾಲಿಸುವ ಒಂದು ಅವಕಾಶ ತಪ್ಪಿಸಿಕೊಂಡಿತು ಈ ಮೈತ್ರಿಕೂಟದ ಸರಕಾರ. ಈ ಮೈತ್ರಿ ಕೂಟ ಸರಕಾರದ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮ' ಎನ್ನುವ 'ಸರಕಾರಿ ಕಾರ್ಯಕ್ರಮ'ವೊಂದನ್ನೇನೋ ಅಂಗೀಕರಿಸಿತು. ಆದರಲ್ಲಿ ಪೂರ್ಣ ರಾಜಕೀಯ ಇಚ್ಛಾಶಕ್ತಿಯಿಲ್ಲದೆ, ಬೇಕೆನಿಸಿದಾಗ ಪ್ರಸ್ತಾಪಿಸಲು 'ನಮಗೂ ಒಂದಿದೆ' ಎನ್ನುವ 'ಉಪ್ಪಿನಕಾಯಿ' ಕಾರ್ಯಕ್ರಮವಾದ್ದರಿಂದ ಮತ್ತೆ ಅದರತ್ತ ನೋಡುವ ಪ್ರಮೇಯ ಸರಕಾರದ ಭಾಗೀದಾರರಿಗೆ ಇನ್ನೂ ಬಂದಿಲ್ಲ. ಮೇಲಾಗಿ ಇದರ ಜಾರಿಗೆ ಉತ್ತರದಾಯಿತ್ವವೇ ಇಲ್ಲ. ಪರಿಸೇವಿಸಲು ಅಂತಹ ಒಂದು ತಾಂತ್ರಿಕ ವ್ಯವಸ್ಥೆ, ಪಕ್ಷಗಳಿಂದ ಆಗಲಿ, ಸರಕಾರದಿಂದ ಆಗಲಿ, ಇಲ್ಲವೇ ಇಲ್ಲ. ಈ ಕಾರ್ಯಕ್ರಮ ಜಾರಿಯಾಗದೇ ಇದ್ದರೆ, ಸರಕಾರಕ್ಕೆ ಲಗಾಮು ಹಾಕಲು, ತಿದ್ದಿ ನಡೆಸುವ ರಾಜಕೀಯ ಪಾತ್ರದ ಅವಕಾಶದಿಂದ ದೂರವೇ ಉಳಿಯಿತು.


ಈ ವರುಷ ಮೂರು ವರ್ಷಗಳ ಬರಗಾಲದ ನಂತರ ರಾಜ್ಯದ ಬಹುತೇಕ ಕಡೆಗಳಲ್ಲಿ ಉತ್ತಮ ಮಳೆಯಾಯಿತು. ಕೃಷಿಕರು ಉಲ್ಲಸಿತರಾದರು. ಬದುಕಿಕೊಳ್ಳುವ ಆಸೆ ಚಿಗುರಿತು. ನದಿಗಳು ಸಹ ತುಂಬಿ ಹರಿದು ಉದ್ಭವವಾಗಬಹುದಿದ್ದ ನೆರೆ-ಹೊರೆ ಯೊಂದಿಗಿನ ವಿವಾದಗಳು ಮುಂದೂಡಲ್ಪಟ್ಟವು. ಬಿಜೆಪಿ ವಿರೋಧ ಪಕ್ಷವಾಗಿದ್ದರೂ ಅದು ಕಮರಿದ ಕಮಲವಾಗಿತ್ತು, ಮಿಂಚಲು ಯತ್ನಿಸಿದರೂ ಜನರ ಮನದೊಳಗೆ ಪ್ರವೇಶಿಸಲಾಗದೆ ಗಿರಿಕಿ ಹೊಡೆಯುತ್ತಿತ್ತು. ಇಂತಹ ಸಂದರ್ಭವನ್ನು ಸಮರ್ಥವಾಗಿ ಬಳಸಿ ಕೋಮುವಾದಿಗಳನ್ನು ಸದೆಬಡೆಯಬಹುದಿತ್ತು. ಈಗಲೇ ಪೂರ್ಣ ಬಡಿಯಲಾಗದಿದ್ದರೂ ಜನರ ಮನಸ್ಸು ಗೆದ್ದು ಅದಕ್ಕೊಂದು ಮೂಲೆಯಲ್ಲಿ ಸ್ಥಾನ ಕಾಣಿಸಬಹುದಿತ್ತು. ಕಾಣಿಸಬಹುದಿತ್ತು ನಿಜ! ಆದರೆ ಅದಕ್ಕೆ ರಾಜಕೀಯ ಇಚ್ಛಾಶಕ್ತಿ, ದೃಢವಾದ ಜನಪರ ನೀತಿ ಬೇಕಲ್ಲ. ಹ್ ೋಗ್ಲಿ ಒಂದು ಬಿಗಿಯಾದ ಆಡಳಿತ ಕೊಡಲಾದರೂ ಆಯಿತೆ? ಇನ್ನು ಪೂರ್ಣ ಮಂತ್ರಿಮಂಡಲವೇ ರಚನೆಯಾಗಲಿಲ್ಲ.



ಕೃಷ್ಣ ಡಿ.ಕೆ.ಸಿ. ಯಂತಹವರ ಆಂತರಿಕ ಶನಿಕಾಟ ತಪ್ಪಲಿಲ್ಲ. ಮಂತ್ರಿಮಂಡಲದ ವಿಸ್ತರಣೆಗೂ ಹೈ ಕಮಾಂಡ್ ಒಪ್ಪಲಿಲ್ಲ. ಕೇವಲ ಹತ್ತು ಜನ ಸಚಿವರೇ ಎಲ್ಲ ಖಾತೆಗಳನ್ನು ನಿಭಾಯಿಸ ಬೇಕಾಯಿತು. ಮುಖ್ಯ ಮಂತ್ರಿಗಳೇ ಎಲ್ಲಾದರ ಉಸ್ತುವಾರಿ ಯಾದರು. ಜನರ ಕರೆ ಮೊರೆ ಕೇಳುವವರಿಲ್ಲವಾಯಿತು. ಹೀಗಾಗಿ ಜನಪರ ನೀತಿಗಳು ರಾಜಕೀಯ ಆಡಳಿತಕ್ಕಿಂತ ಅಧಿಕಾರಶಾಹಿಗಳ ಆಟವೇ ನಿತ್ಯದ ಆಟವಾಯಿತು. ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಿ ಭಿನ್ನತೆಯ ಛಾಪು ಒತ್ತುವ ಚಾನ್ಸು ತಪ್ಪಿ ಹೋಗಿ ಹಾಗೂ - ಹೀಗೂ ಕಡಾಣಿ ತೆಗೆದ ಚಲಿಸುವ ಚಕ್ರದ ಬಂಡಿಯಾಗಿದೆ.

ಎಸ್.ವೈ.ಗುರುಶಾಂತ್

ಅಂತೆಯೇ ಈ ಸರಕಾರ ಅಧಿಕಾರಕ್ಕೆ ಬಂದ ನಂತರ ಎದುರಿಸಿದ ಸಮಸ್ಯೆಗಳು ಅನೇಕ. ಗಹನ - ಗಂಭೀರ ನಿಜ. ಖಾಲಿ ಇದ್ದ ಬೊಕ್ಕಸಕ್ಕೆ ಚೇತರಿಕೆ ನೀಡಬೇಕಿತ್ತು. ಹಕ್ಕಿ ಹಗರಣ ಹೊರಬಂತು. ಇಂದಿನ ಸರಕಾರದ ಅವಧಿಯ ಭೂಹಗರಣಗಳು ನಕಲಿ ಬೀಜ ಗೊಬ್ಬರದ ಹಾವಳಿ ತಲ್ಲಣಗೊಳಿಸಿದ



ವೃತ್ತಿಶಿಕ್ಷಣದ ಸಿಇಟಿ ಬಿಕ್ಕಟ್ಟು ಮತ್ತೆ ಸ್ಫೋಟಿಸಿದ ತೆಲಗಿ-ಸಂಗ್ರಾಂ ಸಿಂಗ್ ಹಗರಣ, ಹೈಕೋರ್ಟ್ ಪೀಠದ ಪ್ರಶ್ನೆ, ಕ್ರಿಮಿನಲ್ ಕೇಸ್‌ನಲ್ಲಿದ್ದ ಉಮಾ ಭಾರತಿಯ ಝಂಡಾ ಪ್ರಹಸನ, ರಾಜ್ಯದ ಹಲವೆಡೆ ಕೋಮುಗಲಭೆಗಳ ಪುನರಾರಂಭ... .. ಇಂತಹ ಪ್ರಶ್ನೆಗಳು ಎದುರಾದಾಗ ಧರಂ ಸರಕಾರ ಹೇಗೆ ಸ್ಪಂದಿಸಿತು, ಹೇಗೆ ಎದುರಿಸಿತು? ಈ ಪ್ರಶ್ನೆಗಳು ಎದ್ದಾಗ ಸರ್ಕಾರ ಮುಖಾಮುಖಿಯಾಗಲಿಲ್ಲ. ಒಂದನ್ನು ದೃಢವಾಗಿ ಎದುರಿಸಿ ಜನರ ಪಕ್ಷಪಾತಿ ಎನಿಸಲಿಲ್ಲ. ಬಡಜನರ ಅನ್ನ ಕದ್ದ ಮೂವತ್ತು ಸಾವಿರಕ್ಕೂ ಅಧಿಕ ಮೊತ್ತದ ಅಕ್ಕಿ ಹಗರಣದ ಭಾರೀ ಹೆಗ್ಗಣಗಳನ್ನು ಬಲಿ ಹಾಕಲಿಲ್ಲ, ರಾಷ್ಟ್ರ ಮಟ್ಟದ ವಿವಾದವನ್ನು ಸಿಬಿಐನ ತನಿಖೆಗೆ ಒಪ್ಪಿಸದೆ ಭಾರೀ ಬಿಲ ಮುಚ್ಚಲಾಯಿತು. ದೇವೇಗೌಡರು ಹೊರಗೆಳೆದ ಭೂಹಗರಣಗಳಿಗೂ ಇದೇ ಗತಿಯಾಯಿತು. ಬಿಕೆಸಿ, ಕೃಷ್ಣರಾದಿಯಾಗಿ ಭಾರೀ ಕುಳಗಳೇ ಇದ್ದ ಹಗರಣ ಅಧಿಕಾರಿಗಳ ಮಟ್ಟದ ತನಿಖೆಗೆ ತಳ್ಳಲ್ಪಟ್ಟಿತು. ರಾಜ್ ಬಿಡುಗಡೆಗಾಗಿ ವೀರಪ್ಪನ್‌ಗೆ ಸ್ಟಾಂಪ್ ಹಗರಣದ ಕುಖ್ಯಾತಿಯ ತೆಲಗಿಯಿಂದ ಇಪ್ಪತ್ತು ಕೋಟಿ ಪಡೆಯಲಾದದ್ದು, ಅದರಲ್ಲಿ ಬಿಕೆಸಿ, ಖರ್ಗೆ, ರೋಷನ್‌ಬೇಗ್ ಭಾಗಿತ್ವ ಹೊರಬಂದರೂ ಅವರನ್ನು ದೂರ ಇಡಲಿಲ್ಲ. ಖರ್ಗೆ ಸಚಿವ ಹೊಣೆಯಿಂದ ಹೊರಬರಲಿಲ್ಲ. ಸಿಇಟಿ ಬಿಕ್ಕಟ್ಟನ್ನು ಆರಂಭದಲ್ಲೆ ಪರಿಹಾರ ಸೂತ್ರ ರೂಪಿಸದೆ, ಸಮಸ್ಯೆ ಉಲ್ಬಣಗೊಳ್ಳಲು ಬಿಟ್ಟು, ಬಾರೀ ಗೊಂದಲ ಗೋಜಲು ವಿದ್ಯಾರ್ಥಿಗಳ ಆತ್ಮಹತ್ಯೆ ನಡೆದವು. ಆದರೂ ಖಾಸಗಿ ಸಂಸ್ಥೆಗಳ ಅಟ್ಟಹಾಸಕ್ಕೆ ತಡೆಯಿಲ್ಲವಾಯಿತು. ಸುಗ್ರೀವಾಜ್ಞೆ ತಂದರೂ ಅದು ಹೆಸರಿಗೆ ಮಾತ್ರ ಎಂತಾಗಿ ವಿದ್ಯಾರ್ಥಿ ಪೋಷಕರಿಗೆ ಇನ್ನೂ ಮಾರಕವಾದ ಆಡಳಿತ ಮಂಡಳಿಗಳ ಕೈಮೇಲಾದ ತ್ಯಾಪೇಸೂತ್ರಕ್ಕೆ ಬರಲಾಯಿತು. ಪ್ರತಿಭಾನ್ವಿತ, ಸಾಮಾನ್ಯ ವಿದ್ಯಾರ್ಥಿಗಳ ಭವಿಷ್ಯಕ್ಕೆ ಬೆದರಿಕೆ ಬಂಡೆಯಾಯಿತು. ಖಾಸಗೀಕರಣದ ಪರವಾಗಿರುವ ಈ ಸರಕಾರ ಶಿಕ್ಷಣದ ದಂಧೆಗಾರರರನ್ನು ಮಣಿಸುವ ಇಚ್ಛಾಶಕ್ತಿ ತೋರದೆ, ವಿದ್ಯಾರ್ಥಿಗಳ ಶಿಕ್ಷಣದ ರಕ್ಷಣೆಯ ಅವಕಾಶ ತಪ್ಪಿಸಿಕೊಂಡಿತು. ಉಮಾ ಭಾರತಿ ಪ್ರಕರಣವನ್ನು ಪೂರ್ವಸಿದ್ಧತೆಯಿಲ್ಲದೆ, ದೃಢವಾಗಿ ಎದುರಿಸುವ ಮನಸ್ಸು ಇಲ್ಲದೆ, ಕೋಮುವಾಗಿಳನ್ನು ಹಣಿಯುವ ಅವಕಾಶವನ್ನು ಪೂರ್ಣವಾಗಿ ಬಳಸಲಾಗದೆ ಹೋಯಿತು. ಅಪರಾಧಿಗಳೇ ನ್ಯಾಯವಂತರು ಎಂಬ ಭಾವನೆ ಸೃಷ್ಟಿಸಲು ಇಂಬು ದೊರೆಯಿತು..., ಮೂರು ರೂಪಾಯಿಗೆ ಕೆ.ಜಿ. ಅಕ್ಕಿ ಸ್ವಾಗತಾರ್ಹವಾದರೂ ಹಳದಿ ಕಾರ್ಡ್ ವಿತರಿಸದೆ ನೀಡಲಾದ ಚೀಟಿಗಳನ್ನು ರದ್ದು ಮಾಡುವ ಸೂಚನೆ ಬಡಜನರನ್ನು ಗೆಲ್ಲುವ ಅವಕಾಶ ತಪ್ಪಿಸುತ್ತದೆ. ನಕಲಿ ಬೀಜ-ಗೊಬ್ಬರ ಮಾರಾಟಗಾರರನ್ನು ಶಿಕ್ಷಿಸಿದ್ದರೆ, ಬರದ ಕಾಮಗಾರಿ ಆರಂಭಿಸಿದ್ದರೆ, ಸಾಲ ವಸೂಲಾತಿ ನಿಲ್ಲಿಸಿ ಸೌಲಭ್ಯ ಹೆಚ್ಚಿಸಿದ್ದರೆ ರೈತಾಪಿ-ಕೃಷಿ ಕೂಲಿಕಾರರನ್ನು ಗೆಲ್ಲಬಹುದಿತ್ತು. ಬದಲಾಗಿ ವಿದ್ಯುತ್, ಸಾರಿಗೆ, ಶಿಕ್ಷಣದ ಸಬ್ಸಿಡಿ ಕಡಿತ, ಹುದ್ದೆ ರದ್ದತಿಯಂತಹ ಪ್ರಸ್ತಾಪಗಳನ್ನೂ ಈ ಸರಕಾರ ಇರಿಸಿದೆ.

ಮುಖ್ಯವಾಗಿ ಉದಾರೀಕರಣದ ಆರ್ಥಿಕ ನೀತಿ, ರಿಸರ್ವ್ ಬ್ಯಾಂಕ್ ನಿರ್ದೇಶನಗಳ ಜಾರಿ ಕೈಬಿಡಲು ತಯಾರಿಲ್ಲ. ಕಾರ್ಮಿಕರ ವಿವಾದಗಳಲ್ಲಿ ಪೋಲೀಸರ ಹಸ್ತಕ್ಷೇಪ ನಿಂತಿಲ್ಲ, ಅಸಂಘಟಿತರಿಗೆ, ಶಾಸನ ರೂಪಿಸಲಾಗಲಿಲ್ಲ. ಅಂಗನವಾಡಿ-ಆರೋಗ್ಯ ಸೇವಾ ಕಾರ್ಯಕರ್ತರ ಪಂಚಾಯಿತ್‌ಗೆ ಒಪ್ಪಿಸುವ ಪ್ರಸ್ತಾಪ ಕೈ ಬಿಡಲಿಲ್ಲ... ಹೀಗೆ ಅನೇಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ಕಂಡುಕೊಳ್ಳಲು ಜನಪರ ನಿಲುವು ತಾಳಬಹುದಿತ್ತು, ಅಂತಹ ಅವಕಾಶಗಳನ್ನು ಕಳೆದುಕೊಳ್ಳುತ್ತಲೇ ಸಾಗುತ್ತಿದೆ ಈ ಸರ್ಕಾರ.

ಇಂತಹ ಸ್ಥಿತಿಯಿಂದಾಗಿ ಜನತೆಯಲ್ಲಿ ಅತೃಪ್ತಿ ಬೆಳೆಯುತ್ತಿದೆ. ಇದನ್ನು ಗಮನಿಸಿಯೆ ಅದರ ಪೂರ್ಣ ಪ್ರಯೋಜನ ಪಡೆಯಲು ಬಿಜೆ... ರಾಜ್ಯದಲ್ಲಿ ತನ್ನ ಆಕ್ರಮಣ ಹೆಚ್ಚಿಸಿದೆ. ಹಲವ... ಕೋಮುಗಲಭೆಗಳ ಮೂಲಕ ತನ್ನ ಕೋಮುವಾ... ಅಜೆಂಡಾ ಕೈಬಿಡಲಿಲ್ಲ ಎಂ... ಬಿಜೆಪಿ-ಆರ್‌ಎಸ್‌ಎಸ್ ತೋರಿಸಿತು. ಈ... ಉಮಾ ಭಾರತಿ ಪ್ರಕರಣವನ್ನು ಹಿಗ್ಗಿಸಿ ಹಿಗ್ಗಿ... ಜನರನ್ನು ತನ್ನತ್ತಲೇ ಹೊರಟಿದೆ. ಸರಕಾರ... ವೈಖರಿಯಿಂದಾಗಿ ಕೋಮುವಾದಿ ಶಕ್ತಿಗಳು ನಿಲ... ಪಡೆಯಲುಬಹುದು.

ಜೆಡಿ(ಎಸ್) ರಾಜಕೀಯ ಕುರುಡು :

ಇತ್ತ ಜನತಾದಳ (ಎಸ್) ಸರಕಾರ... ಭಾಗೀದಾರನಾದರೂ ತಾನು ಭಿನ್ನ ಎಂದ... ತೋರಿಸಲು ಯತ್ನಿಸಿತು. ಆದರೆ ಅದು ನಿಖರವಾ... ರಾಜಕೀಯ ಅಂದಾಜಿಲ್ಲದ ಕ್ರಮವಾಗಿದ್ದವು... ರಾಜ್ಯದಲ್ಲಿ ಎದುರಿಸಬೇಕಾಗಿರುವುದು ಯಾರನ್ನ... ಬಿಜೆಪಿಯೆ ಅಥವಾ ಕಾಂಗ್ರೆಸ್ಸೋ ಎಂಬ ಬ... ಜೆಡಿ(ಎಸ್) ನಾಯಕತ್ವಕ್ಕೆ ಇಲ್ಲ. ಚುನಾವಣೆ ಬಳಿ... ತನಗೇಕೆ ಈ ಸ್ಥಿತಿ ಬಂತು ಎಂಬ ಬಗ... ಸ್ವವಿಮರ್ಶೆಯನ್ನೇ ಮಾಡಿಕೊಂಡಿಲ್ಲ(ಕಾಂಗ್ರೆಸ್ ಸಹ). ಇದರಿಂದಾಗಿ ಕುರುಡು - ಕುರುಡಾಗಿ ವರ್ತಿಸುತ್ತಿದೆ.

ಬೆಳೆಯುತ್ತಿರುವ ಜನಚಳುವಳಿಯು - ಆಶಾದಾಯಕ ಅಂಶ :

ಇಂತಹ ಸ್ಥಿತಿಯಲ್ಲಿ ಒಂದು ಆಶಾದಾಯಕ ಪರಿಸ್ಥಿತಿ ಇದೆ. ನಮ್ಮ ಸಂಕಷ್ಟಗಳ ಪರಿಹಾರಕ್ಕಾಗಿ ವಿವಿಧ ಜನವಿಭಾಗಗಳು ಹೋರಾಟದ ಕಣಕ್ಕೆ ಇಳಿಯುತ್ತಿದ್ದಾರೆ. ವಿಶೇಶವಾಗಿ ಸಿಇಟಿ ಪ್ರಶ್ನೆ ವಿರುದ್ಧ ವಿದ್ಯಾರ್ಥಿಗಳ ಚಳುವಳಿ, ಅಂಗನವಾಡಿ ಕಾರ್ಯಕರ್ತೆಯರ ವಿವಿಧ ಹಂತಗಳ ಬೃಹತ್ ಹೋರಾಟ, ಪಂಚಾಯತ್ ನೌಕರರು, ಬಿಸಿ ಊಟದ ಕೆಲಸಗಾರರ ಚಳುವಳಿ ಬೆಂಗಳೂರು, ಮೈಸೂರು ಜಿಲ್ಲೆಗಳಲ್ಲಿ ಕಾರ್ಮಿಕರ ಹೋರಾಟ, ನಕಲಿ ಬೀಜ-ಗೊಬ್ಬರದ ಮಾರಾಟಗಾರರ ವಿರುದ್ಧ ರೈತ ಚಳುವಳಿ, ರೇಷನ್ ಕಾರ್ಡ್‌ಗೆ ಕೂಲಿಕಾರರ ಚಳುವಳಿ, ಇವೆಲ್ಲದ್ದಕ್ಕೂ ಕಳಸಪ್ರಾಯದಂತೆ ಸೆಪ್ಟೆಂಬರ್ 2 ರಂದು ದುಡಿಯುವ ವರ್ಗದ ಬೃಹತ್ ರ್‍ಯಾಲಿ.... ಮಹತ್ವದ ಕೆಲವು ಹೋರಾಟಗಳಾಗಿವೆ. ಹಾಗೆಯೇ ಸಿಪಿಐ(ಎಂ) ನಡೆಸಿದ ಎರಡು ರಾಜಕೀಯ ಪ್ರಚಾರಾಂದೋಲನ ಗಮನಾರ್ಹವಾಗಿದೆ. ರಾಜ್ಯದಲ್ಲಿ ಜನತೆಯ ಪ್ರಶ್ನೆಗಳನ್ನು ಪರಿಗಣಿಸುವಂತೆ ಒತ್ತಡ ಹೇರಲು ಪ್ರಜಾಸತ್ತಾತ್ಮಕ ವಾತಾವರಣ, ಹಕ್ಕುಗಳ ರಕ್ಷಣೆಗೆ ಈ ಹೋರಾಟಗಳು ಮಹತ್ವದ ಕೊಡುಗೆ ನೀಡಲಿದೆ. ಕೋಮುವಾದವನ್ನು ಸಹ ಎದುರಿಸುವ ಶಕ್ತಿಯಾಗಿದೆ. ಆಳುವ ಜನರ ನೀತಿಗಳಿಗೆ ಮುಖಾಮುಖಿಯಾಗುತ್ತಿದೆ, ಈ ಇತ್ತ ವಿಸ್ತೃತವಾಗಬೇಕು. ರಾಜಿಯಿಲ್ಲದ ಪ್ರಬಲ ಹೋರಾಟವೊಂದೇ ಅನಿವಾರ್ಯ-ಅಗತ್ಯ ಎಂಬುವುದನ್ನು ಮನಗಾಣಿಸಿದೆ.



ಗೋಧ್ರಾ ತನಿಖೆ ಬಿಜೆಪಿಗೇಕೆ ದಿಗಿಲು ?

ಹರಿಕಿಷನ್ ಸಿಂಗ್ ಸುರ್ಜಿತ್

ಗೋಧ್ರಾ ರೈಲು ದುರಂತದ ಬಗ್ಗೆ ಪ್ರಗತಿಪರ ಸಂಯುಕ್ತರಂಗ ತನಿಖೆಗೆ ಆದೇಶಿಸಿದೆ. ಇದನ್ನು ಬಿಜೆಪಿ ವಿರೋಧಿಸುತ್ತಿದೆ ಏಕೆ? ನಿಜಸಂಗತಿಗಳು ಹೊರಬರುತ್ತಿವೆ ಎಂಬ ಭಯವೇ? ಅಥವಾ ಮತ್ತೇನು? ಒಂದು ಅವಲೋಕನ

ಗೋಧ್ರಾ ರೈಲು ಕಾಂಡದ ವಿಚಾರಣೆ ನಡೆಸಲು ಯುಪಿಎ ಸರ್ಕಾರ ಇಲಾಖಾ ತನಿಖೆಗೆ ಒಂದು ಸಮಿತಿಯನ್ನು ರಚಿಸಿದೆ. ಇದರಿಂದ ಈಗಾಗಲೇ ಹತಾಶಗೊಂಡಿರುವ ಬಿಜೆಪಿಯ ಹತಾಶೆ ತುತ್ತ ತುದಿಗೇರಿದೆ.

ಫೆಬ್ರವರಿ 27,2002 ರಂದು ಸಾಬರ್‌ಮತಿ ಎಕ್ಸ್‌ಪ್ರೆಸ್ ಗೋಧ್ರಾ ನಿಲ್ದಾಣ ಬಿಟ್ಟ ಸ್ವಲ್ಪ ಹೊತ್ತಿನಲ್ಲೇ ಎಸ್-6 ಬೋಗಿಗೆ ಬೆಂಕಿ ಬಿದ್ದು 58 ಜೀವಗಳ ಬಲಿತೆಗೆದುಕೊಂಡಿತು. ಈ ದುರಂತ ವಿವಾದಾತ್ಮಕ ಪರಿಸ್ಥಿತಿಗಳಲ್ಲಿ ಸಂಭವಿಸಿದ್ದರೂ ಕೂಡಾ ಬಿಜೆಪಿ ಇದು ಕೆಲವು ಮುಸ್ಲಿಮರ ಕೃತ್ಯ, ಪೂರ್ವಯೋಜಿತ ಪಿತೂರಿ ಎಂದು ಹೇಳಿಕೊಂಡಿತು. ಅಷ್ಟೇ ಅಲ್ಲ, ಅದರಿಂದ ಒಂದು ಹತ್ಯಾಕಾಂಡವೇ ಆರಂಭವಾಗಿ ಅದು ನಾಲ್ಕು ತಿಂಗಳಿಗೂ ಹೆಚ್ಚುಕಾಲ ನಡೆದು 2000ಕ್ಕೂ ಹೆಚ್ಚು ಮುಸ್ಲಿಮರನ್ನು ಬಲಿತೆಗೆದುಕೊಂಡಿತು. ಅವರ ಅದೆಷ್ಟೋ ಮಹಿಳೆಯರ ಮೇಲೆ ಬಲಾತ್ಕಾರ, ಅತ್ಯಾಚಾರ ನಡೆಯಿತು. ಹಲವರು ಮನೆ-ಮಾರುಗಳನ್ನು ಕಳೆದುಕೊಂಡರು. ಅವರ ಆಸ್ತಿಗಳನ್ನು ಕಾನೂನುಬಾಹಿರವಾಗಿ ಆಕ್ರಮಿಸಿಕೊಳ್ಳಲಾಯಿತು.

ಬಿಜೆಪಿ ಈ ತನಿಖೆ 'ಸಂವಿಧಾನ ಬಾಹಿರ' ಎಂದಿದೆ. ಏಕೆಂದರೆ ಈಗಾಗಲೇ ನಾನಾವಟಿ-ಶಹಾ ಆಯೋಗ ಗುಜರಾತ್ ದಂಗೆಗಳ ತನಿಖೆ ನಡೆಸುತ್ತಿದೆಯಲ್ಲ ಎಂದು ಅವರ ವಾದ. ಈ ವಾದ ಅರ್ಥಹೀನ. ಏಕೆಂದರೆ ಆ ತನಿಖೆಯ ವ್ಯಾಪ್ತಿ ಬೇರೆ, ಈ ತನಿಖೆಯ ವ್ಯಾಪ್ತಿ ಬೇರೆ. ರೈಲ್ವೇ ಸುರಕ್ಷತತೆ, ಸುಭದ್ರತೆ ತಾಂತ್ರಿಕ ಸುಧಾರಣೆ, ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ತಡೆಯಲು ಬೇಕಾದ ಕ್ರಮಗಳು ಇವೆಲ್ಲಾ ನಾನಾವಟಿ-ಶಹಾ ಆಯೋಗದ ತನಿಖೆಯ ವ್ಯಾಪ್ತಿಯಲ್ಲಿರಲಿಲ್ಲ.

ಇದು ಹಗೆ ಸಾಧಿಸಲು ಎಂಬ ಬಿಜೆಪಿ ಆರೋಪದಲ್ಲೂ ಹುರುಳಿಲ್ಲ. ಏಕೆಂದರೆ ಈ ತನಿಖೆ ನಡೆಸುವವರು ನಿವೃತ್ತ ನ್ಯಾಯಾಧೀಶರು. ವಾಸ್ತವವಾಗಿ ಈ ತನಿಖೆ ನಾನಾವಟಿ-ಶಹಾ ತನಿಖೆಗೆ ಪೂರಕವೂ ಆಗಬಹುದು.

ನಿಜವಾದ ಭಯ


ವಾಸ್ತವವಾಗಿ ಬಿಜೆಪಿ ಈ ವಾದಗಳನ್ನು ಏಕೆ ಹೂಡಿದೆಯೆಂಬುದು ಸ್ವಯಂವೇದ್ಯ. ಈ ದುರದೃಷ್ಟಕರ ಘಟನೆಯ ಹೆಸರಿನಲ್ಲೇ ತಾನೇ ಬಿಜೆಪಿ ಮತ್ತು ಸಂಘ ಪರಿವಾರ ಗುಜರಾತಿನಲ್ಲಿ ತನ್ನ ವಿನಾಶಲೀಲೆ ನಡೆಸಿದ್ದು! ಗೋಧ್ರಾ ಘಟನೆಯ ಹಿಂದಿರುವ ಸತ್ಯ ಬಯಲಿಗೆ ಬಂದರೆ ಈ ಸಂಘ ಪರಿವಾರ ಎಂಬ ಫ್ಯಾಸಿಸ್ಟ್ ರಾಕ್ಷಸನ ಸ್ವರೂಪ ನಗ್ನಗೊಳ್ಳುತ್ತದೆ ಎಂಬ ನಿಜವಾದ ಭಯವೇ ಇವರನ್ನೆಲ್ಲಾ ಆವರಿಸಿದೆ. ಗೋಧ್ರಾ ಬೆಂಕಿಗೆ ಆಹುತಿಯಾದವರು ಕರಸೇವಕರಲ್ಲ ಎಂಬ ಸಂಗತಿ ಬಯಲಾಗಬಹುದೆಂಬ ಭಯವೂ ಅವರಿಗಿದೆ.

ಈ ರೈಲು ದುರಂತದ ಬಗ್ಗೆ ತನಿಖೆ ನಡೆಸಬೇಕಾದ್ದು ರೈಲ್ವೇಇಲಾಖೆಯ ಪ್ರಥಮ ಕರ್ತವ್ಯವಾಗಿತ್ತು. ಅದೇಕೋ ಬಿಜೆಪಿ ನೇತೃತ್ವದ ಆಡಳಿತದಲ್ಲಿ ಇದನ್ನು ನಡೆಸಲೇ ಇಲ್ಲ. ರೈಲ್ವೇ ಶಾಸನದ ಪ್ರಕಾರ ರೈಲ್ವೇ ಸುರಕ್ಷತಾ ಆಯುಕ್ತರು ಇಂತಹ ತನಿಖೆ ನಡೆಸಬೇಕಾಗಿತ್ತು. ಆಗಿನ ರೈಲ್ವೇ ಮಂತ್ರಿಗಳು ಏಕೆ ಇದನ್ನು ನಡೆಸಲು ಒತ್ತಡ ತರಲಿಲ್ಲವೋ ಅರ್ಥವಾಗುವುದಿಲ್ಲ ಎಂದು ಪ್ರಸಕ್ತ ರೈಲ್ವೇ ಮಂತ್ರಿಗಳು ಹೇಳಿದ್ದಾರೆ.

ಎರಡನೆಯದಾಗಿ, ಮರುದಿನ ಅಂದರೆ ಫೆಬ್ರವರಿ 28 ರಿಂದಲೇ ಆರಂಭವಾದ ವ್ಯಾಪಕ ಹತ್ಯಾಕಾಂಡವನ್ನು ಸಮರ್ಥಿಸಿಕೊಳ್ಳಲು ಸಂಘ ಪರಿವಾರ ಗೋಧ್ರಾ ಬೆಂಕಿ ಒಂದು 'ಪೂರ್ವಯೋಜಿತ ಕ್ರಿಮಿನಲ್ ಪಿತೂರಿ' ಎಂದು ಹೇಳುತ್ತಾ ಬಂದಿದೆ. ಸ್ವತಃ ಪ್ರಧಾನಮಂತ್ರಿಗಳೇ ಗೋಧ್ರಾ ದುರಂತ ನಡೆಯದಿದ್ದರೆ ಗುಜರಾತ್ ದುರಂತವನ್ನು ತಪ್ಪಿಸಬಹುದು ಎಂದಿರಲಿಲ್ಲವೇ? 2000 ಕ್ಕೂ ಹೆಚ್ಚು ಮುಸ್ಲಿಮರನ್ನು ಕೊಂದ ಘಟನೆಯನ್ನು'ಸಾಮೂಹಿಕ ನರಹತ್ಯೆ' ಎಂದು ಹೇಳುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಅವರು ಗೋಧ್ರಾದ್ದು 'ಹತ್ಯಾಕಾಂಡ' ಎನ್ನಲು ಹಿಂಜರಿಯಲಿಲ್ಲ!

'ಪಿತೂರಿ ' ಇತ್ತೇ?

ಆದರೂ ಗೋಧ್ರಾ ದುರಂತದಲ್ಲಿ ಪಿತೂರಿಯೇನೂ ಇರಲಿಲ್ಲ, ಸಂಘ ಪರಿವಾರ ರಾಜ್ಯದಲ್ಲಿ ಮುಸ್ಲಿಮರ ಸರ್ವನಾಶಕ್ಕೆ ಇದನ್ನು ಪೂರ್ಣವಾಗಿ ಬಳಸಿಕೊಂಡಿತು ಎಂದು ನಂಬಲು ಸಾಕಷ್ಟು ಆಧಾರಗಳಿವೆ.



ವಾಜಪೇಯಿಯವರ ರೈಲ್ವೇ ಮಂತ್ರಿ ಈ ದುರಂತದ ಬಗ್ಗೆತನಿಖೆ ನಡೆಸಲು ಮುಂದಾಗಲಿಲ್ಲ ಎಂಬುದು ಮೊದಲ ಆಧಾರ. ಎರಡನೆಯದಾಗಿ ಅಹಮದಾಬಾದ್ ನ ವೈದ್ಯ ನ್ಯಾಯ ಶಾಸ್ತ್ರ(ಫೋರೆನ್ಸಿಕ್ ಸೈನ್ಸ್) ಪ್ರಯೋಗಾಲಯ ಮೇ 1, 2002 ರಂದು ನಡೆಸಿದ ತನಿಖೆಗಳ ಪ್ರಕಾರ ಎಸ್-6 ಬೋಗಿಗೆ ಹೊರಗಿನಿಂದ ಚೆಲ್ಲಿದ ಯಾವುದೇ ಆ್ಯಸಿಡ್‌ನಂತಹ ದ್ರಾವಣದಿಂದಾಗಿ ಬೆಂಕಿ ತಗಲಿಕೊಂಡಿತು ಎಂಬುದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ. ಎರಡು ದಿನಗಳ ನಂತರ ನಡೆಸಿದ ತನಿಖೆಗಳ ಪ್ರಕಾರವೂ ನೆಲದಿಂದ ಏಳು ಅಡಿಗಳ ಮೇಲಿರುವ ಕಿಟಕಿಗಳಿಂದ ಅಥವಾ ಬಾಗಿಲುಗಳಿಂದ ಯಾವುದೇ ದಾಹಕದ್ರಾವಣವನ್ನು ಎಸೆದಿರುವ ಸಾಧ್ಯತೆಯಿಲ್ಲ.

ಕೊನೆಯದಾಗಿ ಇಲ್ಲಿದೆ ನಿರ್ಣಾಯಕ ಸಾಕ್ಷ್ಯ. ಆಗಸ್ಟ್ 31, 2004 ರಂದು ನಾನಾವಟಿ-ಶಹಾ ಆಯೋಗದ ಎದುರು ಸಾಕ್ಷ್ಯ ನೀಡುತ್ತಾ ಗುಜರಾತಿನ ಒಬ್ಬ ಉನ್ನತ ಪೋಲೀಸ್ ಅಧಿಕಾರಿ ಆರ್.ಬಿ. ಶ್ರೀಕುಮಾರ್ ಈ ದುರಂತದಲ್ಲಿ ಯಾವುದೇ 'ಗುಪ್ತಚರ ವಿಫಲತೆ' ಇರಲಿಲ್ಲ, ಏಕೆಂದರೆ ಇದರಲ್ಲಿ ಯಾವುದೇ ಪಿತೂರಿ ಇರಲಿಲ್ಲ ಎಂದಿದ್ದಾರೆ. ಅವರು ಗುಜರಾತಿನ ಪೋಲೀಸ್ ಇಲಾಖೆಯ ಅಡಿಶನಲ್ ಡಿಜಿಪಿ(ಪೋಲೀಸ್ ಸುಧಾರಣೆಗಳು). ಗುಜರಾತ್ ನರಹತ್ಯಾಕಾಂಡದ ಸಮಯದಲ್ಲಿ ಅವರು ಗುಜರಾತಿನ ಪೋಲೀಸ್ ಗುಪ್ತಚರ ವಿಭಾಗಗಳ ಮುಖ್ಯಸ್ಥರಾಗಿದ್ದರು. "2002 ರ ಗಲಭೆಗಳ ನಂತರ ರಾಜ್ಯವು ವಿಧಾನಸಭಾ ಚುನಾವಣೆಗಳಿಗೆ ಸಿದ್ಧವಾಗಿಲ್ಲ ಎಂಬ ಇಲಾಖಾ ವರದಿಯನ್ನು ಹೊರ ಹಾಕಿದರು ಎಂಬ ಆರೋಪದ ಮೇಲೆ ಅವರನ್ನು ತೆಗೆದು ಹಾಕಲಾಗಿತ್ತು" ಎಂದು ಒಂದು ಪತ್ರಿಕೆ ಹೇಳಿದೆ.



ಆದ್ದರಿಂದ ಗೋಧ್ರಾ ಕಗ್ಗೊಲೆಗಳಿಗೆ ಬೇರೇನೇ ಕಾರಣಗಳಿರಬಹುದು, ಆದರೆ ದೇಶ-ವಿರೋಧಿ ಶಕ್ತಿಗಳ ಪಿತೂರಿಯಂತೂ ಅದರಲ್ಲಿ ಇರಲಿಲ್ಲ ಎಂಬುದನ್ನು ಇವು ತೋರಿಸುತ್ತವೆ.

ಸಂಘ ಪರಿವಾರದ ಆಟ

ಇದು ನಮಗೆ ಸಂಘ ಪರಿವಾರದ ಆಟದ ಬಗ್ಗೆ ಯೋಚಿಸುವಂತೆಯೂ ಮಾಡುತ್ತದೆ. ನಮ್ಮ ಮುಂದಿರುವ ಪ್ರಶ್ನೆ - ಗೋಧ್ರಾ ದುರಂತ ಒಂದು ಪಿತೂರಿಯಲ್ಲದಿದ್ದರೆ ಸಂಘ ಪರಿವಾರ ಏಕೆ ಅಷ್ಟು ಆತುರದಿಂದ ಅದನ್ನು ಬಾಚಿಕೊಂಡಿತು? ಇದರರ್ಥ ಸ್ಪಷ್ಟ. ಸಂಘ ಪರಿವಾರ ರಾಜ್ಯದ ಅದೃಷ್ಟಹೀನ ಮುಸ್ಲಿಮರ ಮೇಲೆ ತನ್ನೆಲ್ಲಾ ರಾಕ್ಷಸೀ ಶಕ್ತಿಯೊಂದಿಗೆ ಎರಗಲು ಈ ದುರಂತವನ್ನು ಸಂಪೂರ್ಣವಾಗಿ ದುರುಪಯೋಗಪಡಿಸಿಕೊಂಡಿತು.

ಸಂಘ ಪರಿವಾರ ಇಂತಹ ಹತ್ಯಾಕಾಂಡಕ್ಕೆ ಆರು ತಿಂಗಳಿಂದ ಸಿದ್ಧತೆ ನಡೆಸಿತ್ತು ಎನ್ನುವುದಕ್ಕೂ ಸಾಕಷ್ಟು ಪುರಾವೆಗಳಿವೆ. ಅದಾಗಲೇ ಗುಜರಾತಿನಲ್ಲಿ ಮತ್ತು ದೇಶದ ಇತರೆಡೆ ಅತೀ ಕಡಿಮೆ ಸಂಖ್ಯೆಯಲ್ಲಿರುವ ಕ್ರೈಸ್ತರ ಮೇಲೆ ಧಾಳಿ ಮಾಡಿ ಅದು ರಕ್ತದ ರುಚಿ ನೋಡಿತ್ತು. ಒರಿಸ್ಸಾದಲ್ಲಿ ಒಬ್ಬ ಪಾದ್ರಿ ಮತ್ತು ಅವರ ಚಿಕ್ಕ ಮಕ್ಕಳನ್ನು ಜೀವಂತ ಸುಡಲಾಗಿತ್ತು. ಈಗ ಮುಸ್ಲಿಮರ ಬಾರಿ ಎಂದು ಅದು ಯೋಚಿಸಿದಂತಿತ್ತು.

ಆರು ತಿಂಗಳ ಮೊದಲೇ ಮುಸ್ಲಿಂ ಮನೆಗಳು, ಅಂಗಡಿಗಳು, ಸಂಸ್ಥೆಗಳನ್ನು ಗುರುತಿಸಲಾಗಿತ್ತು. ಈ ನರಹತ್ಯೆಗಳು ನಾಲ್ಕು ತಿಂಗಳಿಗೂ ಹೆಚ್ಚು ಕಾಲ ನಡೆಯಿತೆನ್ನುವುದೇ ಇವು ಪೂರ್ವಯೋಜಿತ ಎಂಬುದನ್ನು ತೋರಿಸುತ್ತವೆ. ಮೊಬೈಲ್‌ಗಳ ವ್ಯಾಪಕ ಬಳಕೆಯೂ ಈ ಹತ್ಯಾಕಾಂಡವನ್ನು ಒಂದು ಕೇಂದ್ರದ ನಿರ್ದೇಶನದ ಅಡಿಯಲ್ಲಿ ನಡೆಸಲಾಯಿತು ಎಂಬುದನ್ನು ತೋರಿಸುತ್ತದೆ. ಈ ಲೂಟಿಕೋರ ಪಡೆಗಳನ್ನು ಅವರವರ ನಿವಾಸಪ್ರದೇಶಗಳಿಗಿಂತ ದೂರದಲ್ಲಿ ಕೆಲಸಕ್ಕೆ ಹಚ್ಚಲಾಗಿತ್ತು. ಏಕೆಂದರೆ ಅವರವರ ಪ್ರದೇಶದಲ್ಲಿಯೇ ಹಚ್ಚಿದ್ದರೆ ಅವರನ್ನು ಸುಲಭವಾಗಿ ಗುರುತಿಸಿ ಬಿಡುತ್ತಿದ್ದರು ಅಥವಾ ಅವರಲ್ಲಿ ಕೆಲವರು ತಮ್ಮ ಪರಿಚಿತ ಮುಖಗಳ ಮೇಲೆ ಧಾಳಿ ಮಾಡಲು ಹಿಂಜರಿಯಬಹುದಾಗಿತ್ತು.

ಅಂದರೆ ಮುಸ್ಲಿಮರು ಹಾಗೂ ಕ್ರೈಸ್ತರನ್ನು ಭಯಭೀತಗೊಳಿಸಿ ಜನರನ್ನು ಕೋಮು ಆಧಾರದಲ್ಲಿ ಒಡೆದು ಅಲ್ಲಿ ನಡೆಯಲಿದ್ದ ವಿಧಾನಸಭಾ ಚುನಾವಣೆಗಳಲ್ಲಿ ಗೆಲ್ಲಲು ಸಂಘ ಪರಿವಾರ ಅತ್ಯಂತ ಚಾಣಾಕ್ಷತನದಿಂದ ಈ ಸಿದ್ಧತೆ ನಡೆಸಿತ್ತೆಂಬುದು ಸ್ಪಷ್ಟ. ಆದ್ದರಿಂದಲೇ ಅದು ಗೋಧ್ರಾ ಘಟನೆಯ ಸಂಪೂರ್ಣ ದುರ್ಲಾಭ ಪಡೆಯಲು ಧಾವಿಸಿತು. ಗೋಧ್ರಾ ಕಗ್ಗೊಲೆ ನಡೆಯದಿದ್ದರೂ ಬೇರೆ ಯಾವುದಾದರೂ ನೆವ ಎತ್ತಿಕೊಂಡು ಈ ಸಂಘ ಪರಿವಾರ ಇಂತಹುದೇ ಹತ್ಯಾಕಾಂಡಕ್ಕೆ ಇಳಿಯುತ್ತಿತ್ತು ಎಂಬುದನ್ನು ಇದು ಸೂಚಿಸುತ್ತದೆ.

ಈ ಹತ್ಯಾಕಾಂಡ ಸಾಗಿದ್ದಾಗಲೇ ನರೇಂದ್ರ ಮೋದಿ ವಿಧಾನಸಭೆಯನ್ನು ವಿಸರ್ಜಿಸಿ ಬೇಗನೆ ಚುನಾವಣೆ ನಡೆಸಬೇಕು ಎಂದ ಒತ್ತಾಯಿಸಿದ್ದು ಸುಮ್ಮನೇ ಅಲ್ಲ. ಚುನಾವಣಾ ಆಯೋಗ ಅದಕ್ಕೆ ಮಣಿಯಲಿಲ್ಲ ಎಂಬುದು ಬೇರೆ ಮಾತು. ಆದರೂ ಕೊನೆಗೂ ಮೋದಿ ಗುಜರಾತಿನ ಜನಗಳನ್ನು ಕೋಮುವಾರಾಗಿ ವಿಭಜಿಸಿ ವಿಧಾನಸಭಾ ಚುನಾವಣೆ ಗೆದ್ದರು, ಆದರೆ ನಂತರ ನಡೆದ ಲೋಕಸಭಾ ಚುನಾವಣೆಗಳಲ್ಲಿ ಅದರ ಫಲಿತಾಂಶ ಬಹಳವಾಗಿ ಇಳಿಯಿತು ಏಕೆಂದರೆ ಆ ವೇಳೆಗೆ ಈ ವಿಭಜನೆ, ಧ್ರುವೀಕರಣದ ಪ್ರಭಾವ ಕರಗಿ ಹೋಗಿತ್ತು.

ಕೊಲೆಗಡುಕರಿಗೆ ರಾಜಕೀಯ ಪೋಷಣೆ

ಲೂಟಿಕೋರ ಪಡೆಗಳಿಗೆ ಆಗಿನ ರಾಜ್ಯದ ಮತ್ತು ಕೇಂದ್ರದ ರಾಜಕೀಯ ವ್ಯವಸ್ಥೆಯ ಪೂರ್ಣ ಪೋಷಣೆ ಮತ್ತು ಸಹಕಾರ ಇತ್ತು ಎಂಬುದಕ್ಕೆ ಸಾಕಷ್ಟು ದಾಖಲೆಗಳಿವೆ. ಮೊದಲನೆಯದಾಗಿ, ಹಲವು ದಿನಗಳ ಕಾಲ ಭೀಕರ ಘಟನೆಗಳು ನಡೆಯುತ್ತಲಿದ್ದರೂ ಮೋದಿ ಸೇನಾಪಡೆಗಳನ್ನು ಕೇಳಲಿಲ್ಲ, ಕೇಂದ್ರ ಸರ್ಕಾರವೂ ಅದನ್ನು ಕಳಿಸುವ ಬಗ್ಗೆ ಯೋಚಿಸಲಿಲ್ಲ. ಬದಲು ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ಪರಿಸ್ಥಿತಿಯನ್ನು ಮೋದಿಯವರು ಬೇಗನೆ ಹತೋಟಿಗೆ ತಂದರು ಎಂದು ಅಭಿನಂದಿಸಿದರು! ನಂತರ ವಾಜಪೇಯಿಯವರೂ ಅದನ್ನೇ ಹೇಳಿದರು. ಆದರೆ ಅವರೇ ನಂತರ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಸೋಲಿಗೆ ಮೋದಿಯನ್ನು ದೂಷಿಸಿರುವುದು ರಾಜ್ಯ ಸರ್ಕಾರ ಕೊಲೆ ಗಡುಕರೊಂದಿಗೆ ಶಾಮೀಲಾಗಿತ್ತು ಎಂಬ ಆರೋಪವನ್ನು ದೃಢಪಡಿಸುತ್ತದೆ. ಆದರೆ ಇದು ಕೇಂದ್ರ ಸರ್ಕಾರದ ಪಾತ್ರವನ್ನೇನೂ ಗೌಣಗೊಳಿಸುವುದಿಲ್ಲ. ಏಕೆಂದರೆ ವಾಜಪೇಯಿಯವರ ನಿಜ ಸ್ವಭಾವವನ್ನಷ್ಟೇ ಇದು ತೋರಿಸುತ್ತದೆ.

ತಮ್ಮ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಿದ್ದ ಕೆಲವು ಪೊಲೀಸ್ ಅಧಿಕಾರಿಗಳನ್ನು ವರ್ಗಾಯಿಸಿರುವುದೂ ಕೊಲೆಗಡುಕರಿಗೆ ಇದ್ದ ರಾಜಕೀಯ ಆಶ್ರಯವನ್ನು ತೋರಿಸುತ್ತದೆ. ಮೇಲೆ ಹೇಳಿದ ಹಿರಿಯ ಪೋಲೀಸ್ ಅಧಿಕಾರಿ ಶ್ರೀಕುಮಾರ್‌ರವರು ನಾನಾವಟಿ-ಶಹಾ ತನಿಖಾ ಆಯೋಗದ ಎದುರು ಹೇಗೆ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಹಿರಿಯ ಬಿಜೆಪಿ ರಾಜಕಾರಣಿಗಳು ಗೋಧ್ರಾ ನಂತರದ ಗುಜರಾತ್ ಗಲಭೆಗಳ ಸಮಯದಲ್ಲಿ ಪೋಲೀಸರ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡಿದರು

ಪುಟ 10ಕ್ಕೆ

ಹೈದ್ರಾಬಾದ್-ಕರ್ನಾಟಕ ವಿಮೋಚನಾ ದಿನಾಚರಣೆ ಬಂತೆಂದರೆ ಈ ಪ್ರದೇಶದಲ್ಲೆಲ್ಲಾ ಆತಂಕ, ತಲ್ಲಣಗಳೇ. ಹಿಂದೆಂದು ಇಲ್ಲದ ಇಂತಹ ದಿನಾಚರಣೆಯನ್ನು ಜೆ.ಹೆಚ್.ಪಟೇಲ್ ಸರ್ಕಾರ ಯಾಕೆ, ಹೇಗೆ ನಿಗದಿ ಪಡಿಸಿತು ಎಂಬುದು ಉಳಿದಿರುವ ಪ್ರಶ್ನೆ. ದಿನಾಂಕ ಪ್ರಕಟಿಸಿದ ಸರ್ಕಾರದ ಸುತ್ತೋಲೆಯೇ ಅರೆಬರೆ ತಯಾರಿಯಿಂದಾಗಿ ವಿವಾದ ಹುಟ್ಟಿತು. ಮುಂದಿನ ದಿನಗಳಲ್ಲಿ ಈ ಸಂದರ್ಭವನ್ನು ಬಳಸುತ್ತಿರುವ ರೀತಿ, ಬಿಚ್ಚುತ್ತಿರುವ ಇತಿಹಾಸದ ವ್ಯಾಖ್ಯಾನಗಳು ವಿವಾದಗಳನ್ನು ಹುಟ್ಟುಹಾಕಿವೆ. ಅವುಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಿ ಗಂಭೀರವಾದ ಪ್ರಶ್ನೆಗಳನ್ನೆತ್ತಿದ್ದಾರೆ ಪತ್ರಕರ್ತ, ಚಿಂತಕ ಗಂಗಾಧರ ಕುಷ್ಟಗಿಯವರು.

ಹೈದ್ರಾಬಾದ್-ಕರ್ನಾಟಕ ಒಂದು

17ನೇ ಸೆಪ್ಟೆಂಬರ್ 98 ರಂದು ಕರ್ನಾಟಕ ಸರಕಾರವು ಪ್ರಪ್ರಥಮ ಬಾರಿಗೆ ಹೈದ್ರಾಬಾದ್ ಕರ್ನಾಟಕ ವಿಮೋಚನಾ ದಿನವನ್ನಾಗಿ ಆಚರಿಸಿತು. ಸರಕಾರೀ ಆದೇಶದಲ್ಲಿ ವಿಮೋಚನಾ ದಿನಾಂಕವು ತಪ್ಪಾಗಿ ನಮೂದಾಗಿದ್ದು ಆಕಸ್ಮಿಕವೇನೂ ಆಗಿರಲಿಲ್ಲವೆನಿಸುತ್ತದೆ. ಕ್ಯಾಬಿನೇಟ್‌ನಲ್ಲಿ ಆದೇಶಕ್ಕೆ ಸಮ್ಮತಿ ನೀಡಿದ ಮಂತ್ರಿಗಳಿಗೆ ಮತ್ತು ಅದನ್ನು ಬರೆದ ಅಧಿಕಾರಿಗಳಿಗೆ ವಿಮೋಚನ ದಿನದ ಬಗ್ಗೆ ನಿಖರ ಜ್ಞಾನ ಇದ್ದಿರಲಿಕ್ಕಿಲ್ಲ ಎನ್ನುವ ಅನುಮಾನಕ್ಕೆ ಎಡೆಮಾಡಿಕೊಡುವಂತಾಯಿತು. ಸೆಪ್ಟೆಂಬರ್ 17 ರ ಬದಲಿಗೆ ಆಗಸ್ಟ್ 17 ಎಂದು ಬರೆಯಲಾಗಿತ್ತು. ಸರಕಾರದ ಸದರಿ ಆದೇಶದಲ್ಲಿ ಹೈದ್ರಾಬಾದ್ ಸಂಸ್ಥಾನ ಭಾರತ ಒಕ್ಕೂಟದಲ್ಲಿ ವಿಲೀನಗೊಂಡ ಐವತ್ತು ವರ್ಷಗಳ ನಂತರ ಹರಿಬರೆಯಲ್ಲಿ ಆದೇಶ ಹೊರಡಿಸಿದ್ದರ ಫಲಶೃತಿಯಿದು ಎಂದು ಹೇಳದೆ ವಿಧಿಯಿಲ್ಲ. ಕರ್ನಾಟಕದ ವಿಭಾಗೀಯ ಕೇಂದ್ರವಾದ ಗುಲ್ಬರ್ಗಾದ ತಿಮ್ಮಾಪುರ ಚೌಕ್‌ನಲ್ಲಿ ಸರ್ದಾರ್ ಪಟೇಲ್ ಅವರ ಪುತ್ಥಳಿಯನ್ನು ಅನಾವರಣ ಮಾಡುವ ಮೂಲಕ ವಿಮೋಚನಾ ದಿನಾಚರಣೆ ನಡೆಸಲು ತೀರ್ಮಾನಿಸಲಾಯಿತು. ಪುತ್ಥಳಿಯ ಅನಾವರಣ ಕಾರ್ಯಕ್ರಮದ ಉದ್ಘಾಟನೆಗೆ ಅಭಿನವ ಸರ್ದಾರ್ ಪಟೇಲ್ ಎಂದು ಬಿಜೆಪಿ ವಲಯದಲ್ಲಿ ಬಣ್ಣಿಸಲ್ಪಡುವ ಎಲ್.ಕೆ.ಅದ್ವಾನಿ ಯವರನ್ನು ಆಹ್ವಾನಿಸಲಾಯಿತು. ಈ ಕಾರ್ಯಕ್ರಮದ ನೇತೃತ್ವವನ್ನು ಆ ಭಾಗದ ಬಿಜೆಪಿಯ ಮುಂದಾಳುಗಳು ವಹಿಸಿಕೊಂಡಿದ್ದು ಗಮನಿಸಬೇಕಾದ ಸಂಗತಿ.

ಹಿಂದೂ ಕೋಮುವಾದಿಗಳು ಮುಸ್ಲೀಮರನ್ನು ಮುಜುಗರ ಮಾಡಲಿಕ್ಕಾಗಿ ಇದನ್ನೆಲ್ಲ ಮಾಡುತ್ತಿದ್ದಾರೆಂದು ಮುಸ್ಲೀಮ್ ಲೀಗ್ ಶಾಸಕರಾಗಿದ್ದ ಖಮರುಲ್ ಇಸ್ಲಾಮ್ (ನಂತರ ಇವರು ಕಾಂಗ್ರೆಸ್ ಸರಕಾರದಲ್ಲಿ ಸಚಿವರು) ಮತ್ತು ಬಿ.ಎಸ್.ಪಿ.ಯ ಶಾಸಕರಾಗಿದ್ದ ಜುಲ್ಫಿಕರ್ ಹಷ್ಮಿಯುವರು ಪ್ರತಿರೋಧ ಒಡ್ಡಿದ್ದರು. ವಿಮೋಚನಾ ದಿನಾಚರಣೆ ಸುವ್ಯವಸ್ಥಿತವಾಗಿ ನಡೆಯುವ ಬಗ್ಗೆ ಪೊಲೀಸರಿಗೆ ಅನುಮಾನ ಮೂಡಿದಾಗ ಕಾನೂನು ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳಲೆಂದು ಖಮರುಲ್ ಇಸ್ಲಾಮ್, ಹಷ್ಮಿ ಮತ್ತವರ ಬೆಂಬಲಿಗರನೇಕರನ್ನು ಮುಂಜಾಗ್ರತಾ ಕ್ರಮವಾಗಿ ಬಂಧಿಸಿದರು. ವಿಮೋಚನಾ ದಿನಾಚರಣೆಯ ಬಗ್ಗೆ ಒಂದು ವೇಳೆ ಅಧಿಕೃತ ಆದೇಶ ಸರಕಾರದಿಂದ ಹೊರಟಿಲ್ಲವಾಗಿದ್ದರೆ ಕಾರ್ಯಕ್ರಮದ ಮುಂಚೂಣಿಯಲ್ಲಿದ್ದ ಬಿಜೆಪಿ ನಾಯಕರೂ ಬಂಧನಕ್ಕೊಳಗಾಗಬೇಕಾಗಿತ್ತು.

ಮುಖ್ಯಮಂತ್ರಿಗಳಾಗಿದ್ದ ಜೆ.ಎಚ್.ಪಟೇಲ್ ಅವರು ಆ ದಿನಾಚರಣೆಯ ಕಾರ್ಯಕ್ರಮದ ಉಸ್ತುವಾರಿಯನ್ನೆಲ್ಲ ಬಿಜೆಪಿಯವರ ಮಡಿಲಿಗೆ ಹಾಕಿ ಕೈಕಟ್ಟಿ ಕೂತಿದ್ದನ್ನು ಜನ ಆಶ್ಚರ್ಯಚಕಿತರಾಗಿ ನೋಡಬೇಕಾಯಿತು.

ಅಂದು ವಿರೋಧಪಕ್ಷದಲ್ಲಿದ್ದ ಹಾಲಿ ಮಂತ್ರಿ (ಈಗ ಮುಖ್ಯಮಂತ್ರಿ) ಧರ್ಮಸಿಂಗ್ ಅವರು, ಸರ್ದಾರ್ ಪಟೇಲ್ ಪುತ್ಥಳಿಯನ್ನು ಅನಾವರಣಗೊಳಿಸಲು ಎಲ್.ಕೆ.ಅದ್ವಾನಿಯವರು ಬರುತ್ತಿರುವುದರ ಬಗ್ಗೆ ಪ್ರತಿಕ್ರಿಯಿಸಿ ನೀಡಿದ ಹೇಳಿಕೆ ಬಿಜೆಪಿಯವರಿಗೆ ಷಾಕ್ ಉಂಟು ಮಾಡುವಂತಿತ್ತು.

"ಹವಾಲಾ ಪ್ರಕರಣದ ಆರೋಪ ಎದುರಿಸುತ್ತಿರುವ ಎಲ್.ಕೆ. ಅದ್ವಾನಿಯವರು ಸ್ವಾತಂತ್ರ್ಯ ಯೋಧ ಸರ್ದಾರ್‌ರ ಪುತ್ಥಳಿ ಅನಾವರಣ ಮಾಡುವುದು ಎಷ್ಟು ಸರಿ?"


17-9-98 ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯು ವಿಮೋಚನಾ ದಿನಾಚರಣೆಯ ಅಂಗವಾಗಿ ವಿಶೇಷ ಪುರವಣಿಯೊಂದನ್ನು ಹೊರತಂದಿತು. ಇತಿಹಾಸ ಬರಹಗಾರರಾದ ಸೂರ್ಯನಾಥ ಕಾಮತ್, ಸಾಹಿತಿಗಳಾದ ಶಾಂತರಸ ಮತ್ತು ವಸಂತ ಕುಷ್ಟಗಿಯವರು ನಿಜಾಮ್ ಆಳ್ವಿಕೆಯ ಕ್ರೌರ್ಯಗಳನ್ನು ಬಣ್ಣಿಸಿ ಲೇಖನಗಳನ್ನು ಬರೆದರು.

ವಸಂತ ಕುಷ್ಟಗಿಯವರು "ನಿಜಾಮನನ್ನು ಶ್ರೀಸಾಮಾನ್ಯಗೊಳಿಸಿದ ಉಕ್ಕಿನ ಮನುಷ್ಯ ಸರ್ದಾರ್ ಪಟೇಲ್" ಎಂದು ಬಣ್ಣಿಸಿದರು.

ಸಾಹಿತಿ ಶಾಂತರಸರು "ಹೈದ್ರಾಬಾದ್ ಸಂಸ್ಥಾನದಲ್ಲಿ ನಡೆದ ಅತ್ಯಾಚಾರ ವಿಭಜನೆಯ ವಿಪ್ಲವಕ್ಕಿಂತಲೂ ಮಿಗಿಲಾದುದು. ಜಾತಿಯೇ ರಾಷ್ಟ್ರ ವಿಭಜನೆಗೆ ಮೂಲವಾದರೂ ಅಲ್ಲಿ ದೇಶದ ರಾಜಕಾರಣವಿತ್ತು. ಆದರೆ ಹೈದ್ರಾಬಾದ್ ಸಂಸ್ಥಾನದಲ್ಲಿ ಜಾತಿಯೊಂದೇ ಇತ್ತು; ರಾಜಕಾರಣದ ಸುಳಿವಿರಲಿಲ್ಲ. ನೂರಕ್ಕೆ 13 ರಷ್ಟಿರುವ ಸಂಸ್ಥಾನದ ದೊರೆಗಳ ಜಾತಿಯವರಿಗೇ ಎಲ್ಲ ಅಧಿಕಾರ. ಶ್ರೇಷ್ಠ ಹುದ್ದೆಗಳೆಲ್ಲ ಅವರಿಗೇ ಮೀಸಲು ಜಗತ್ತಿನಲ್ಲೇ ಅತ್ಯಂತ ದೊಡ್ಡ ಶ್ರೀಮಂತನಾದ, ಜಿಪುಣನಾದ, ನೂರಾರು ಹೆಂಡಿರನ್ನು ಹೊಂದಿದ್ದ ಉಸ್ಮಾನ್ ಅಲಿಯವರು ತನ್ನ ಜಾತಿಯ ಪಕ್ಷಪಾತಿಯಲ್ಲ ಎನ್ನಲಿಕ್ಕೆ ಆಧಾರಗಳಿಲ್ಲ" ಎನ್ನುವ ಭಾವೋದ್ವೇಗದ ಮಾತುಗಳನ್ನು ಬರೆದರು.

ವಿಮೋಚನಾ ದಿನಾಚರಣೆಯ ಈ ವಿವಾದಗಳು ಭುಗಿಲೇಳುವ ಒಂದು ವರ್ಷ ಮುಂಚೆಯಷ್ಟೆ, "ಹೈದ್ರಾಬಾದ್ ಕರ್ನಾಟಕದಲ್ಲಿ ರಾಜಕೀಯ ಚಳುವಳಿಗಳು" ಎನ್ನುವ ಡಾ.ಬಿ.ಸಿ.ಮಹಾಬಲೇಶ್ವರಪ್ಪನವರ ಇತಿಹಾಸ ಪುಸ್ತಕವನ್ನು ಗುಲ್ಬರ್ಗಾ ವಿಶ್ವ ವಿದ್ಯಾಲಯದ ಪ್ರಸಾರಾಂಗವು ಪ್ರಕಟಿಸಿತ್ತು!

"ಹೈದರಾಬಾದ್ ಕರ್ನಾಟಕದ ರಾಜಕೀಯ ಹಾಗೂ ಸಾಂಸ್ಕೃತಿಕ ಪರಂಪರೆಯು ರಾಷ್ಟ್ರಕೂಟರು, ಚಾಲುಕ್ಯರು, ಕಲ್ಯಾಣದ ಕಲಚೂರಿಗಳು, ವಿಜಯನಗರ, ಬಹುಮನಿ ಮುಂತಾದ ಪ ಭುತ್ವ ಗಳು ಚಳುವಳಿಯಾಗಿ ನೀಡಿದ ಭವ್ಯ ಪರಂಪರೆಯಾಗಿತ್ತು.... " (ಪುಟ- 18) ಎಂದು ಮಹಾಬಲೇಶ್ವರಪ್ಪ ಬರೆಯುತ್ತಾರೆ. ಇಲ್ಲಿ ಬಹುಮನಿ ಆಳ್ವಿಕೆ ಭವ್ಯ ಪರಂಪರೆಯನ್ನು ನೀಡಿತು ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ಅದೇ ನಂತರದ ಪ್ಯಾರಾದಲ್ಲಿಯೇ ಅವರು ಬಹುಮನಿ ಆಡಳಿತವನ್ನು ಹೀಗೆ ಟೀಕಿಸುತ್ತಾರೆ. "12 ನೇ ಶತಮಾನದಲ್ಲಿ ಬಸವೇಶ್ವರರವರ ನೇತೃತ್ವದಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಚಳುವಳಿಗೆ ಭದ್ರ ನೆಲೆಯಾಗಿದ್ದ ಈ ಪ್ರದೇಶವು 1347 ರಲ್ಲಿ ಅನ್ಯ ಜನಾಂಗದ ಬಹುಮನಿ ಸಾಮ್ರಾಜ್ಯದ ಸ್ಥಾಪನೆಯನ್ನು ಕಂಡಿತು. ಇದರಿಂದಾಗಿ ಇಡೀ ಪ್ರದೇಶವು ಮುಸ್ಲೀಮರ ಆಳ್ವಿಕೆಗೆ ಒಳಗಾಯಿತು. ಇದೆಲ್ಲಾ ಹಿಂದೂಗಳ ಸಂಸ್ಕೃತಿಯ ಸ್ವರೂಪ ಮತ್ತು ಗತಿಯನ್ನೇ ಬದಲಾಯಿಸಿದವು. ಮುಂದೆ ಈ ಪ್ರದೇಶವು ಅಸಾಪ್ ಜಹಾಗ ಆಳ್ವಿಕೆಗೆ ತುತ್ತಾದಾಗ ಹಿಂದೂ ಸಂಸ್ಕೃತಿಯು ದೊಡ್ಡ ಪೆಟ್ಟು ತಿನ್ನಬೇಕಾಯಿತು ...." (ಪುಟ-18) ಎಂದು ಸ್ವಯಂ ವೈರುಧ್ಯದ ಮಾತುಗಳನ್ನು ಬರೆಯುತ್ತಾರೆ.



ಎಲ್ಲೆಡೆ ಕೋಮು ವಿಷಜ್ವಾಲೆಗಳು ಹರಡಿಕೊಂಡಿರುವ ಈ ಸನ್ನಿವೇಶದಲ್ಲಿ ಇತಿಹಾಸದ ಬಗೆಗೆ ಇಂಥ ಹುಸಿ ಮಾತುಗಳು ಎಂಥ ಅಪಾಯವನ್ನು ಉಂಟುಮಾಡಬಲ್ಲವು!

ಗಂಗಾ

ವಸಂತ ಕುಷ್ಟಗಿಯವರು ಉದ್ವೇಗದಿಂದ ಹೇಳಿದಂತೆ ಸರ್ದಾರ್ ಪಟೇಲ್ ಅವರು ನಿಜಾಮನನ್ನು ಶ್ರೀಸಾಮಾನ್ಯ ನನ್ನಾಗಿಸಿದರೆ? ಸ್ವತಂತ್ರ ಭಾರತದ ಸರಕಾರವು ರಾಜ ಮಹಾರಾಜರನ್ನು ಶ್ರೀಸಾಮಾನ್ಯ ರನ್ನಾಗಿಸಲಿಲ್ಲ. ಅವರ ಅರಮನೆ, ಆಭರಣ, ಹಣಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಶ್ರೀಸಾಮಾನ್ಯರ ಜೇಬಿನಿಂದ ಕಸಿದು 'ರಾಜಧನ'ದ ಹೆಸರಿನಲ್ಲಿ ರಾಜರುಗಳಿಗೆ ಪರಿಹಾರ ನೀಡಿದರು. ರಾಜ್ಯವನ್ನು ಕಸಿದುಕೊಂಡ ಮಾತ್ರದಿಂದ ಶ್ರೀಕಂಠದತ್ತರು ಶ್ರೀಸಾಮಾನ್ಯ ರಾಗಿ ಮಾರ್ಪಡಲಿಲ್ಲ....

ಸಾಹಿತಿ ಶಾಂತರಸರು, ನಿಜಾಮ ಜಿಪುಣ, ಸ್ತ್ರೀಲೋಲುಪ, ಹಿಂದೂ ದ್ರೋಹಿ ಇತ್ಯಾದಿ ಆರೋಪಗಳು ಎಷ್ಟರಮಟ್ಟಿಗೆ ನಿಜ?

ಯಾವುದೇ ನವಾಬ ಅಥವಾ ರಾಜ ಶ್ರೀಕೃಷ್ಣ ಹೊಂದಿದ್ದಷ್ಟು ಅಂದರೆ ಹದಿನಾರು ಸಾವಿರ ಹೆಂಡಿರನ್ನು ಹೊಂದಿದ್ದಿರುವ ಬಗ್ಗೆ ದಾಖಲೆಗಳಿಲ್ಲ.... ಕೇವಲ ಮುಸ್ಲಿಮರಿಗೆ ಮಾತ್ರ ನಿಜಾಮ ಮಣೆ ಹಾಕುತ್ತಿದ್ದ ಎನ್ನುವವಾದ ಎಷ್ಟು ಸರಿ?

ನಿಜಾಮ ಸಾಕಷ್ಟು ಜನವಿರೋಧಿ ಧೋರಣೆಗಳನ್ನು ಹೊಂದಿದ್ದಿರಬಹುದು. ಆದರೆ ಸಾರ್ವಜನಿಕವಾಗಿ ಎಲ್ಲ ಕೋಮುಗಳಿಗೂ ಉಪಯೋಗವಾಗು ವಂತಹ ಕೆಲಸಗಳನ್ನು ಮಾಡಿಯೇ ಇಲ್ಲವೆನ್ನಬಹುದೇ?

ಈಗ ರಾಯಚೂರು, ಗುಲ್ಬರ್ಗಾ ಬಾಗಲಕೋಟೆ ಮತ್ತು ಬಿಜಾಪುರ ಜಿಲ್ಲೆಗಳಿಗೆ ಒಟ್ಟು 20 ಲಕ್ಷ ಎಕರೆಗಳಿಗೆ ನೀರುಣಿಸುವ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರೂಪಿಸಿದ್ದೇ ನಿಜಾಮ್ ಸರ್ಕಾರ ಎನ್ನುವ ಸಂಗತಿ ಕತ್ತಲಲ್ಲೇ ಉಳಿದಿದೆ... ನಿಜಾಮ್ ಸರಕಾರ ಮೂಲಯೋಜನೆಯಲ್ಲಿ ಕೃಷ್ಣಾ ಮೇಲ್ದಂಡೆ ಮತ್ತು ಕೃಷ್ಣಾ ಕೆಳದಂಡೆಯೆಂದು ವಿಭಜಿಸಿತ್ತು. ಮೇಲ್‌ದಂಡೆ ಯೋಜನೆ ಕರ್ನಾಟಕದ ಪಾಲಿಗೆ ಬಂದರೆ ಕೆಳದಂಡೆ ಆಂಧ್ರದ ಪಾಲಿಗೆ ಹೋಗಿದೆ.

ಸರ್ದಾರ್ ಪಟೇಲ್ ಗಾಂಧೀಜಿಯ ಶಿಷ್ಯರಾಗಿದ್ದರು. ನಿಜ. ಆದರೆ ಗಾಂಧೀಜಿಯ ಅಹಿಂಸಾ ತತ್ವಗಳನ್ನು ಮಾತ್ರ ಮೈಗೂಡಿಸಿಕೊಳ್ಳಲಿಲ್ಲ. ದೇಶ ವಿಭಜನೆಯಾದಾಗ ಪಾಕಿಸ್ತಾನದಲ್ಲಿ ಹಿಂದುಗಳ, ಅಂತೆಯೇ ಭಾರತದಲ್ಲಿ ಮುಸ್ಲಿಮರ ರಕ್ತ ಕೋಡಿಯಾಗಿ ಹರಿಯತೊಡಗಿತು. ಆಗ ಗೃಹಖಾತೆಯನ್ನು ಹೊಂದಿದ್ದ ಸರ್ದಾರ್ ಪಟೇಲ್‌ರನ್ನು ಕರೆದು ಗಾಂಧೀಜಿ, "ದೇಶದಲ್ಲಿ ಮುಸ್ಲಿಮರ ರಕ್ತ ಹರಿಯುತ್ತಿದೆ. ಏನು ಮಾಡುತ್ತಿರುವಿ?" ಎಂದು ಕೇಳಿದರು. ಅದಕ್ಕೆ ಪಟೇಲ್ "ನಿಮಗೆ ಉತ್ಪ್ರೇಕ್ಷಿತ ವರದಿಗಳನ್ನು ಯಾರೋ ನೀಡಿದ್ದಾರೆ" ಎನ್ನುತ್ತಾರೆ. ಆಗ ಗಾಂಧೀಜಿ "ನಾನು ಇರುವುದು ಚೀನಾದಲ್ಲಿ ಅಲ್ಲ ಭಾರತದಲ್ಲೇ ಇದ್ದೇನೆ. ನನ್ನ ಕಣ್ಣುಗಳು ಕುರುಡಾಗಿಲ್ಲ, ಕಿವಿಗಳು ಕಿವುಡಾಗಿಲ್ಲ.." (India wins freedom ಪು235) ಎಂದಾಗ ಪಟೇಲ್ ಗಾಂಧೀಜಿಯ ಮೇಲೆ ಉರಿದು ಬೀಳುತ್ತಾರೆ. ಪಟೇಲರ ಕೋಪೋದ್ರೇಕ ನೋಡಿ ಪಕ್ಕದಲ್ಲೇ ಇದ್ದ ನೆಹರು ಮತ್ತು ಅಬ್ದುಲ್ ಕಲಾಮ್ ಅಜಾದ್‌ರು ದಿಗ್ಭ್ರಾಂತರಾಗುತ್ತಾರೆ...

ಪಟೇಲ್‌ಗೆ ಹೇಳಿ ಏನೂ ಉಪಯೋಗವಿಲ್ಲವೆಂದು ಅರಿತ ಗಾಂಧೀಜೀ ರಕ್ತಪಾತ ನಿಲ್ಲುವವರೆಗೆ ಉಪವಾಸ ಸತ್ಯಾಗ್ರಹ ಘೋಷಿಸುತ್ತಾರೆ. ಗಾಂಧೀಜಿಯ ಉಪವಾಸಕ್ಕೆ ದಿಲ್ಲಿಯ ಹಿಂದೂ ಮತ್ತು ಸಿಖ್ಖರ ಕೈಯೊಳಗಿನ ಹತ್ಯಾರಗಳು ಕರಗುತ್ತವೆ.... ಆದರೆ ಪಟೇಲ್ ಮಾತ್ರ ಉಕ್ಕಿನಂತೆಯೇ ಜಡವಾಗಿರುತ್ತಾರೆ...

ಮುಸ್ಲಿಮರ ಮಾರಣಹೋಮ ತಪ್ಪಿಸಿದ ಆ ಸತ್ಯಾಗ್ರಹದಿಂದ ಗಾಂಧೀಜಿ ಇನ್ನೂ ಚೇತರಿಸಿಕೊಂಡಿರುವುದಿಲ್ಲ. ಆರ್‌ಎಸ್‌ಎಸ್‌ನ ನಾಥೂರಾಂ ಗೋಡ್ಸೆಯ ಗುಂಡು ಗಾಂಧೀಜಿಯ ಎದೆಯನ್ನು ಬಗೆಯುತ್ತದೆ. ಮುಸ್ಲಿಮರ ರಕ್ತಪಾತವನ್ನು ತಡೆದ ಗಾಂಧೀಜಿಯ ನೆತ್ತರು ಹರಿಯುತ್ತದೆ.

ದಿಲ್ಲಿಯಲ್ಲಿ ಮುಸ್ಲಿಮರ ರಕ್ತದೋಕುಳಿ ಅರೆಬರೆಯಾಯಿತೆನ್ನುವ ಹಪಾಹಪಿಯಲ್ಲಿ ರುವಂತೆ ಕಾಣುತ್ತಾರೆ. ಪಟೇಲ್ ಹೈದರಾಬಾದ್ ಸಂಸ್ಥಾನಕ್ಕೆ ಮುತ್ತಿಗೆ ಹಾಕಿದಾಗ, ತೆಲಂಗಾಣ ರೈತರ ಕೊಲೆಗೈಯುವಾಗ.. ಗಾಂಧೀಜಿಯ ಕೊಲೆಗೈಯಲು ಒಂದು ಬಾರಿ ಬಾಂಬ್ ದಾಳಿಯ ವಿಫಲಯತ್ನ ನಡೆಸಲಾಗಿತ್ತು. ಆನಂತರ ಗಾಂಧೀಜಿಯವರಿಗೆ ಸೂಕ್ತ ರಕ್ಷಣೆ ಒದಗಿಸುವ ಭಾರ ಸರ್ದಾರ್ ಪಟೇಲ್ ಅವರ ಮೇಲಿತ್ತು.

ಗಾಂಧೀಜಿಯವರಿಗೆ ಶ್ರದ್ಧಾಂಜಲಿ ಅರ್ಪಿಸಲು ನೆರೆದಿದ್ದ ಸಭೆಯಲ್ಲಿ ಜಯಪ್ರಕಾಶ್ ನಾರಾಯಣರು ಆಡಿದ ಈ ಮಾತುಗಳು ಮಾರ್ಮಿಕವಾಗಿವೆ.

"ಗಾಂಧೀಜೀಯ ಜೀವಕ್ಕೆ ಕುತ್ತು ಇದೆಯೆನ್ನುವುದು ಬಾಂಬ್ ದಾಳಿಯತ್ನದ ಮೂಲಕ ಮುಂಚೆಯೇ ತಿಳಿದಿದ್ದರೂ ಅದರ ಜೀವರಕ್ಷಣೆಗೆ ಮುಂಜಾಗ್ರತಾಕ್ರಮ ವಹಿಸಲಾಗಲಿಲ್ಲ. ಗೃಹಮಂತ್ರಿ ಪಟೇಲರು ಗಾಂಧೀ ಹತ್ಯೆಯ ವಿವರಣೆ ನೀಡದೆ ನುಣುಚಿಕೊಳ್ಳುವಂತಿಲ್ಲ....

ಗಾಂಧೀಜಿ ಹತ್ಯೆಯಾದ ಎರಡು ತಿಂಗಳೊಳಗೇ ಉಕ್ಕಿನ ಮನುಷ್ಯನ ಎದೆ ಗುಂಡಿಗೆ ಬಿರುಕುಬಿಟ್ಟಿತು. ಈ ಹಾರ್ಟ್ ಅಟ್ಯಾಕ್ ಪಟೇಲರನ್ನು ಕೊನೆಯವರೆಗೂ ಕಾಡಿತ್ತು. ಮತ್ತೆ ಮತ್ತೆ ಪಟೇಲ್ ತಮ್ಮ ರಕ್ತಸಿಕ್ತ ಹಸ್ತಗಳನ್ನು ಮ್ಯಾಕ್‌ಬೆತ್ ನಂತೆ ನೋಡಿಕೊಳ್ಳುತ್ತಿದ್ದರು.

ಸರಕಾರವು, ಕಳದಂಡೆ ಯೋಜನೆಯನ್ನು
...ಾರ್ಜುನಸಾಗರ ಯೋಜನೆಯೆಂದು
...ಾಯಿಸಿಕೊಂಡಿತು. ಆದರೆ ದಶಕಗಳವರೆಗೆ
...ುವವರಿಲ್ಲದೆ ಕರ್ನಾಟಕದ ಸರಕಾರೀ
...ಗಳಲ್ಲಿ ಕೊಳೆಯುತ್ತಿದ್ದ ಮೇಲ್ದಂಡೆ ಯೋಜನೆಗೆ
...ತ್ರ ನಿಜಾಮ್ ಇಟ್ಟಿದ್ದ ಹೆಸರೇ ಖಾಯಂ
...ಟ್ಟಿದೆ. ಹೈದ್ರಾಬಾದ್ ಕರ್ನಾಟಕದ ಇಪ್ಪತ್ತು
...ಎಕರೆಗಳಿಗಿಂತಲೂ ಹೆಚ್ಚಿನ ಜಮೀನು
...ಾವರಿಯಾಗುವಂಥ ಯೋಜನೆಯನ್ನು ಆಗಿಬಿಡುವ ಅಪಾಯವೇ ಹೆಚ್ಚು....

ಸ್ವತಂತ್ರ ಭಾರತದಲ್ಲಿ ಸಂಸ್ಥಾನವನ್ನು ವಿಲೀನಗೊಳಿಸಲು ನಿರಾಕರಿಸಿದ್ದು ನಿಜಾಮ್ ಒಬ್ಬನೇ ಅಲ್ಲ. ಕಾಶ್ಮೀರದ ರಾಜ ರಾಜಸಿಂಗ್ ಸಹ ಪ್ರತ್ಯೇಕವಾಗಿ ಉಳಿಯಲು ಹೋಗಿದ. ಹೈದ್ರಾಬಾದ್ ಕರ್ನಾಟಕ ವಿಮೋಚನೆ ದಿನಾಚರಣೆಯನ್ನು ಮುಸ್ಲಿಂ ವಿರೋಧಿ ಭಾವನೆಗಳನ್ನು ಕೆರಳಿಸಲು ಬಳಸುತ್ತಿರುವ ಹಿಂದು ಕೋಮುವಾದಿಗಳ ಪೂರ್ವಾಧಿಕಾರಿಗಳು, ರಾಜಸಿಂಗರಿಗೆ ಪ್ರತ್ಯೇಕ ಸಂಸ್ಥಾನದ ಅಸ್ತಿತ್ವ

...ೋಚನಾ ದಿನಾಚರಣೆ ವಿವಾದ

...ಲೇಷಣೆ

...ಪಿಸಿದ್ದು ನಿಜಾಮ್ ಸರಕಾರ ಎನ್ನುವ ...ಗತಿಯನ್ನು ಗಮನದಲ್ಲಿರಿಸಿಕೊಂಡು ಅವನ ...ತಳಿತವನ್ನು ವಿಮರ್ಶಿಸುವುದು ಸೂಕ್ತ.

ಮಹಾಬಲೇಶ್ವರಪ್ಪನವರು, ಹನ್ನೆರಡನೇ ...ಮಾನದ ಬಸವೇಶ್ವರರ ಚಳುವಳಿಯ ಭದ್ರ ...ನಾದಿ ಮುಸ್ಲಿಂ ಅರಸರ ಆಡಳಿತದಿಂದ ಪೆಟ್ಟು ...ಬೇಕಾಯಿತು ಎಂದು ಹೇಳಿರುವುದು ಎಷ್ಟು ...? ಹನ್ನೆರಡನೇ ಶತಮಾನದ ವಚನ ...ುವಳಿಯನ್ನು ಕರ್ನಾಟಕ ಕಂಡ ಪ್ರಥಮ ಪ್ರಜಾಪ್ರಭುತ್ವ ಚಳುವಳಿ ಎಂದೂ ವಿಶ್ಲೇಷಿಸಬಹುದಾಗಿದೆ.


...ಸ್ತಗಿ

ಮೇಲುನೋಟಕ್ಕೆ ಶೋಷಿತ ಜಾತಿಗಳ ...ಳುವಳಿಯಾಗಿ ಕಾಣುತ್ತಿದ್ದರೂ ಮೂಲದಲ್ಲಿ ಅದು ...ಶಲಕರ್ಮಿಗಳ ಆಕ್ರೋಶವಾಗಿದೆ... ...ಜಾಪ್ರಭುತ್ವ ಪರಿಕಲ್ಪನೆ ಒಡಮೂಡದಿರುವಾಗ ...ಕ್ರೋಶಗಳಿಗೆಲ್ಲ ಆಧ್ಯಾತ್ಮವೇ ಆಶ್ರಯ ನೀಡುತ್ತಿತ್ತು ...ನ್ನುವ ಮಾತು ಇಲ್ಲಿ ಸಮಂಜಸವೆನಿಸುತ್ತದೆ.... ...ಂಥ ಪ್ರಜಾಸತ್ತಾತ್ಮಕ ನೆಲೆಯ ಚಳುವಳಿಯನ್ನು ...ೊಸಕಿ ಹಾಕಿದ ಕಲ್ಯಾಣದ ಕಲಚೂರಿಗಳಲ್ಲವೆ? ...ರಳಯ್ಯಾ- ಮಧುವರಸರಿಗೆ ತಲೆದಂಡ ...ಧಿಸಿದ್ದು ಬಹಮನಿಯ ಆದಿಲ್‌ಷಹ ಅಲ್ಲ... ...ಮಹಾಬಲೇಶ್ವರಪ್ಪ ಅವರು ಮಾಡುವ ...ವ್ಯಾಖ್ಯಾನಗಳು ಪೂರ್ವಾಗ್ರಹ ಪೀಡಿತ ಎಂದು ...ಹೇಳದೆ ವಿಧಿಯಿಲ್ಲ.

ಅವರು "ಹಿಂದೂ ಜನಾಂಗದ ರಕ್ತದೋಕುಳಿ ...ಮೇಲೆ ಮುಸ್ಲಿಮ್ ಸಾಮ್ರಾಜ್ಯ ನಿರ್ಮಿಸಲು ...ಬೇಕಾದ ನೀತಿಗಳನ್ನು ನಿಜಾಮ ಮತ್ತು ಅವನ ...ಇತ್ತೇಹಾದ್ ರೂಪಿಸುತ್ತಿದ್ದವು" (ಪುಟ-19) ಎಂದು ...ಬರೆದಿರುವುದನ್ನು ವಾಸ್ತವಿಕ ಸಂಗತಿಗಳ ...ಹಿನ್ನೆಲೆಯಲ್ಲಿ ವಿಮರ್ಶಿಸಬೇಕಾಗುತ್ತದೆ.

ಪೂರ್ವಗ್ರಹ ಪೀಡಿತ ಇತಿಹಾಸ ...ವ್ಯಾಖ್ಯಾನಗಳು ಹೇಗೆ ಸಾಮಾಜಿಕ ಕ್ಷೋಭೆಗಳಿಗೆ ...ಎಡೆಮಾಡಿಕೊಡುತ್ತವೆ ಎನ್ನುವುದಕ್ಕೆ ...ವಿಮೋಚನಾ ದಿನಾಚರಣೆಯ ವಿವಾದವು ...ಜ್ವಲಂತ ಉದಾಹರಣೆಯಾಗಿದೆ. ದೇಶಕ್ಕೆ ...ಸ್ವಾತಂತ್ರ್ಯ ಸಿಕ್ಕಾಗ ನೂರಾರು ಸಂಸ್ಥಾನಗಳಲ್ಲಿ ...ಹಿಂದು ಮತ್ತು ಮುಸ್ಲಿಂ ಅರಸರಿದ್ದರು. ಅವನ್ನೆಲ್ಲ ...ಹಿಂದು ಸಂಸ್ಥಾನ ಮತ್ತು ಮುಸ್ಲಿಮ್ ಸಂಸ್ಥಾನ ...ಎಂದು ವಿಂಗಡಿಸುವುದೇ ಅವೈಜ್ಞಾನಿಕವಾಗುತ್ತದೆ.

ಅವನ್ನೆಲ್ಲ ಬ್ರಿಟೀಷ್ ವಸಾಹತು ...ಸಂಸ್ಥಾನಗಳೆಂದು ಕರೆದರೆ ಹೆಚ್ಚು ಸೂಕ್ತವೆನಿಸುತ್ತದೆ. ...1857 ರ ಸಿಪಾಯಿ ದಂಗೆ ಎಂದು ಕರೆಯಲಾಗುವ ...ಪ್ರಥಮ ಸ್ವಾತಂತ್ರ್ಯ ಹೋರಾಟದ ನಂತರ ...ಬ್ರಿಟೀಷರು ಭಾರತದಲ್ಲಿ ಕೋಮು, ಜಾತಿ, ...ಪ್ರಾಂತ್ಯ, ಭಾಷೆ ಹೀಗೆ ಜನರನ್ನು ಒಡೆಯಲು ...ಸಾಧ್ಯ ತಂತ್ರಗಳನ್ನೆಲ್ಲ ಬಳಸಿದ್ದನ್ನು ...ಗಮನದಲ್ಲಿರಿಸಿಕೊಂಡು ಸಂಸ್ಥಾನಗಳ ...ನವಾಬರ, ಅರಸರ ಮತಾಂಧತೆಯನ್ನು ಬಹಳ ...ಜಾಗರೂಕವಾಗಿ ವಿಶ್ಲೇಷಿಸಬೇಕಾಗುತ್ತದೆ. ...ಲ್ಲದೆ ಹೋದರೆ ಒಸ್ಸರಿ ಎಂಬುದು ಒಸ್ಸೀರಿಯಾ



ಉಳಿಸಿಕೊಳ್ಳಲು ಅವಕಾಶ ಕೊಡಿ ಎಂದು ಭಾರತ ಸರಕಾರವನ್ನು ಒತ್ತಾಯಿದ್ದರು.

ಇಲ್ಲಿ ನಾವು ಗಂಭೀರವಾಗಿ ಅವಲೋಕಿಸಬೇಕಾದುದು ಏನೆಂದರೆ, ಕಾಶ್ಮೀರದ ಹಿಂದು ರಾಜನ ವಿರುದ್ಧ ಶೇಖ್ ಅಬ್ದುಲ್ಲಾ ನೇತೃತ್ವದಲ್ಲಿ ಮುಸ್ಲೀಮರು ರಾಷ್ಟ್ರೀಯ ವಿಮೋಚನಾ ಚಳುವಳಿ ನಡೆಸಿದರು. ಅದೇ ರೀತಿ ಹೈದರಾಬಾದ್‌ನ ಮುಸ್ಲಿಮ್ ನಿಜಾಮನ ವಿರುದ್ಧ ಹಿಂದುಗಳು ರಾಷ್ಟ್ರೀಯ ವಿಮೋಚನಾ ಚಳುವಳಿ ನಡೆಸಿದರು.

ಸ್ವತಂತ್ರ ಭಾರತವನ್ನು ಇಂದಿಗೂ ಮುಳ್ಳಾಗಿ ಚುಚ್ಚುತ್ತಿರುವುದು ಈ ಎರಡು ವಿಲೀನಗಳು ಮಾತ್ರ. ಸರ್ದಾರ್ ಪಟೇಲ್ ಮಿಲಿಟರಿ



ತೆಲಂಗಾಣ ವೀರ ರೈತ ಹೋರಾಟಗಾರರು

ಕಾರ್ಯಾಚರಣೆಯ ಮೂಲಕ ಹೈದ್ರಾಬಾದ್ ವಿಲೀನವನ್ನು ಮಾಡಿದರೆ ನೆಹರು ಮಾತುಕತೆಯ ಮೂಲಕ ಕಾಶ್ಮೀರ ವಿಲೀನವನ್ನು ಮಾಡಿದರು.

ಹಿಂದೂ ಕೋಮುವಾದಿಗಳು ಸರ್ದಾರ್ ಪಟೇಲರನ್ನು ಹೊಗಳುತ್ತಾರೆ ನೆಹರೂರನ್ನು ತೆಗಳುತ್ತಾರೆ. ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ ಸಂವಿಧಾನದ ವಿಧಿಯನ್ನು ರದ್ದುಗೊಳಿಸುವಂತೆ ಇಂದಿಗೂ ಒತ್ತಾಯಿಸುತ್ತಾರೆ. ಹಿಂದೂ ಕೋಮುವಾದಿಗಳು ಸರ್ದಾರ್ ಪಟೇಲರನ್ನು ಹೊಗಳಲು ಮತ್ತೊಂದು ಮುಖ್ಯ ಕಾರಣವಿರುವಂತೆ ತೋರುತ್ತದೆ. ಸರ್ದಾರ್ ಪಟೇಲ್ ಹೈದರಾಬಾದ್ ವಿಲೀನ ಆನಂತರವೂ ಸೇನೆಯನ್ನು ವಾಪಸು ತೆಗೆದುಕೊಳ್ಳಲಿಲ್ಲ. ಕಮ್ಯುನಿಸ್ಟರ ನೇತೃತ್ವದಲ್ಲಿ ನಡೆದಿದ್ದ ಧೀರೋದಾತ್ತ ತೆಲಂಗಾಣ ರೈತ ಚಳುವಳಿಯನ್ನು ಸದೆಬಡಿಯಲು ಸೇನೆಯನ್ನು ಬಳಸಿದರು. ಹಿಂದೂ ಕೋಮುವಾದಿಗಳಿಗೆ ಮುಸ್ಲೀಮರಂತೆಯೇ ಕಮ್ಯುನಿಸ್ಟರು ಶತ್ರುಗಳು. ಏಕಕಾಲಕ್ಕೆ ತಮ್ಮ ಶತ್ರುದ್ವಯರನ್ನು ಸದೆಬಡಿದುದಕ್ಕಾಗಿ ಸರ್ದಾರ್‌ರನ್ನು ಹೊಗಳುತ್ತಾರೆ....

ಈ ಸಂದರ್ಭದಲ್ಲಿ ರಜಾಕಾರ್‌ರ ಹಾವಳಿಯ ಅತಿರೇಕಗಳನ್ನು ನಾವು ಗೌಣವಾಗಿ ಕಾಣುವಂತಿಲ್ಲ,

ಕ್ರೂರಿ ಕಾಶೀಮ್ ರಜ್ವಿ ಹಿಂದುಗಳ ಮಾರಣಹೋಮಕ್ಕೆ ಕರೆಕೊಟ್ಟುದನ್ನು ಖಂಡಿಸುವಾಗಲೇ ಅದರ ವಿರುದ್ಧ ಧೀರೋದಾತ್ತ ಹೋರಾಟ ನಡೆಸಿದವರಿಗೆ ಗೌರವ ಸಲ್ಲಿಸಬೇಕು. ಆದರೆ ಈ ಗೌರವಕ್ಕೆ ಕೋಮುವಾದಿ ತಳಹದಿಯಿರಬಾರದು.

ನಿಜಾಮ್ ಸಂಸ್ಥಾನವನ್ನು ಮುಸ್ಲಿಂ ಕೋಮುವಾದೀ ಸಂಸ್ಥಾನವೆಂದು ಸರಳ ಸಮೀಕರಣ ಮಾಡಬಾರದು. ನಿಜಾಮನ ಪ್ರಭುತ್ವದಲ್ಲಿ ಪಾಲು ಪಡೆದುಕೊಂಡಿದ್ದ ಮುಖ್ಯ ವರ್ಗಗಳನ್ನು ನಾವಿಲ್ಲಿ ಗುರುತಿಸಬೇಕು.

ಬ್ರಿಟೀಷರು ಹುಟ್ಟು ಹಾಕಿದ ಹೊಸಜಮೀನ್ದಾರಿ ಪದ್ಧತಿಯ ಮೇಲೆ ನಿಜಾಮ್ ಪ್ರಭುತ್ವ ನಿಂತುಕೊಂಡಿತ್ತು. ಈ ಹೊಸ ಮಾದರಿಯ ಜಮೀನ್ದಾರರಿಗೆ ಸಾಮಾನ್ಯವಾಗಿ ಐದರಿಂದ ಇಪ್ಪತ್ತೈದು ಸಾವಿರ ಎಕರೆ ಜಮೀನಿದ್ದವು. ಆಂಧ್ರದಲ್ಲಿ ರೆಡ್ಡಿ ಜಮೀನ್ದಾರರು ನಿಜಾಮನ ಬೆನ್ನೆಲುಬಾಗಿದ್ದರು. ಹೈದ್ರಾಬಾದ್ ಕರ್ನಾಟಕದ ಗೆಜ್ಜಲಗಟ್ಟೆ, ಗುಡಗುಂಟೆ, ಮೆಣೇಧಾಳ, ಹನುಮಸಾಗರ, ಉಮಲೂಟಿ ಮುಂತಾದ ಜಹಗೀರುದಾರರು ಬ್ರಾಹ್ಮಣ ಮತ್ತು ಲಿಂಗಾಯತ ಜಾತಿಗಳವರಾಗಿದ್ದರು. ಮಾಲೀ ಪಾಟೀಲ್ ಮತ್ತು ಪೊಲೀಸ್ ಪಾಟೀಲರು ಬಹಳಷ್ಟು ಕಡೆ ಲಿಂಗಾಯತರೇ ಆಗಿದ್ದರು. ಕುಲಕರ್ಣಿಗಳು ಬ್ರಾಹ್ಮಣರಾಗಿದ್ದರು. ಇವರೆಲ್ಲರ ಸಹಕಾರದಿಂದ ನಿಜಾಮ ಆಳ್ವಿಕೆ ನಡೆಸುತ್ತಿದ್ದ ಸಂಗತಿಯನ್ನು ನಾವು ಗಮನಿಸಬೇಕು. ನಿಜಾಮ್ ಸರಕಾರದಿಂದ ನಡೆದ ದೌರ್ಜನ್ಯಗಳನ್ನು ಇವರು ಮೌನವಾಗಿ ಬೆಂಬಲಿಸುತ್ತಿದ್ದರು. ಇದು ಹೈದರಾಬಾದ್ ಕರ್ನಾಟಕದ ಚಿತ್ರಣವಾದರೆ ಅತ್ತ ಆಂಧ್ರದಲ್ಲಿ ರೆಡ್ಡಿ ಜಮೀನ್ದಾರರ ಕ್ರೌರ್ಯಕ್ಕೆದುರು ರೈತರು ಸಡ್ಡು ಹೊಡೆದು ನಿಂತಿದ್ದರು. ಮೆಹಬೂಬ್ ನಗರ, ಕರ್ನೂಲ್, ಈಸ್ಟ್ ಗೋದಾವರಿ, ವೆಸ್ಟ್ ಗೋದಾವರಿ, ವಿಜಯವಾಡ ಮುಂತಾದೆಡೆಗಳಲ್ಲಿ ಒಬ್ಬೊಬ್ಬ ರೆಡ್ಡಿ ಜಮೀನ್ದಾರನೂ ಕಾಶೀಮ್ ರಜ್ವಿಯ ಅಪರಾವತಾರದಂತಿದ್ದರು. ಇವರ ದಬ್ಬಾಳಿಕೆಗೆದುರು ರೈತರು ಮಹಾನ್ ತೆಲಂಗಾಣ ಸಶಸ್ತ್ರ ಹೋರಾಟವನ್ನು ನಡೆಸಿದರು. ಮಹಾನ್ ಕಮ್ಯುನಿಸ್ಟ್ ನಾಯಕರಾದ ಪಿ.ಸುಂದರಯ್ಯ ಮತ್ತು ಬಸವಪುನ್ನಯ್ಯನವರು ಈ ಚಳುವಳಿಯ ಮುಂಚೂಣಿಯಲ್ಲಿದ್ದ ಪ್ರಮುಖರಾಗಿದ್ದರು. ತೆಲಂಗಾಣದಲ್ಲಿ ಪಿ.ಸುಂದರಯ್ಯ ದಂತಕಥೆಯಾಗಿದ್ದಾರೆ. ರೆಡ್ಡಿ ಜಮೀನ್ದಾರರ ರಕ್ಷಣೆಗೆ ಬಂದ ನಿಜಾಮ್ ಸೈನಿಕರನ್ನು ತೆಲಂಗಾಣದ ಮಹಿಳೆಯರು ತಮ್ಮ ರೈಫಲ್‌ಗಳಿಂದ ಓಡಿಸಿದರು. ಆದರೆ ಸರ್ದಾರ್ ಪಟೇಲ್‌ರ ಸ್ವತಂತ್ರ ಭಾರತದ ಸೇನೆಯನ್ನು ಎದುರಿಸಲು ಸಾಧ್ಯವಾಗಲಿಲ್ಲ. ಬ್ರಿಟೀಷ್ ಕೈಗೊಂಬೆ ನಿಜಾಮನ ಪ್ರಭುತ್ವದ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದ ರಾಷ್ಟ್ರಪ್ರೇಮಿ ರೈತರನ್ನು ಪಟೇಲ್ ಸೈನಿಕರು ಅಟ್ಟಾಡಿಸಿ ಬೇಟೆಯಾಡಿದರು.

ತೆಲಂಗಾಣ ರೈತರು ನಿಜಾಮ್ ಪ್ರಭುತ್ವದೆದುರು ನಡೆಸಿದ ಹೋರಾಟದ ತೀಕ್ಷ್ಣತೆಗೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕದ ನಾಗರಿಕ ಪ್ರತಿಭಟನೆ ತೀರಾ ಕ್ಷೀಣವಾಗಿ ಕಾಣಿಸುತ್ತದೆ....

ಪಟೇಲ್ ಸೈನ್ಯಕ್ಕೆ ನಿಜಾಮ್ ಸೈನ್ಯವನ್ನು ಸದೆಬಡಿಯಲು ಕಷ್ಟವಾಗಲಿಲ್ಲ. ಆದರೆ ತೆಲಂಗಾಣ ರೈತರ ಗೆರಿಲ್ಲಾ ಪಡೆಗಳನ್ನು ನಿರ್ನಾಮ ಮಾಡಲು ತಿಂಗಳುಗಟ್ಟಲೆ ಶ್ರಮಿಸಬೇಕಾಯಿತು.

ಕರ್ನಾಟಕ ಸರ್ಕಾರಕ್ಕೆ ಸಂಸ್ಥಾನಗಳ ವಿಮೋಚನಾ ದಿನಾಚರಣೆ ನಡೆಸುವ ಕಾತುರ ಇದ್ದದ್ದೇ ಆದರೆ ಹೈದರಾಬಾದ್ ವಿಮೋಚನಾ ದಿನಾಚರಣೆಯೊಂದಿಗೆ ಮೈಸೂರು ವಿಮೋಚನಾ ದಿನಾಚರಣೆಯನ್ನೂ ಆಚರಿಸಲು 'ಆದೇಶ ಹೊರಡಿಸುವುದು ಸೂಕ್ತ. ಮೈಸೂರು ಅರಸರು ಸ್ವಯಂ ಪ್ರೇರಣೆಯಿಂದೇನೂ ವಿಲೀನಗೊಳಿಸಲಿಲ್ಲ. ಜನ ಪ್ರತಿಭಟನೆ ನಡೆಸಿದರು; ಗೋಲಿಬಾರ್ ಆಗಿ ಸಾವು ಸಂಭವಿಸಿದವು.

ಬ್ರಿಟೀಷರು ಕೋಮು ವಿಷಬೀಜ ಬಿತ್ತಿ ಹಿಂದು ಮುಸ್ಲಿಮರ ಮಧ್ಯ ವ್ಯವಸ್ಥಿತ ಒಡಕುಂಟುಮಾಡಿದ ಮೇಲಷ್ಟೇ ಮುಸ್ಲಿಮರು ಸ್ವಾತಂತ್ರ್ಯ ಚಳುವಳಿಯಿಂದ ದೂರವುಳಿದರು. ಆದರೆ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವೆಂದು ಬಣ್ಣಿಸಲ್ಪಡುವ 1857ರ ಸಿಪಾಯಿ ದಂಗೆಗೆ ನೇತೃತ್ವ ವಹಿಸಿದವರೇ ಮುಸ್ಲಿಮರು. ಈ ಕಾರಣಕ್ಕಾಗಿ ಬ್ರಿಟೀಷರು ದಂಗೆಯನ್ನು ಸದೆಬಡಿದ ನಂತರ 27,000 ಮುಸ್ಲಿಮರನ್ನು ದೆಹಲಿ ನಗರವೊಂದರಲ್ಲಿಯೇ ಗಲ್ಲಿಗೇರಿಸಿದರು...

ಮುಸ್ಲಿಮ್ - ಹಿಂದು ಐಕ್ಯತೆಯ ನೆಲೆಗಟ್ಟಿನಲ್ಲಿ ನಡೆದ ಈ ಚಳುವಳಿಗೆ ಭಾರೀ ಶಕ್ತಿ ಸಂಚಯಗೊಂಡಿತ್ತು. ಮುಸ್ಲಿಮರು ಹಿಂದುಗಳ ಭಾವನೆಗಳನ್ನು ಗೌರವಿಸಲಿಕ್ಕಾಗಿ ಗೋಹತ್ಯೆ ನಿಷೇಧವನ್ನು ಸ್ವಯಂಪ್ರೇರಿತರಾಗಿ ಘೋಷಿಸಿದ್ದರು ಈ ಸಂಗ್ರಾಮದಲ್ಲಿ...

ಈಗಿನ ಸನ್ನಿವೇಶದಲ್ಲಿ ಯಾವುದೇ ದಿನಾಚರಣೆಗಳು ನಡೆಯಲಿ ಅವು ಹಿಂದು - ಮುಸ್ಲಿಮ್ ಐಕ್ಯತೆಯನ್ನು ಬೆಸೆಯುವಂತಿರಬೇಕು....

ಅಡ್ವಾಣಿಗೆ ಕಪ್ಪು ಬಾವುಟ ಪ್ರದರ್ಶನ - ಲಾಠಿ ಏಟು ತಿಂದ ಯುವ ಪ್ರತಿಭಟನಾಕಾರರು

ಗುಲ್ಬರ್ಗಾದಲ್ಲಿ ಪ್ರಥಮ ಹೈ.ಕ.ವಿಮೋಚನಾ ದಿನಾಚರಣೆಯ ಸಂದರ್ಭಕ್ಕೆ ಸರ್ದಾರ್ ಪಟೇಲ್‌ರ ಪುತ್ಥಳಿ ಅನಾವರಣ ಹಾಗೂ ಸಾರ್ವಜನಿಕ ಸಮಾರಂಭಕ್ಕೆ ವ್ಯಾಪಕ ಸಿದ್ಧತೆ ಮಾಡಲಾಗಿತ್ತು. ಈ ಸಂದರ್ಭವನ್ನು ತಮ್ಮ ಕೋಮುವಾದೀ ವಿಭಜನೆಗೆ ಬಳಸಲು ಮುಂದಾದ ಬಿಜೆಪಿ ದ್ವೇಷದ ವಾತಾವರಣ ಹುಟ್ಟುಹಾಕಿತು. ಅಡ್ವಾಣಿಯವರನ್ನು ಆಹ್ವಾನಿಸಿ ಇದನ್ನು ಇನ್ನೂ ಉಲ್ಬಣಗೊಳಿಸಲು ಬಯಸಿತ್ತು.

ಕೋಮುಸೌಹಾರ್ದತೆ ಕಲಕುವ, ಇತಿಹಾಸವನ್ನು ತಿರುಚುವ ಪ್ರಯತ್ನಗಳನ್ನು ಪ್ರತಿಭಟಿಸಲು ಸಿಪಿಐ(ಎಂ), ಡಿವೈಎಫ್‌ಐ, ಕ.ಪ್ರಾಂತ ರೈತ ಸಂಘದ ಕಾರ್ಯಕರ್ತರು ನಿರ್ಧರಿಸಿದರು. ಅಡ್ವಾಣಿ ಮಾತನಾಡಲು ಎದ್ದು ನಿಂತದ್ದೇ ತಡ ನೂರಾರು ಕಪ್ಪು ಬಾವುಟಗಳನ್ನು ಹಾರಿಸಿ 'ಅಡ್ವಾಣಿ ವಾಪಾಸ್ ಜಾವ್' ಎಂದು ಘೋಷಣೆ ಮೊಳಗಿಸುತ್ತಾ ಪ್ರತಿಭಟಿಸಲಾಯಿತು. ಇದರಿಂದ ಕಕ್ಕಾಬಿಕ್ಕಿಯಾದ ಅಡ್ವಾಣಿ, ಮಾತನಾಡಲು ಆಗಲೇ ಇಲ್ಲ. ಬಳಿಕ ಪೋಲೀಸರು ನುಗ್ಗಿ ಪ್ರತಿಭಟನಾಕಾರರ ಮೇಲೆರಗಿದರು. ವಿಶೇಷವಾಗಿ ಡಿವೈಎಫ್‌ಐ ಯುವ ಕಾರ್ಯಕರ್ತರ ಮೇಲೆ ತೀವ್ರ ಲಾಠಿ ಪ್ರಹಾರವಾಯಿತು. ಆದರೂ ಪ್ರತಿಭಟನೆ ನಿಲ್ಲಲಿಲ್ಲ. ಕೊನೆಗೆ ಏನೂ ಮಾತನಾಡದೇ ಅಡ್ವಾಣಿ ಅಲ್ಲಿಂದ ಹೊರಡಬೇಕಾಯಿತು.

ಪ್ರತ್ಯೇಕ ರಾಜ್ಯ

ಪ್ರಾದೇಶಿಕ ಅಸಮಾನತೆಗೆ ಪರಿಹಾರವಲ್ಲ

ಪ್ರಕಾಶ್ ಕಾರಟ್

ವರದಿ: ನಿತ್ಯಾನಂದಸ್ವಾಮಿ

"ಪ್ರತ್ಯೇಕ ರಾಜ್ಯ ರಚನೆಯಿಂದ ಪ್ರಾದೇಶಿಕ ಅಸಮಾನತೆಯ ಸಮಸ್ಯೆಗೆ ಪರಿಹಾರ ದೊರಕುವುದಿಲ್ಲ" ಎಂದು ಖ್ಯಾತ ಆರ್ಥಿಕ ತಜ್ಞರು, ಸಿಪಿಐ(ಎಂ)ನ ಪೊಲಿಟ್ ಬ್ಯೂರೊ ಸದಸ್ಯರಾದ ಪ್ರಕಾಶ್ ಕಾರಟ್ ಅಭಿಪ್ರಾಯಪಟ್ಟರು. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ನಿವಾರಿಸುವ ಪರ್ಯಾಯ ಮಾರ್ಗೋಪಾಯಗಳ ಕುರಿತು ಸಪ್ಟಂಬರ್ 5 ರಂದು ಗುಲ್ಬರ್ಗಾದಲ್ಲಿ ನಡೆದ ರಾಜ್ಯಮಟ್ಟದ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

'ಇಂದು ನಮ್ಮ ದೇಶದಲ್ಲಿ ಒಂದೊಂದು ರಾಜ್ಯದ ಒಳಗೆ ಪ್ರಾದೇಶಿಕ ಅಸಮಾನತೆಗಳಿವೆ ಮಾತ್ರವಲ್ಲ ರಾಜ್ಯ ರಾಜ್ಯಗಳ ನಡುವೆ ಅಸಮಾನತೆಗಳಿವೆ' ಎಂದು ವಿಶ್ಲೇಷಿಸಿದ ಅವರು 'ಇದಕ್ಕೆ ಬಂಡವಾಳಶಾಹಿ ಪದ್ಧತಿಯೇ ಮೂಲ ಕಾರಣವಾಗಿದೆ' ಎಂದು ಹೇಳಿದರು. ಲಾಭಗಳಿಕೆಯೇ ಬಂಡವಾಳಶಾಹಿ ಪದ್ಧತಿಯ ಏಕೈಕ ಗುರಿಯಾಗಿರುವುದರಿಂದ ಅದು ತನ್ನ ಚಟುವಟಿಕೆಗಳನ್ನು ಕೆಲವೇ ಕಡೆಗಳಲ್ಲಿ ಕೇಂದ್ರೀಕರಿಸುತ್ತದೆಯಲ್ಲದೆ ಸಮಾಜದ ಸಮಾನ ಬೆಳವಣಿಗೆಯ ಬಗ್ಗೆ ಆಸಕ್ತಿ ಹೊಂದಿರುವುದಿಲ್ಲ. ಇದು ಭಾರತದಲ್ಲಿ ನಮ್ಮ ಅನುಭವ ಮಾತ್ರವಲ್ಲ, ಇಡೀ ವಿಶ್ವದ ಅನುಭವವಾಗಿದೆ.

ಸ್ವಾತಂತ್ರ್ಯಾ ನಂತರ, 50ರ ದಶಕದಲ್ಲಿ ದೇಶದಲ್ಲಿ ಅಂದಿನ ಪ್ರಧಾನಿ ನೆಹರುರವರು ಪಂಚವಾರ್ಷಿಕ ಯೋಜನೆಗಳನ್ನು ಆರಂಭಿಸುವಾಗ ಹಿಂದುಳಿದ ಪ್ರದೇಶಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಒದಗಿಸುವುದು ಅದರ ಉದ್ದೇಶವಾಗಿತ್ತು. ಹತ್ತು ಪಂಚವಾರ್ಷಿಕ ಯೋಜನೆಗಳು ಗತಿಸಿದ್ದರೂ ಪ್ರಾದೇಶಿಕ ಅಸಮಾನತೆಗಳು ಕಡಿಮೆಯಾಗಲಿಲ್ಲ. ಸ್ವಾತಂತ್ರ್ಯ ನಂತರ ಭಾರತ ಸರ್ಕಾರ ಬಂಡವಾಳಶಾಹಿ ಅಭಿವೃದ್ಧಿಯ ದಾರಿಯನ್ನು ಅನುಸರಿಸಿದ್ದೇ ಈ ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿದೆ. ಬ್ರಿಟೀಷ್ ಬಂಡವಾಳಶಾಹಿಗಳು ಮುಂಬೈ, ಮದ್ರಾಸ್, ಕಲ್ಕತ್ತಾ ನಗರಗಳನ್ನು ಅಭಿವೃದ್ಧಿಪಡಿಸುತ್ತಾ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ಅನುಸರಿಸಿದ ಬಂಡವಾಳದ ಕೇಂದ್ರೀಕರಣದ ನೀತಿಯನ್ನು ಸ್ವಾತಂತ್ರ್ಯಾ ನಂತರವೂ ಮುಂದುವರೆಸಿಕೊಂಡು ಬರಲಾಯಿತು. 90ರ ದಶಕದಲ್ಲಿ ಸುಧಾರಣೆಗಳ ಹೆಸರಿನಲ್ಲಿ ಉದಾರೀಕರಣದ ಧೋರಣೆಯನ್ನು ಅಂಗೀಕರಿಸಿ, ಮಾರುಕಟ್ಟೆ ಶಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾರಂಭಿಸಿದ್ದರ ಫಲವಾಗಿ ಆರ್ಥಿಕ, ಸಾಮಾಜಿಕ ಹಾಗೂ ಪ್ರಾದೇಶಿಕ ಅಸಮಾನತೆಗಳು ಹೆಚ್ಚಾಗಿವೆ.

ಉದಾರೀಕರಣದ ನೀತಿಗಳನ್ನು ಜಾರಿಗೆ ತಂದ ರಾಜ್ಯಗಳಲ್ಲಿ ಪ್ರಗತಿಯಾಗಿದೆ ಎಂದು ಯೋಜನಾ ಆಯೋಗದ ಉಪಾಧ್ಯಕ್ಷ ಅಪ್ಲುವಾಲಿಯ 2002 ರಲ್ಲಿ ಬರೆದ ಒಂದು ಲೇಖನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಟೀಕಿಸಿದ ಪ್ರಕಾಶ್ ಕಾರಟ್ ಉದಾರೀಕರಣದಿಂದ ಸಮಾಜದ ಮೇಲ್ ಸ್ತರದಲ್ಲಿರುವ ಒಂದು ಸಣ್ಣ ವಿಭಾಗಕ್ಕೆ ಅನುಕೂಲವಾಗಿದ್ದರೂ ಸಮಾಜದಲ್ಲಿ ಆರ್ಥಿಕ ಅಂತರವನ್ನು ಅದು ಹೆಚ್ಚಿಸಿದೆ ಎಂದು ಹೇಳಿದರು, ಮಾರುಕಟ್ಟೆಯ ಅಗತ್ಯತೆಯನ್ನು ತಳ್ಳಿಹಾಕಲು ಬರುವುದಿಲ್ಲ; ಆದರೆ ಎಲ್ಲವನ್ನು ಮಾರುಕಟ್ಟೆ ಶಕ್ತಿಗಳಿಗೆ ಬಿಟ್ಟುಬಿಡುವುದು ಅಪಾಯಕಾರಿಯಾಗಿದೆ. ಆದರೆ ಕಾಂಗ್ರೆಸ್, ಬಿಜೆಪಿ ಅಂತಹ ರಾಜಕೀಯ ಪಕ್ಷಗಳು ವಿಶ್ವ ಬ್ಯಾಂಕ್ ಹೇಳಿಕೊಡುತ್ತಿರುವುದನ್ನೇ ಗಿಳಿಪಾಠ ಮಾಡಿಕೊಂಡಿರುವುದು ದುರದೃಷ್ಟಕರವಾಗಿದೆ.

ಪ್ರಾದೇಶಿಕ ಅಸಮಾನತೆಗೆ ಪರ್ಯಾಯ ಮಾರ್ಗೋಪಾಯ ಏನು ಎಂದು ಪ್ರಶ್ನೆಮಾಡಿದ ಕಾರಟ್ ಅವರು 'ಅಪಾರವಾದ ಸಾಂಸ್ಕೃತಿಕ ವೈವಿಧ್ಯತೆಗಳನ್ನು ಹೊಂದಿರುವ ಈ ದೇಶಕ್ಕೆ ಅಬಿವೃದ್ಧಿಯ ಒಂದೇ ಮಾದರಿ ಇರಲು ಸಾಧ್ಯವಿಲ್ಲ" ಎಂದರು. ಆದ್ದರಿಂದಲೇ ನಾವು ಒಂದು ಫೆಡರಲ್ ಚೌಕಟ್ಟನ್ನು ಅಂಗೀಕರಿಸಿದ್ದೇವೆ. ಈ ಚೌಕಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವೆ ಆರೋಗ್ಯಕರವಾದ ಸಂಬಂಧಗಳು ಇರಬೇಕಾಗುತ್ತದೆ. ಅಧಿಕಾರ ವಿಕೇಂದ್ರೀಕರಣದ ತತ್ವಕ್ಕೆ ಬದ್ಧವಾದ ಸಂಬಂಧಗಳು ಆಗಿರಬೇಕಾಗುತ್ತದೆ. ಅಧಿಕಾರದ ವಿಕೇಂದ್ರೀಕರಣ ರಾಜ್ಯಗಳ ಮಟ್ಟಕ್ಕೆ ನಿಲ್ಲದೆ ಪಂಚಾಯತ್ ಮಟ್ಟಕ್ಕೆ ಇಳಿದು ಬರಬೇಕಾಗುತ್ತದೆ. ಭಾಷಾವರು ರಾಜ್ಯಗಳ ನಿರ್ಮಾಣದ ಹಿಂದಿರುವ ಉದ್ದೇಶವೇ ಇದಾಗಿದೆ. ಗಾಂಧೀಜಿಯವರು ಈ ನೀತಿಯ ಪ್ರತಿಪಾದಕರಾಗಿದ್ದರು. 1920ರಲ್ಲೇ ಅವರು ಭಾಷಾವಾರು ಪ್ರಾಂತ್ರಗಳ ಹೆಸರಿನ ಕಾಂಗ್ರೆಸ್ ಸಮಿತಿಗಳನ್ನು ರಚಿಸಿದ್ದರು. ಆದ್ದರಿಂದಲೇ ಕರ್ನಾಟಕ ರಾಜ್ಯ ನಿರ್ಮಾಣ ಆಗುವ ಮೊದಲೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಸ್ತಿತ್ವಕ್ಕೆ ಬಂದಿತ್ತು. ಆದರೆ ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಸರ್ಕಾರ ಭಾಷಾವಾರು ಪ್ರಾಂತ್ಯಗಳ ರಚನೆಗೆ ಮುಂದಾಗಲಿಲ್ಲ. ಭಾಷಾವಾರು ರಾಜ್ಯಗಳ ನಿರ್ಮಾಣಕ್ಕಾಗಿ ನಡೆದ ಬೃಹತ್ ಜನಾಂದೋಲನದ ನಂತರವೇ ರಾಜ್ಯಗಳ ಪುನರ್ನಿರ್ಮಾಣವಾಯಿತು. ಇದು ಪ್ರಜಾಪ್ರಭುತ್ವೀಕರಣದ ಮೊದಲ ಹೆಜ್ಜೆಯಾಗಿತ್ತು.

ಭಾಷಾವಾರು ರಾಜ್ಯಗಳ ನಿರ್ಮಾಣದ ನಂತರವೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಆಗಲಿಲ್ಲ. ಯಾಕೆಂದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಂಡವಾಳಶಾಹಿಪರ ಧೋರಣೆ ಬದಲಾಗಲಿಲ್ಲ. ಜನರ ಸಾಮಾಜಿಕ ಆರ್ಥಿಕ



ತಮ್ಮ ಪ್ರದೇಶ ಹಿಂದುಳಿದಿದೆ, ಅಭಿವೃದ್ಧಿಯಾಗಬೇಕು ಎಂಬುದು ಎಲ್ಲೆಡೆ ಕೇಳಿ ಬರುತ್ತಿರುವ ಕೂಗು. ಇಂತಹ ಪ್ರಾದೇಶಿಕ ಅಸಮಾನತೆಯನ್ನು ಅರಿಯುವ, ಅರ್ಥೈಸುವ ಅನಿವಾರ್ಯತೆ, ಜನರ ಒತ್ತಡ ಆಳುವ ಸರ್ಕಾರಗಳ ಮೇಲೂ ಇದೆ. ಹಾಗಾಗಿ ಕರ್ನಾಟಕ ಸರ್ಕಾರ ಪ್ರಾದೇಶಿಕ ಅಸಮಾನತೆ ತೊಲಗಿಸಲೆಂದು ಹಲವು ಸಮಿತಿಗಳನ್ನು ರಚಿಸಿದೆ, ಶಿಫಾರಸ್ಸುಗಳನ್ನು ಪಡೆದಿದೆ. ಅಂತಹ ಒಂದು ವಿಶಿಷ್ಟ ಯತ್ನ ಡಾ. ಡಿ.ಎಂ.ನಂಜುಂಡಪ್ಪನವರ ಸಮಿತಿಯ ವರದಿ. ಪ್ರಾದೇಶಿಕ ಅಸಮಾನತೆಯಂತಹ ಗಂಭೀರವಾದ ಪ್ರಶ್ನೆಗೆ ಪರಿಹಾರ ಮಾರ್ಗವೇನು? ಸರ್ಕಾರಕ್ಕೆ ನಿಜವಾಗಿಯೂ ಅಂತಹ ಇಚ್ಛಾಶಕ್ತಿ ಇದೇಯೇ? ಅಥವಾ ಜನತೆಯ ಪ್ರಜಾಸತ್ತಾತ್ಮಕ ಒತ್ತಡದಿಂದ ನುಣುಚಿಕೊಳ್ಳಲು ಯತ್ನಿಸುತ್ತಿದೆಯೇ? ಇಂತಹ ಅಸಮಾನತೆಯ ಹುಟ್ಟು ಹೇಗೆ? ನಿಜ ಪರಿಹಾರ ಹೇಗೆ, ಅಭಿವೃದ್ಧಿ ಸಾಧನೆಯ ಪರ್ಯಾಯ ಮಾರ್ಗಗಳೇನು? ಎಂಬ ಬಗ್ಗೆ ವಿಶಿಷ್ಟವಾದ ವಿಚಾರ-ಮಂಥನ ನಡೆಯಿತು. ಅದರ ಸಂಕ್ಷಿಪ್ತ ವರದಿಯಿಲ್ಲಿದೆ.

ಪರಿಸ್ಥಿತಿ ಬದಲಾಗಲಿಲ್ಲ, ಆದ್ದರಿಂದಲೇ ಪ್ರತ್ಯೇಕ
ರಾಜ್ಯದ ಕೂಗು ಕೇಳಿಬರುತ್ತಿದೆ. ಹೋರಾಟಮಾ
ಗಳಿಸಿದ್ದನ್ನು ಒಡೆದು ಛಿದ್ರ ಛಿದ್ರ ಮಾಡುವ ಪ್ರಯ
ಆರಂಭವಾಗಿದೆ. ಕರ್ನಾಟಕದಲ್ಲಿ ಉತ್ತರಕರ್ನಾಟ
ಕೊಡಗು, ಆಂಧ್ರದಲ್ಲಿ ತೆಲಂಗಾಣ
ಮಹಾರಾಷ್ಟ್ರದಲ್ಲಿ ವಿದರ್ಭ ಪ್ರತ್ಯೇಕ ರಾ
ರಚನೆಗಾಗಿ ಚಳುವಳಿಗಳು ನಡೆಯುತ್ತಿವೆ. ಆದ
ಪ್ರತ್ಯೇಕ ರಾಜ್ಯ ರಚನೆಯಿಂದಾಗಿ ಪ್ರಾದೇ
ಅಸಮಾನತೆ ನಿವಾರಣೆಯಾಗುವ ಸಾಧ್ಯತೆಯಿ

ಸಣ್ಣ ಸಣ್ಣ ರಾಜ್ಯಗಳ ನಿರ್ಮಾಣದಿಂ
ಆಡಳಿತಾತ್ಮಕವಾಗಿ ಅನುಕೂಲತೆಯಾಗಲಿದೆ ಎಂ
ವಾದವನ್ನು ಕಾರಟ್ ತಳ್ಳಿ ಹಾಕಿದರು. ಸಣ್ಣ ಸ
ರಾಜ್ಯಗಳು ಆರ್ಥಿಕವಾಗಿ ಅಸಹಾಯಕವಾಗುತ್ತ
ಕೇಂದ್ರ ಸರ್ಕಾರದ ಮೇಲೆ ಅವಲಂಬ
ಹೆಚ್ಚಾಗುತ್ತದೆ. ಮಣಿಪುರ ಸರ್ಕಾರವು ತ
ನೌಕರರಿಗೆ ಸಂಬಳ ಕೊಡುವುದಕ್ಕೂ ಕೇಂ
ಸರ್ಕಾರವನ್ನು ಅವಲಂಬಿಸಿದೆ. ಅರುಣಾಚ
ಪ್ರದೇಶದ ಆಡಳಿತ ರೂಢ ಪಕ್ಷವು ಕೇಂದ್ರದಿಂ
ಹೆಚ್ಚಿನ ನೆರವನ್ನು ಪಡೆಯುವ ಉದ್ದೇಶದಿಂ
ಕೇಂದ್ರದಲ್ಲಿ ಯಾವ ಪಕ್ಷದ ಸರ್ಕಾ
ಅಧಿಕಾರದಲ್ಲಿರುತ್ತದೆಯೋ ಆ ಪಕ್ಷವನ
ಬೆಂಬಲಿಸುತ್ತದೆ.

ಬಿಜೆಪಿಗೆ ಅಧಿಕಾರ ವಿಕೇಂದ್ರೀಕರಣದ
ನಂಬಿಕೆ ಇಲ್ಲ. ಅದು ಕೇಂದ್ರ ಸರ್ಕಾ
ಬಲಿಷ್ಠವಾಗಿರಬೇಕೆಂದು ಬಯಸುತ್ತದೆ. ಆದ್ದರಿಂ
ರಾಜ್ಯಗಳನ್ನು ವಿಭಜಿಸಿ ಸಣ್ಣ ಸಣ್ಣ 60 ರಾಜ್ಯಗಳ
ರಚಿಸಬೇಕೆಂದು ಅದು ಹೇಳುತ್ತದೆ. ಈ ಧೋರ
ಅಧಿಕಾರದ ಕೇಂದ್ರೀಕರಣದ ಪರವಾಗಿದೆ. ನ
ಫೆಡರಲ್ ಸ್ವರೂಪದ ಸಂವಿಧಾನದಲ್ಲಿ ಪ್ರಾದೇ
ಅಸಮಾನತೆಗೆ ಪರಿಹಾರವಿದೆ. ಸಂವಿಧಾನದ 6
ಶೆಡ್ಯೂಲ್ ಅಡಿಯಲ್ಲಿ ಆದಿವಾಸಿಗಳು ವಾಸಿಸು
ಪ್ರದೇಶಗಳಿಗೆ ಪ್ರಾದೇಶಿತ ಸ್ವಾಯತ್ತತೆಯ
ನೀಡಬಹುದು. ತ್ರಿಪುರಾದ ಸಿಪಿಐ(ಎಂ) ನೇತೃತ್ವ
ಎಡರಂಗದ ಸರ್ಕಾರ ಪ್ರಾದೇಶಿಕ ಸ್ವಾಯ
ಮಂಡಳಿಯನ್ನು ರಚಿಸಿ ಅಲ್ಲಿಯ ಬುಡಕಟ್ಟು ಜ
ಹಿತ ಕಾಪಾಡಲು ವ್ಯವಸ್ಥೆ ಮಾಡಿದೆ. ಇದರಿಂದ
ಅಲ್ಲಿ ವಿಛಿದ್ರಕಾರಿಗಳು ಎಬ್ಬಿಸುತ್ತಿದ್ದ ಪ್ರತ
ರಾಜ್ಯದ ಕೂಗಿಗೆ ಬೆಂಬಲ ವ್ಯಕ್ತವಾಗಲ
ಮಾತ್ರವಲ್ಲ ಮಂಡಳಿಗೆ ಇತ್ತೀಚೆಗೆ ನಡ
ಚುನಾವಣೆಯಲ್ಲಿ ಒಟ್ಟು 20 ಸ್ಥಾನಗಳ ಪೈಕಿ
ಸ್ಥಾನಗಳನ್ನು ಸಿಪಿಐ(ಎಂ) ಗೆಲ್ಲಲು ಸಾಧ್ಯವಾಗಿ
ಸಂವಿಧಾನದ 370ನೇ ವಿದಿ ಪ್ರಕಾರ ಜಮ
ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದೆ. ಇ
ವಿಧಿ ಅನ್ವಯ ನಾಗಾಲ್ಯಾಂಡ್, ಮಿಜೋರಾ
ಹಿಮಾಚಲ ಪ್ರದೇಶ ಮೊದಲಾದ ರಾಜ್ಯಗ
ವಿಶೇಷ ಸ್ಥಾನ ಮಾನ ನೀಡಲಾಗಿದೆ. ಸಂವಿಧಾ
ಈ ಸೌಲಭ್ಯವನ್ನು ಇತರ ರಾಜ್ಯಗಳ ನಿರ್ದಿ
ಪ್ರದೇಶಗಳಿಗೆ ಅನ್ವಯಿಸಬಹುದು. ಹಿಂದು
ಪ್ರದೇಶಗಳಿಗೆ ಅಭಿವೃದ್ಧಿ ಮಂಡಳಿಗಳ
ರಚಿಸಿಕೊಳ್ಳಲು ಅವಕಾಶವಿದೆ.

ಈ ಎಲ್ಲ ಕ್ರಮಗಳ ನಂತರವೂ ಪ್ರಾದೇ
ಅಸಮಾನತೆ ತನ್ನಷ್ಟಕ್ಕೆ ಕಡಿಮೆಯಾಗಲಾರ
ಹಿಂದುಳಿಯುವಿಕೆಗೆ ಕಾರಣವಾದ ಭ
ಸಂಬಂಧಗಳು ಬದಲಾಗಬೇಕು. ಹಿಂದು
ಪ್ರದೇಶಗಳಿಗೆ ಹೆಚ್ಚು ಸಂಪನ್ಮೂಲಗಳ
ಒದಗಿಸಬೇಕು. ಒದಗಿಸಿದ ಹಣ ಜನ
ತಲುಪಬೇಕು. ಇದೆಲ್ಲವು ಸಾಧ್ಯವಾಗಬೇಕಾ
ಬಲಿಷ್ಠವಾದ ಜನಾಂದೋಲನ ಬೇಕು ಎಂ
ಪ್ರಕಾಶ್ ಕಾರಟ್ ಹೇಳಿದರು.

ನಂಜುಂಡಪ್ಪ ವರದಿಯ ಕೊರತೆಗಳ ವಿಮ
ಅಗತ್ಯ :

ಸಮಾವೇಶದ ಆಶಯ ಭಾಷಣ ಮಾಡಿದ
ತಜ್ಞರೂ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ
ಆಗಿರುವ ಜಿ.ಎನ್.ನಾಗರಾಜ, ಕರ್ನಾಟ
ಪ್ರಾದೇಶಿಕ ಅಸಮಾನತೆಯ ಕುರಿತ
ಅಧ್ಯಯನದಲ್ಲಿ ಡಾ। ನಂಜುಂಡಪ್ಪ ಸ
ವರದಿಯು ಒಂದು ಪ್ರಮುಖ ಘಟ್ಟವಾಗಿದೆ ಎ
ಹೇಳಿದರು. ನಂಜುಂಡಪ್ಪ ವರದಿ
ಅಮೂಲ್ಯವಾದ ಅಂಕಿ ಅಂಶಗಳ
ಒಳಗೊಂಡಿದೆಯಲ್ಲದೆ ಹಿಂದುಳಿಯುವಿಕೆ
ಅಳೆಯುವ ವೈಜ್ಞಾನಿಕ ಮಾನದಂಡಗಳನ್ನು

ನಿರಂತರ ಹೋರಾಟದಿಂದ ಮಾತ್ರ ಅಸಮಾನತೆ ನಿವಾರಣೆ ಸಾಧ್ಯ - ಶಾಂತರಸ

ಪ್ರಾದೇಶಿಕ ಅಸಮಾನತೆ ಇಂದು ನಿನ್ನೆಯದಲ್ಲ. ಕರ್ನಾಟಕದ ಏಕೀಕರಣದಿಂದಲೂ ಈ ಅಸಮಾನತೆ ಹಾಗೇ ಮುಂದುವರಿದು ಕೊಂಡು ಬಂದಿದೆ. ಈ ಅಸಮಾನತೆ ನಿವಾರಣೆಗೆ ನಿರಂತರ ಹೋರಾಟವೊಂದೇ ದಾರಿ ಎಂದು ಹಿರಿಯ ಸಾಹಿತಿಗಳಾದ ಶಾಂತರಸ ಅವರು ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

ಹೈದ್ರಾಬಾದ-ಕರ್ನಾಟಕ ಪ್ರದೇಶದಲ್ಲಿ ಕೇವಲ ಆರ್ಥಿಕ ಅಸಮಾನತೆ ಮಾತ್ರ ಕಾಣುತ್ತಿಲ್ಲ. ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಮತ್ತು ಭಾಷಿಕವಾಗಿ ಅತ್ಯಂತ ತೀವ್ರ ಅಸಮಾನತೆ ಇದೆ. ಅತ್ಯಂತ ಹಿಂದುಳಿದ ಪ್ರದೇಶವೆಂದು ಕಳೆದ 50 ವರ್ಷಗಳಿಂದಲೂ ಗುರುತಿಸುತ್ತಾ ಬಂದಿದ್ದು, ಈ ಹಣೆ ಪಟ್ಟಿಯನ್ನು ಅಳಿಸಲು ಕರ್ನಾಟಕ ಸರ್ಕಾರ ಹಾಗೂ ಈ ಭಾಗದ ಶಾಸಕರು, ಮಂತ್ರಿಗಳು ಯಾವ ಪ್ರಯತ್ನವನ್ನೂ ಮಾಡಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಜನಪ್ರತಿನಿಧಿಗಳು ಇದೇ ಹೆಸರಿನಲ್ಲಿ ಜನರ ಬದುಕನ್ನು ಹಿಂಡಿ ಹಿಸುಕುತ್ತಿದ್ದಾರೆ ಎಂದು ತೀವ್ರವಾಗಿ ಟೀಕಿಸಿದರು.

ಮುಂದುವರಿದು ಅವರು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಬಗ್ಗೆ ಇತರರು ನಿರ್ಲಕ್ಷಿಸುವುದಾಗಲೀ ಅಥವಾ ಕೀಳರಿಮೆಯಿಂದ, ಅಸಡ್ಡೆಯನ್ನು ತೋರಿಸಿದಾಗ ಈ ಪ್ರದೇಶದ ಜನ ಪ್ರತಿಭಟಿಸುವ ಮಟ್ಟಿಗೆ ನಾವು ಬೆಳೆಯಬೇಕೆಂದು ಕರೆ ನೀಡಿದರು. ಅಸಮಾನತೆಯ ಅಂಶವನ್ನು ಜನ ಅರಿಯುವಂತಾಗಬೇಕು. ಆ ದಿಶೆಯಲ್ಲಿ ಬುದ್ದಿ ಜೀವಿಗಳು, ಸಾಹಿತಿಗಳು, ಸಂಘಟನಾ ಕಾರರು ಜನರಲ್ಲಿ ಜಾಗೃತಿ ಮೂಡಿಸಬೇಕು. ಅಸಮಾನತೆ ನಿವಾರಣೆ ಬಗ್ಗೆ ರಾಜ್ಯ ಸಮಾವೇಶ ಹಮ್ಮಿಕೊಂಡಿದ್ದು ಅತ್ಯಂತ ಸ್ವಾಗತಾರ್ಹ. ಇಂತಹ ಸಮಾವೇಶಗಳು ಇನ್ನೂ ಹೆಚ್ಚಾಗಬೇಕೆಂದು ಕರೆ ನೀಡಿದರು.

ಒಳಗೊಂಡಿದೆ. ಆದರೆ ರಾಜ್ಯದ ಪ್ರಾದೇಶಿಕ ಅಸಮಾನತೆಯ ಮೂಲ ಕಾರಣಗಳ ಮೇಲೆ ಈ ವರದಿ ಯಾವುದೇ ಬೆಳಕು ಚೆಲ್ಲುವುದಿಲ್ಲ ಎಂದು ಅವರು ವಿಷಾದಿಸಿದರು. 'ಬೇಕಾದಷ್ಟು ಹಣ ಒದಗಿಸಿ ಅಭಿವೃದ್ಧಿ ಕೆಲಸಗಳನ್ನು ಮಾಡಿದರೂ ಅಭಿವೃದ್ಧಿ ಆಗುವುದಿಲ್ಲ' ಎನ್ನುವ ಇನ್ನೊಂದು ವಾಕ್ಯವನ್ನು ಉದಾಹರಿಸಿದ ನಾಗರಾಜ ಅವರು ಪ್ರಾದೇಶಿಕ ಅಸಮಾನತೆಯ ಮೂಲಕ್ಕೆ ಹೋಗುವ ಸಾಮರ್ಥ್ಯ ನಂಜುಂಡಪ್ಪ ಸಮಿತಿಗೆ ಇದ್ದರೂ ಅವರು ಮೂಲಕ್ಕೆ ಹೋಗುವ ಪ್ರಯತ್ನ ಮಾಡಲಿಲ್ಲ ಎಂದರು.

ವರದಿಯು ಭೂ ಸಂಬಂಧಗಳ ಪ್ರಶ್ನೆಯನ್ನು ಮುಟ್ಟದಿರುವುದು, ಕೃಷಿಕೂಲಿಕಾರರ ಪ್ರಶ್ನೆಯ ಕುರಿತು ಮೌನವಾಗಿರುವುದನ್ನು ಆಕ್ಷೇಪಿಸಿದ ಅವರು ಭೂ ಸುಧಾರಣೆಯಂತಹ ಕ್ರಮಗಳಿಂದ ಮಾತ್ರ ಪ್ರಾದೇಶಿಕ ಅಸಮಾನತೆಗಳನ್ನು ತೊಡೆದು ಹಾಕಬಹುದು ಎಂದು ಹೇಳಿದರು.

ಮುಂಬೈಯಲ್ಲಿ ಬಂಡವಾಳದ ಕೇಂದ್ರೀಕರಣಕ್ಕೆ ತೊಡಗಿದ ಬ್ರಿಟಿಷರು ತಮ್ಮ ಕೈಗಾರಿಕೆಗಳಿಗೆ ಅಗತ್ಯ ಕಚ್ಚಾ ವಸ್ತುಗಳನ್ನು ಪೂರೈಸಿಕೊಳ್ಳಲು ಕಾರವಾರ, ಧಾರವಾಡ ಮತ್ತು ಬೆಳಗಾಂ ಜಿಲ್ಲಾ ಪ್ರದೇಶವನ್ನು ಹಿನ್ನಾಡಾಗಿ ಬಳಸಿಕೊಂಡರು. ಇಲ್ಲಿನ ದೇಸಕತಿಗಳೆನ್ನುವ ಭೂಮಾಲಕರನ್ನು ವಿಶ್ವಾಸಕ್ಕೆ ತೆಗೆದುಕೊಂಡರು. ರಾಜರನ್ನು ಸೋಲಿಸಿ ವಶಪಡಿಸಿಕೊಂಡಿದ್ದ ಭೂಮಿಯನ್ನು ಇವರಿಗೆ 'ಇನಾಂ' ನೀಡಿದರು. ಹೀಗೆ ಈ ಪ್ರದೇಶದಲ್ಲಿ ಪ್ರತಿಗಾಮಿ ಭೂಮಾಲಿಕ ಪದ್ಧತಿ ಗಟ್ಟಿಯಾಯಿತು. ಇದೇ ರೀತಿಯಲ್ಲಿ ಹೈದರಾಬಾದ್ ಕರ್ನಾಟಕದಲ್ಲಿ ನಿಜಾಮನ ಅಡಿಯಲ್ಲಿ ಜಾರಿಯಲ್ಲಿದ್ದ ಪಾಳೇಗಾರಿ ಪದ್ಧತಿಯೂ ಹಾಗೆಯೇ ಮುಂದುವರೆಯಿತು. ಆದರೆ ಹಳೇ ಮೈಸೂರು ಪ್ರದೇಶದಲ್ಲಿ ಮಾತ್ರ ಅರಸರಾಗಿದ್ದ ಹೈದರಾಲಿ ಮತ್ತು ಟಿಪ್ಪು ಬ್ರಿಟಿಷರನ್ನು ಎದುರುಹಾಕಿಕೊಂಡರು. ಬ್ರಿಟಿಷರನ್ನು ಎದುರಿಸಲು ಎಲ್ಲಾ ರೀತಿಯಿಂದಲೂ ಸಶಕ್ತರಾಗಲು ಅವರು ಸುತ್ತಲಿನ ಪಾಳೆಗಾರರನ್ನು ಸೋಲಿಸಿ ಸಂಸ್ಥಾನದ ಆದಾಯವನ್ನು ಹೆಚ್ಚಿಸಿಕೊಂಡರು. ಮಧ್ಯವರ್ತಿಗಳನ್ನು ತೆಗೆದುಹಾಕಿ ರೈತವಾರಿ ಪದ್ಧತಿಯನ್ನು ಜಾರಿಗೆ ತರುವ ಮೂಲಕ ಬೊಕ್ಕಸಕ್ಕೆ ನೇರವಾಗಿ ಆದಾಯ ಬರುವಂತೆ ಮಾಡಿಕೊಂಡರು. ಮದ್ದು ಗುಂಡು ತಯಾರಿಸುವ ಕಾರ್ಖಾನೆಗಳು ಸೇರಿದಂತೆ ಕೈಗಾರೀಕರಣ, ಆಧುನಿಕ ಕೃಷಿ, ನೀರಾವರಿ, ವಿದ್ಯುತ್ ಉತ್ಪಾದನೆ, ಬ್ಯಾಂಕ್, ಮೊದಲಾದವುಗಳಿಗೆ ಆದ್ಯತೆ ನೀಡಿದರು. ಹೀಗಾಗಿ ಈ ಪ್ರದೇಶದಲ್ಲಿ ಪಾಳೇಗಾರಿ ಪದ್ಧತಿ ನಾಶವಾಗಿ ಅಭಿವೃದ್ಧಿಗೆ ಚಾಲನೆ ದೊರೆಯುವಂತಾಯಿತು. ಭೂ ಸುಧಾರಣೆಗಳಿಗಾಗಿ ಗೇಣಿ ಕಾಯ್ದೆಗಾಗಿ ಕೇರಳದಲ್ಲಿ ನಡೆದ ಚಳುವಳಿಯ ಪರಿಣಾಮದಿಂದಾಗಿ ದ.ಕ. ಮತ್ತು ಉ.ಕ. ಜಿಲ್ಲೆಗಳಲ್ಲಿ ಗೇಣಿಕಾಯ್ದೆಗಾಗಿ ಚಳುವಳಿ ನಡೆಯಿತು. ಇದು ಮುಂದೆ ಭೂಮಿತಿ ಕಾಯ್ದೆಗೆ ದಾರಿಮಾಡಿಕೊಟ್ಟಿತು. ಆದರೆ ಉತ್ತರ ಕರ್ನಾಟಕದಲ್ಲಿ ಇಂತಹ ಚಳುವಳಿ ನಡೆಯದೆ ಪಾಳೇಗಾರಿ ಪದ್ಧತಿ ಗಟ್ಟಿಯಾಗಿ ಉಳಿಯುವಂತಾಯಿತು.

ಸ್ವಾತಂತ್ರ್ಯ ನಂತರ ತೀವ್ರಗೊಂಡ ಚಳುವಳಿಯ ಪರಿಣಾಮವಾಗಿ ಭೂಸುಧಾರಣಾ ಕಾನೂನನ್ನು ರೂಪಿಸಲು ಜತ್ತಿ ಸಮಿತಿ ರಚನೆಯಾಗಿ 1974ರಲ್ಲಿ ಕಾನೂನು ರಚನೆಯಾದರೂ ಸಮಿತಿಯಲ್ಲಿದ್ದ ಭೂಮಾಲಕ ಪ್ರತಿನಿಧಿಗಳು ನೀಡಿದ ಸೂಚನೆಯ ಮೇರೆಗೆ ಉತ್ತರ ಕರ್ನಾಟಕದ ಭೂಮಾಲಕರು ಲಕ್ಷಾಂತರ ಗೇಣಿದಾರರನ್ನು ಒಕ್ಕಲೆಬ್ಬಿಸಿದರು. ಕಾನೂನು ಬಂದಾಗ ಇಲ್ಲಿ ಅರ್ಜಿ ಹಾಕಲು ಯಾರೂಲಿರಲಿಲ್ಲ. ಆದ್ದರಿಂದಲೇ ಇಂದು ಉತ್ತರ ಕರ್ನಾಟಕದ ಜಿಲ್ಲೆಗಳನ್ನು ಶೇ. 50-55ರಷ್ಟು ಭೂಹೀನ ಕೂಲಿಕಾರರಿದ್ದರೆ ದ.ಕ. ಜಿಲ್ಲೆಯಲ್ಲಿ ಶೇ. 70-75ರಷ್ಟು ರೈತರಿದ್ದಾರೆ. ಈ ಭೂಹೀನ ಕೂಲಿಕಾರರು ಜೀವನ ನಿರ್ವಹಣೆಗಾಗಿ ಮುಂಬೈ, ಗೋವಾ ಕಡೆ ಹೋಗುತ್ತಾರೆ; ಸಂಪಾದಿಸಿದ್ದನ್ನು ಅಲ್ಲೇ ಖರ್ಚು ಮಾಡುತ್ತಾರೆ. ಉತ್ತರ ಕರ್ನಾಟಕದ ಜಿಲ್ಲೆಗಳು ಇದರಿಂದಾಗಿ ಹಿಂದುಳಿಯುತ್ತಿವೆ.

ಭೂ ಸುಧಾರಣೆಯ ಪ್ರಶ್ನೆ ಇನ್ನು ಪ್ರಸ್ತುತವಾಗಿದೆ ಎಂದು ಹೇಳಿದ ನಾಗರಾಜ ಅವರು ಅದರ ಜೊತೆಯಲ್ಲಿ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚು ಹಣ ಒದಗಿಸುವುದು ಆಗಬೇಕು. ಇದು ಆಗಬೇಕಾದರೆ ಕರ್ನಾಟಕ ಒಂದಾಗಿದ್ದರೆ ಮಾತ್ರ ಸಾಧ್ಯ ಎಂದು ಹೇಳಿದರು.

ಸಮಾವೇಶದಲ್ಲಿ ಪಾಲ್ಗೊಳ್ಳಲು ಆಗಮಿದ್ದ ಶಾಸಕ ಬಿ.ಆರ್.ಪಾಟೀಲ್, ಖ್ಯಾತ ಸಾಹಿತಿ, ಪತ್ರಕರ್ತ ರಂಜಾನ್ ದರ್ಗಾ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ವಿಶ್ವರಂಗ ವಾರಪತ್ರಿಕೆಯ ಸಂಪಾದಕ ಎಸ್.ವೈ. ಗುರುಶಾಂತ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸಮಾವೇಶ ಸಿದ್ಧತಾ ಸಮಿತಿಯ ಅಧ್ಯಕ್ಷ ಮಾರುತಿ ಮಾನ್ಪಡೆ ಅಧ್ಯಕ್ಷತೆ ವಹಿಸಿದ್ದರು. ಸಾಹಿತಿ ಆರ್.ಕೆ. ಹುಡಗಿ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಗೋಷ್ಠಿಗಳು : ಸಮಾವೇಶದ ಅಂಗವಾಗಿ ನಡೆದ ಮೊದಲ ಗೋಷ್ಠಿಯ ಅಧ್ಯಕ್ಷತೆಯನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ನಿತ್ಯಾನಂದ ಸ್ವಾಮಿ ವಹಿಸಿದ್ದರು. 'ಕರ್ನಾಟಕದ ಪ್ರಾದೇಶಿಕ ಅಸಮಾನತೆ : ಅಭಿವೃದ್ಧಿ ಕುರಿತು ವರದಿಗಳು - ಒಂದು ವಿಶ್ಲೇಷಣೆ' ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು, ಡಾ|| ನಂಜುಂಡಪ್ಪ ಸಮಿತಿಯ ಸದಸ್ಯರೂ ಆಗಿದ್ದ ಡಾ|| ಬಿ.ಶೇಷಾದ್ರಿ ಅವರು ವಿಷಯ ಮಂಡಿಸಿದರು. 'ಮಾನವ ಅಭಿವೃದ್ಧಿ; ಭೂಸಂಬಂಧಗಳು ಹಾಗೂ ಕೃಷಿ' ಎಂಬ ವಿಷಯ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ|| ಟಿ.ಆರ್. ಚಂದ್ರಶೇಖರ್ ವಿಷಯ ಮಂಡಿಸಿದರು. ನಂತರ ನಡೆದ ಸಂವಾದದಲ್ಲಿ ಪ್ರೊ.ಎಸ್.ಜಿ. ಮೇಳಕುಂದಿ, ಡಾ| ಕಾಶೀನಾಥ ಅಂಬಲಗಿ, ಕೆ.ಎನ್.ಉಮೇಶ್, ಡಾ|| ಸಂಗಮೇಶ್ ಹಿರೇಮಠ ಅವರು ಪಾಲ್ಗೊಂಡಿದ್ದರು. ಅಶೋಕ ಶಟಕಾರ ಕಾರ್ಯಕ್ರಮ ನಿರ್ವಹಿಸಿದರು.

ರಾಜ್ಯ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷೆ ಕೆ.ನೀಲಾ ಅವರ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ಗೋಷ್ಠಿಯಲ್ಲಿ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಯು.ಬಸವರಾಜ 'ಪ್ರಾದೇಶಿಕ ಅಸಮಾನತೆ ಮತ್ತು ಸಾಮಾಜಿಕ ಅಸಮಾನತೆ : ಅಂತರ ಸಂಬಂಧಗಳು' ಕುರಿತು ವಿಷಯ ಮಂಡಿಸಿದರು. 'ಪ್ರಾದೇಶಿಕ ಅಸಮಾನತೆ ನಿವಾರಣೆ : ಜನ ಚಳುವಳಿಗಳ ಕಣ್ಣೋಟ' ಕುರಿತು ಮಾರುತಿ ಮಾನ್ಪಡೆ ಮಾತನಾಡಿದರು. ನಂತರದ ಸಂವಾದ ಕಾರ್ಯಕ್ರಮದಲ್ಲಿ ಎಸ್.ಪಿ. ಸುಳ್ಳದ, ಡಾ|| ಕೆ.ಲಿಂಗಪ್ಪ, ಡಾ|| ಮೀನಾಕ್ಷಿ ಬಾಳಿ ಪಾಲ್ಗೊಂಡಿದ್ದರು. ಶ್ರೀಶೈಲ ಪೂಳಿ ಕಾರ್ಯಕ್ರಮ ನಿರ್ವಹಿಸಿದರು. ●

ಕರ್ನಾಟಕ ಪ್ರಾದೇಶಿಕ ಅಸಮಾನತೆ : ನಿವಾರಿಸುವ ಪರ್ಯಾಯ ಮಾರ್ಗಗಳು

ರಾಜ್ಯ ಸಮಾವೇಶದಲ್ಲಿ ಹೊರ ಹೊಮ್ಮಿದ ಅಭಿಪ್ರಾಯಗಳು

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯು ಅತ್ಯಂತ ಗಂಭೀರವಾದ ಸ್ವರೂಪದಲ್ಲಿದ್ದು ಅದನ್ನು ತೊಲಗಿಸುವ ನಿಟ್ಟಿನಲ್ಲಿ ಸರ್ಕಾರ ಪ್ರಧಾನ ಆದ್ಯತೆಯನ್ನಾಗಿ ಪರಿಗಣಿಸಿ ಕಾರ್ಯಪ್ರವೃತ್ತರಾಗಬೇಕೆಂದು ನಿನ್ನೆ ಸಮಾರೋಪಗೊಂಡ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ತೊಲಗಿಸುವಲ್ಲಿ ಪರ್ಯಾಯ ಮಾರ್ಗಗಳು ಕುರಿತ ರಾಜ್ಯ ಸಮಾವೇಶ ಆಗ್ರಹಿಸಿತು.

ಪ್ರಾದೇಶಿಕ ಅಸಮಾನತೆ ತೊಲಗಿಸುವ ದಿಶೆಯಲ್ಲಿ ಹಲವಾರು ಸಲಹೆ ಸೂಚನೆಗಳು ಬಂದವು. ಪ್ರಾದೇಶಿಕ ಅಸಮಾನತೆಯಿಂದ ಉದ್ಭವವಾಗುವ ಪ್ರಶ್ನೆಗಳಿಗೆ ಪ್ರತ್ಯೇಕ ರಾಜ್ಯದ ರಚನೆಯ ಕೆಲವರ ಪ್ರಸ್ತಾಪಗಳನ್ನು ಸಮಾವೇಶ ಖಂಡತುಂಡವಾಗಿ ವಿರೋಧಿಸಿತು. ಇದು ಛಿದ್ರಕಾರಿ ಬೇಡಿಕೆಯಾಗಿದೆ. ಭಾಷಾವಾರು ಪ್ರಾಂತ್ಯಗಳ ರಚನೆಯ ಮೂಲ ಆಶಯಕ್ಕೆ ಕೊಡಲಿಯೇಟು ನೀಡುವುದಲ್ಲದೇ, ಅಭಿವೃದ್ಧಿ ಸಾಧನೆಯಲ್ಲಿ ಜನತೆಯ ಒಗ್ಗಟ್ಟನ್ನು ಛಿದ್ರಗೊಳಿಸುತ್ತದೆ. ಅದಕ್ಕಾಗಿ ನಡೆಯುವ ಜನತೆಯ ಹೋರಾಟವನ್ನು ದುರ್ಬಲಗೊಳಿಸುತ್ತದೆ ಎಂದು ಖಂಡಿಸಿತು. ಅಂತಿಮವಾಗಿ ಸಮಸ್ಯೆಗಳಿಗೆ ಇತ್ಯರ್ಥವೇ ಕಾಣದೇ, ಪರಾವಲಂಬನೆ, ಅನಭಿವೃದ್ಧಿಯಿಂದ ನರಳುವಂತೆ ಮಾಡುತ್ತದೆ ಎಂದು ಸಮಾವೇಶವು ಅಭಿಪ್ರಾಯಪಟ್ಟಿತು.

ಉತ್ತರ ಕರ್ನಾಟಕ, ಹೈದರಾಬಾದ್-ಕರ್ನಾಟಕವನ್ನು ಒಳಗೊಂಡು ಪ್ರಾದೇಶಿಕ ಅಸಮಾನತೆ ನಿವಾರಣೆಗಾಗಿ ಸರ್ಕಾರ ರಚಿಸಿದ್ದ ಹಲವಾರು ಸಮಿತಿಗಳ ಅಂತರಾಂಶ ಮತ್ತು ಶಿಫಾರಸ್ಸುಗಳನ್ನು ಸಮಾವೇಶವು ಪರಿಶೀಲಿಸಿತು. ಇದರಲ್ಲಿ ಆರೋಗ್ಯಕರ- ಅನಾರೋಗ್ಯಕರ ಪರಿಹಾರದ ಸೂಚನೆಗಳಿರುವುದನ್ನು ಗಮನಿಸಿತು. ವಿಶೇಷವಾಗಿ ಡಾ| ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ರಚಿಸಲಾದ ಉನ್ನತಾಧಿಕಾರ ಸಮಿತಿಯು ವರದಿಯು ಪ್ರಾದೇಶಿಕ ಅಸಮಾನತೆಯನ್ನು ತಡೆಯಲು ಮಹತ್ವದ ಅಧ್ಯಯನ ನಡೆಸಿದೆ. ಆದರೆ ಇಂತಹ ಅಸಮಾನತೆಗೆ ಮೂಲಕಾರಣವಾದ ಭೂಸಂಬಂಧಗಳು, ಕೃಷಿ ಕೂಲಿಕಾರರ ಸ್ಥಿತಿ ಗತಿಯಂತಹ ಪ್ರಶ್ನೆಗಳನ್ನು ಅಧ್ಯಯನದಲ್ಲಿ ಪರಿಗಣಿಸದೇ ಹೋಗಿದೆ. ಡಾ| ನಂಜುಂಡಪ್ಪನವರು ರೋಗವನ್ನು ಗುರುತಿಸಿದ್ದಾರೆ. ಆದರೆ ಅವರು ಸೂಚಿಸಿರುವ ಕೆಲವು ಪರಿಹಾರಗಳು ಸಮಸ್ಯೆಯನ್ನು ಇತ್ಯರ್ಥ ಪಡಿಸುವುದಿಲ್ಲವೆಂದು ಸಮಾವೇಶವು ವಿಮರ್ಶಿಸಿತು. ಅಭಿವೃದ್ಧಿ ಸಾಧಿಸಲು ಅಗತ್ಯವಾದ ಸಂಪನ್ಮೂಲ ಕ್ರೋಢೀಕರಿಸಲು ಆರ್ಥಿಕತೆಯ ಬೆನ್ನೆಲುಬಾದ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರುವ, ವಿದ್ಯುತ್, ನೀರಿನ ದರ ಏರಿಕೆ, ಕುಡಿಯುವ ನೀರು, ವಿದ್ಯುತ್ ವಲಯಗಳ ಖಾಸಗೀಕರಣಕ್ಕೆ ಶಿಫಾರಸ್ಸುಮಾಡಿದೆ. ಇದಲ್ಲದೆ ವಿಶ್ವ ಬ್ಯಾಂಕ್‌ನಿಂದ ಸಾಲ ಪಡೆಯಲು ಸೂಚಿಸಿದೆ. ಇವು ಪ್ರಾದೇಶಿಕ ಅಸಮಾನತೆ ನಿವಾರಿಸುವಲ್ಲಿ ಸಹಾಯಕವಾಗಲಾರವು, ಬದಲಿಗೆ ಮಾರಕ ಪರಿಣಾಮ ಬೀರಲಿವೆ.

ಈ ಕೆಲವು ಪರಿಹಾರದ ಶಿಫಾರಸುಗಳು ಉದಾರೀಕರಣ, ಜಾಗತೀಕರಣ ಹಾಗೂ ವಿಶ್ವ ಬ್ಯಾಂಕ್ ನಿರ್ದೇಶನದ ಚಿಂತನೆಯ ಪ್ರಭಾವ ಇರುವುದನ್ನು ಗುರುತಿಸಿತು. ಡಾ| ಡಿ.ಎಂ. ನಂಜುಂಡಪ್ಪನವರ ವರದಿಯ ಬಗ್ಗೆ ಆ ಸಮಿತಿಯ ಸದಸ್ಯರೂ, ಖ್ಯಾತ ಆರ್ಥಿಕ ಚಿಂತಕರಾದ ಡಾ| ಬಿ.ಶೇಷಾದ್ರಿಯವರೊಂದಿಗೆ ವಿವರವಾದ ಚರ್ಚೆ ನಡೆಯಿತು. ಪ್ರಾದೇಶಿಕ ಅಸಮಾನತೆ ತೊಲಗಿಸುವಲ್ಲಿ ಅಭಿವೃದ್ಧಿಗೆಂದು ಸರ್ಕಾರ ಮೀಸಲಿರುವ ಹಣ ಅತ್ಯಂತ ಕಡಿಮೆಯಾಗಿದ್ದು, ಆ ಮೊತ್ತವನ್ನು ಗಣನೀಯವಾಗಿ ಹೆಚ್ಚಿಸಬೇಕೆಂದು ಸಮಾವೇಶ ಆಗ್ರಹಿಸಿತು. ಈ ದಿಶೆಯಲ್ಲಿ ಕೇಂದ್ರವು ರಾಜ್ಯಗಳಿಗೆ ಹೆಚ್ಚು ಹಣ ನೀಡುವುದು ಅತ್ಯಗತ್ಯ. ಅದಕ್ಕಾಗಿ ಮುಖ್ಯವಾಗಿ ಕೇಂದ್ರ ರಾಜ್ಯಗಳ ಸಂಬಂಧಗಳು ಪುನರ್ ವಿಮರ್ಶೆಯಾಗಬೇಕಿದೆ. ರಾಜ್ಯಗಳಿಗೆ ಹೆಚ್ಚಿನ ಪಾಲು ಸಿಗಬೇಕಿದೆ ಎಂದು ಸಮಾವೇಶ ಅಭಿಪ್ರಾಯಪಟ್ಟಿತು.

ಸರ್ಕಾರವು ಕೈಗೊಳ್ಳುವ ಕಾರ್ಯಗಳಲ್ಲಿ ಆದ್ಯತೆಯ ಈ ರಂಗಗಳನ್ನು ಗುರುತಿಸಬೇಕು. ಅದರ ಅವಶ್ಯಕತೆಗೆ ಅನುಗುಣವಾಗಿ ಸಂಪನ್ಮೂಲ ಹಂಚಿಕೆಯಾಗಬೇಕು. ಈಗಿರುವ ಅಭಿವೃದ್ಧಿ ವಲಯದಲ್ಲಿಯೂ ಆದ್ಯತೆಯನ್ನು ಪುನರ್ ರೂಪಿಸಿಕೊಳ್ಳುವುದು ಅಗತ್ಯವಿದೆ. ಇಲ್ಲಿ ಖರ್ಚು ಮಾಡುವ ಹಣದಲ್ಲಿ ಪಾರದರ್ಶಕತೆ ಇಲ್ಲ, ಜನತೆಗೆ ಉತ್ತರದಾಯಕವಾಗಿಲ್ಲ. ಹೀಗಾಗಿ ಅಭಿವೃದ್ಧಿಗೆಂದು ಬರುವ ಹಣ ವ್ಯಾಪಕ ಭ್ರಷ್ಟಾಚಾರವಿದ್ದು, ಸಂಪನ್ಮೂಲ ಸೋರಿಕೆಯಾಗುತ್ತಿದೆ. ಇದನ್ನು ನಿಷ್ಠುರವಾಗಿ ತಡೆಯಬೇಕು. ಪ್ರಮುಖವಾಗಿ ಈಗ ರಚಿಸಲಾಗಿರುವ 'ಅಭಿವೃದ್ಧಿ ಮಂಡಳಿ'ಗಳನ್ನು ಪ್ರಜಾಸತ್ತಾತ್ಮಕಗೊಳಿಸುವುದು ತುರ್ತು ಅಗತ್ಯವಾಗಿದೆ. ನೇಮಕ ಸದಸ್ಯರ ಬದಲು ಮಂಡಳಿಗೆ ಚುನಾಯಿತ ಪ್ರತಿನಿಧಿಗಳು ಇರಬೇಕು ಎಂದು ಸಮಾವೇಶ ಒತ್ತಾಯಿಸಿತು. ಪ್ರಾದೇಶಿಕ, ಅಸಮಾನತೆ ಮೂಲ ಅಂಶ ವಾಗಿರುವ ಭೂಮಿ ಸಂಬಂಧಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕು. ಭೂ ಹೀನರಿಗೆ ಭೂಮಿ ಹಂಚಿಕೆಯಾಗಬೇಕು, ಪ್ರಗತಿಪರ ಭೂ ಸುಧಾರಣೆ ಕಾನೂನು ಕಟ್ಟು ನಿಟ್ಟಾಗಿ ಜಾರಿಯಾಗಬೇಕು. ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳು ತ್ವರಿತ ಜಾರಿಯಾಗಬೇಕು ಎಂದು ಸಮಾವೇಶ ಆಗ್ರಹಿಸಿತು.

ಈ ಪ್ರದೇಶದಲ್ಲಿ ದುಸ್ಥಿತಿಯಲ್ಲಿರುವ ಕೈಗಾರಿಕೆಗಳ ಪುನಶ್ಚೇತನಕ್ಕೆ ಸಕಲ ನೆರವು ನೀಡಬೇಕು. ಪ್ರಾಕೃತಿಕ ಸಂಪನ್ಮೂಲಗಳ ಲಭ್ಯತೆ ಆಧಾರದಲ್ಲಿ ಆಯಾ ಪ್ರದೇಶಗಳಲ್ಲಿ ಹೊಸ ಕೈಗಾರಿಕೆ ಸ್ಥಾಪಿಸಬೇಕು. ಈ ಮೂಲಕ ಉದ್ಯೋಗ ಸೃಷ್ಟಿಸಲು ಗಮನ ಅಗತ್ಯ. ಗ್ರಾಮಾಂತರಗಳಲ್ಲಿ ವಲಸೆ ಹೋಗುವುದನ್ನು ತಡೆಯಬಹುದು ಎಂದು ಸಮಾವೇಶದಲ್ಲಿ ಅಭಿಪ್ರಾಯ ಪಡಲಾಯಿತು. ಲಿಂಗ ತಾರತಮ್ಯ, ಜಾತಿ ಅಸಮಾನತೆ, ದಬ್ಬಾಳಿಕೆ, ಅನಕ್ಷರತೆಗಳ ಬಗ್ಗೆ ಅತೀವ ಕಳವಳ ವ್ಯಕ್ತಪಡಿಸಿದ ಸಮಾವೇಶವು ಇದನ್ನು ತಡೆಯಬೇಕು ಎಂದು ಆಗ್ರಹಿಸಿತು. ಮಹಿಳೆಯರ ಬಗ್ಗೆ ತಾರತಮ್ಯ, ಜಾತಿ ದಬ್ಬಾಳಿಕೆ, ಅಂಧ ಶ್ರದ್ಧೆಯಂತಹ ಪಾಳೆಗಾರಿ ಪ್ರವೃತ್ತಿಗಳ ವಿರುದ್ಧ ಹೋರಾಡಲು ನಿರ್ಧರಿಸಿತು. ಹೈದ್ರಾಬಾದ್-ಕರ್ನಾಟಕ ಪ್ರದೇಶವನ್ನು 371ನೇ ಕಲಂ ನಡಿ ಸೇರಿಸಿ ವಿಶೇಷ ಸ್ಥಾನ ಮಾನ ನೀಡಬೇಕು. ಕೇಂದ್ರವು ಕೂಡಲೇ ಇದನ್ನು ಪರಿಗಣಿಸಬೇಕು. ರಾಜ್ಯ ಸರ್ಕಾರದ ಸತತ ಒತ್ತಡ ಪ್ರಯತ್ನ ಅಗತ್ಯವಿರ ಬೇಕೆಂದು ಸಮಾವೇಶ ಅಭಿಪ್ರಾಯಪಟ್ಟಿತು.

ಪ್ರಾದೇಶಿಕ ಅಸಮಾನತೆ ನಿವಾರಿಸುವಲ್ಲಿ ನಿರ್ದಿಷ್ಟ ಕ್ರಮ ಕೈಗೊಳ್ಳುವಂತೆಯೂ ಹಾಗೂ ಪರಿಹಾರದ ಮೂಲಭೂತ ಅಂಶಗಳನ್ನು ಒಳಗೊಂಡು ಕರ್ನಾಟಕದಲ್ಲಿ ವ್ಯಾಪಕ ಜನಾಂದೋಲನವನ್ನು ಸಂಘಟಿಸಲು ಸಮಾವೇಶವು ನಿರ್ಧರಿಸಿದೆ. ಪ್ರಾದೇಶಿಕ ಅಸಮಾನತೆಯನ್ನು ಗುರುತಿಸುವುದರ ಭಾಗವಾಗಿ ಸಮಿತಿಗಳು ರಚನೆಯಾಗುವಲ್ಲಿ ಕೆಲವು ಕ್ರಮ ಕೈಗೊಂಡಿರುವುದೂ ಸಹ ಜನತೆಯ ಒತ್ತಡ, ಆಗ್ರಹವಾಗಿದೆ. ಆದ್ದರಿಂದ ಪ್ರಬಲವಾದ ಜನತೆಯ ಚಳುವಳಿಯನ್ನು ನಡೆಸುತ್ತಿರುವುದರಿಂದ ಮಾತ್ರ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ಹಿನ್ನೆಲೆಯಲ್ಲಿ ಪ್ರಚಾರಾಂದೋಲನ ಹಾಗೂ ಚಳುವಳಿಯನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ■



ಉದಾರೀಕರಣ ಮತ್ತು ಪ್ರಜಾಪ್ರಭುತ್ವ

ಆರ್ಥಿಕ ಉದಾರೀಕರಣ ಮತ್ತು ರಾಜಕೀಯ ಪ್ರಜಾಪ್ರಭುತ್ವ ಜೊತೆ ಜೊತೆಗೆ ಹೆಜ್ಜೆ ಹಾಕುತ್ತವೆ ಎಂಬ ಮಿಥ್ಯೆಯನ್ನು ಉದಾರೀಕರಣವಾದಿಗಳು, ಮಾರುಕಟ್ಟೆ ವಾದಿಗಳು ಪ್ರಚಾರ ಮಾಡುತ್ತಾರೆ. ವಾಸ್ತವವೇನು ಎಂಬುದು ಪ್ರಶ್ನೆ.

ಹಿಂದೆ ಬಿಲ್ ಕ್ಲಿಂಟನ್ ಎಂಬ ಅಮೇರಿಕಾದ ಅಧ್ಯಕ್ಷ ಮಹಾಶಯ ಹಿಂದಿನ ಸಮಾಜವಾದಿ ರಾಷ್ಟ್ರಗಳ ಬಗ್ಗೆ ಮಾತನಾಡುತ್ತ ಮುಕ್ತ ಮಾರುಕಟ್ಟೆ ಮತ್ತು ಪ್ರಜಾಪ್ರಭುತ್ವ ಜತೆಯಾಗಿ ಮುನ್ನಡೆಯುತ್ತಿದೆ ಎಂದು ಹೇಳಿದಾಗ ಇದೇ ಅರ್ಥ ಆ ಮಾತುಗಳಲ್ಲಿತ್ತು. ಅಭಿವೃದ್ಧಿಶೀಲ ದೇಶಗಳಲ್ಲೂ ಉದಾರೀಕರಣದಿಂದ ರಾಜಕೀಯ ಅಧಿಕಾರ ಶಾಹಿತ್ವವನ್ನು ಕಡಿಮೆ ಮಾಡುತ್ತದೆ ಎಂಬ ಭಾವನೆಯೇ ಇದೆ.

ಆರ್ಥಿಕ ಉದಾರೀಕರಣ ಹೆಚ್ಚಾಗುತ್ತ ಬಂದಂತೆಲ್ಲ ಇದರಿಂದ ರಾಜಕೀಯ ಪ್ರಜಾಪ್ರಭುತ್ವದ ಮೇಲೆ ಹಲವು ದುಷ್ಪರಿಣಾಮಗಳು ಆಗುತ್ತಿವೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತಿದೆ. ಇವುಗಳಲ್ಲೆಲ್ಲ ಬಹುಮುಖ್ಯವಾದದ್ದು ಹಣಕಾಸಿನ ಮೇಲುಗೈ ಮತ್ತು ರಾಜಕೀಯದ ಮೇಲೆ ಈ ಹಣಕಾಸಿನ ಏಜೆಂಟರುಗಳ ಪ್ರಭಾವ. ಇವು ಸರ್ಕಾರದ ನೀತಿಗಳು ಮತ್ತು ಸಮಾಜದ ವಿವಿಧ ಜನ ಸಮೂಹಗಳ ಬೇಡಿಕೆಗಳ ಶಕ್ತಿಯನ್ನು ಪ್ರಭಾವಿತಗೊಳಿಸುತ್ತವೆ.

ಭಾರತದಲ್ಲೂ ನಮಗೆ ಇವು ಕಂಡುಬರುತ್ತವೆ. ನಮ್ಮ ಈ ಸಾರಿಯ ಬಜೆಟ್ ಪ್ರಕ್ರಿಯೆಯನ್ನೇ ತೆಗೆದುಕೊಂಡರೆ ಇದು ಸ್ಪಷ್ಟವಾಗುತ್ತದೆ. ಈ ಬಜೆಟ್ಟಿನಲ್ಲಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗಳಿಗೆ ಬಹಳ ಹಣ ತೆಗೆದಿರಿಸಿಲ್ಲ. ಶೇರು ಬ್ರೋಕರ್‌ಗಳ ಆದಾಯದ ಮೇಲೆ ಶೇ.0.15 ರ ಅಲ್ಪಪ್ರಮಾಣದ ತೆರಿಗೆ ಹಾಕಿದ್ದಕ್ಕೆ ಅವರಿಂದ ಬಹುದೊಡ್ಡ ಪ್ರತಿಭಟನೆ ಬಂತು. ಅದಕ್ಕೆ ಸರ್ಕಾರವೂ ಪ್ರತಿಕ್ರಿಯಿಸಿ ಅದನ್ನು ಕಡಿಮೆ ಮಾಡುವ ನಿರ್ಧಾರ ತೆಗೆದುಕೊಂಡಿತು. ಅಭಿವೃದ್ಧಿ ಕಾರ್ಯಗಳಿಗೆ ಹಣ ಸಂಗ್ರಹಣೆಗೆ ತಡೆ ಬಿತ್ತು. ಇಂತಹ ಹಲವು ಉದಾಹರಣೆಗಳಿವೆ.

ಒಟ್ಟಾರೆಯಾಗಿ ಇಂತಹ ವಿಷಯಗಳ ಬಗ್ಗೆ ಸಂಶೋಧನಾ ವರದಿ ಇತ್ಯಾದಿಗಳು ಬಹಳ ಕಡಿಮೆ. ಮೇರಿ ಆಗ್ ಹಾಲೆ ಎಂಬವರು 'ಹಣಕಾಸು ಮತ್ತು ಸ್ವಾತಂತ್ರ್ಯ' ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರಜಾಪ್ರಭುತ್ವೀಕರಣ ಮತ್ತು ಸಾಂಸ್ಥಿಕ ಹೂಡಿಕೆದಾರರು ಎಂಬ ಪ್ರಸಕ್ತ ಬರೆದಿದ್ದಾರೆ.

ಮಾರುಕಟ್ಟೆಯಲ್ಲಿ ಎಲ್ಲರಿಗೂ ಸಮಾನ ಮಾಹಿತಿ ಲಭ್ಯತೆ ಇಲ್ಲದೇ ಇರುವುದರಿಂದ ಅಸಮಾನತೆ ವ್ಯಾಪಕವಾಗಿರುತ್ತದೆ. ಇದರಿಂದ ಕೆಲವೇ ಕೆಲವು ಹೂಡಿಕೆದಾರರು ಮಾರುಕಟ್ಟೆಯನ್ನು ಏರುಪೇರುಗೊಳಿಸಲು ಸಾಧ್ಯವಾಗುತ್ತದೆ. ಭೌಗೋಳಿಕವಾಗಿಯೂ ಈ ಹೂಡಿಕೆದಾರರು ಬೇರೆ ಬೇರೆ ವರ್ತನೆ ತೋರಿಸುತ್ತಾರೆ ಎಂಬುದನ್ನು ಅವರು ತೋರಿಸುತ್ತಾರೆ. ಉದಾಹರಣೆಗೆ ಅಮೇರಿಕಾದ ಹೂಡಿಕೆದಾರರು ಒಂದು ತರಹ ವರ್ತನೆ ತೋರಿದರೆ ಯುರೋಪಿನ ಹೂಡಿಕೆದಾರರು ಮತ್ತು ಅಭಿವೃದ್ಧಿಶೀಲ ದೇಶಗಳ ಹೂಡಿಕೆದಾರರು ಬೇರೆಯೇ ತರಹದ ವರ್ತನೆ ತೋರುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ದೊಡ್ಡ ನಿಧಿಗಳ ವ್ಯವಸ್ಥಾಪಕರೆಲ್ಲ ಒಂದೇ ತರಹ ವರ್ತಿಸುತ್ತಾರೆ. ಇವರೆಲ್ಲ ತಮ್ಮ ಹಿತಾಸಕ್ತಿಯ ಬಗ್ಗೆ ಒಗ್ಗಟ್ಟಿನಿಂದಿರುತ್ತಾರೆ. ಉದಾರೀಕರಣದ ಆರ್ಥಿಕ ನೀತಿಗಳ ಬಗ್ಗೆ ಈ ಒಗ್ಗಟ್ಟು ಕಂಡುಬರುತ್ತದೆ. ಹಾಗೆಯೇ ಅವರ ಲಾಭ ಪಿಪಾಸೆ ಮೂರನೆಯದು ಮಾಹಿತಿ ಮತ್ತು ಸಂವಹನ. ಇವರೆಲ್ಲರಿಗೂ ಔದ್ಯಮಿಕ ಸಂಘಗಳು, ವಿಶ್ವ ಆರ್ಥಿಕ ವೇದಿಕೆ, ಐಎಂಎಫ್ ವಿಶ್ವಬ್ಯಾಂಕ್‌ಗಳಂತಹ ಸಂಸ್ಥೆಗಳು ಅವರ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ನೆರವಾಗುವ ವೇದಿಕೆಗಳಾಗಿಬಿಡುತ್ತದೆ.

ಇವುಗಳ ಮೂಲಕವೇ ಅವರು ರಾಜಕೀಯ ಪ್ರಭಾವವನ್ನು ಸರ್ಕಾರಗಳ ಮೇಲೆ ಬೀರತೊಡಗುತ್ತಾರೆ.

ಅಭಿವೃದ್ಧಿಶೀಲ ದೇಶಗಳಲ್ಲಿ ಮಾರುಕಟ್ಟೆಯನ್ನು ಏರುಪೇರು ಗೊಳಿಸುವುದು ಸಾಧ್ಯ. ಇದನ್ನೇ ಈ ಹಣಕಾಸಿನ ಏಜೆಂಟರುಗಳು ಮಾಡುತ್ತಾರೆ. ಇಲ್ಲಿ ದೊಡ್ಡ ಹೂಡಿಕೆದಾರರೂ ಕಡಿಮೆ ಇರುತ್ತಾರೆ.

ಇದಲ್ಲದೆ ಸಮೂಹ ಮಾಧ್ಯಮಗಳನ್ನು ಇದಕ್ಕಾಗಿ ಬಳಸಿಕೊಳ್ಳಲಾಗುತ್ತದೆ. ಒಂದು ಶೇರಿನ ಬಗ್ಗೆ ಕೆಟ್ಟ ವಿಶ್ಲೇಷಣೆ ನೀಡಿ ಅವರ ಬೆಲೆ ಕೆಳಗಿಳಿಸಿ



ಜಿ.ಎಸ್.ಮಣಿ

ಕಡಿಮೆ ಬೆಲೆಯಲ್ಲಿ ಕೊಳ್ಳುವುದು ಒಳ್ಳೆ ವಿಶ್ಲೇಷಣೆ ನೀಡಿ ಬೆಲೆ ಏರಿಸಿ ಹೆಚ್ಚಿನ ಬೆಲೆಯಲ್ಲಿ ಮಾರುವುದು ಇತ್ಯಾದಿ ತಂತ್ರಗಳು ಸಾಮಾನ್ಯ. ಇದೇ ಕಾರಣಕ್ಕಾಗಿಯೇ ಈ ಹೂಡಿಕೆದಾರರು ಉದಾರೀಕರಣದ ನೀತಿಗಳನ್ನು ಬಯಸುವುದು. ಈ ನೀತಿಗಳಿಂದಾಗಿ ರಾಜಕೀಯ ಪ್ರಜಾಪ್ರಭುತ್ವಕ್ಕೆ ಧಕ್ಕೆ ಒದಗುತ್ತದೆ. ಯಾಕೆಂದರೆ ಬಹುತೇಕ ಜನರ ಹಿತಾಸಕ್ತಿಗಳನ್ನು ಕೆಲವೇ ಕೆಲವರು ಹಾಳುಗೆಡಹುವ ಕೆಲಸ ಮಾಡುತ್ತಾರೆ.


ಹಾಗೆ ಅವರ ಅಧ್ಯಯನ ಈ ಪ್ರಕ್ರಿಯೆಯ ಕೊಂಡಿಗಳನ್ನು ಸ್ಪಷ್ಟವಾಗಿ ತೋರಿಸುತ್ತದೆ. ಈ ವಿಷಯದಲ್ಲಿ ಇದು ಮೊದಲ ಸಮಗ್ರ ಎನಿಸಬಹುದಾದ ಅಧ್ಯಯನವೂ ಹೌದು.

ಉದಾರೀಕರಣವಾದಿಗಳಿಗೆ ಮುಖದ ಮೇಲೆ ಹೊಡೆದು, 'ಉದಾರೀಕರಣ ನೀತಿಗಳು ಪ್ರಜಾಪ್ರಭುತ್ವ ವಿರೋಧಿ' ಎಂದು ಈ ಅಧ್ಯಯನ ಸ್ಪಷ್ಟವಾಗಿ ಹೇಳುತ್ತದೆ.

ಆಧಾರ : ಫ್ರಂಟ್‌ಲೈನ್ ಪತ್ರಿಕೆಯಲ್ಲಿ ಡಾ.ಜಯತಿಘೋಷ್ ಅವರ ಲೇಖನ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಆಸ್ಪತ್ರೆ ವಾತಾವರಣ ರೂಪಿಸಲು ನಾಗರೀಕ ಸನ್ನದು

ಏನಿದು ಈ ನಾಗರೀಕ ಸನ್ನದು?

ಸರಕಾರಿ ಆಸ್ಪತ್ರೆಗಳು ಭಾರತದ ನಾಗರೀಕರಿಗೆ ನಮ್ಮಲ್ಲಿರುವ ಸಂಪನ್ಮೂಲ ಹಾಗೂ ಸೌಲಭ್ಯ ಉಪಯೋಗಿಸಿ ಆರೋಗ್ಯ ಪಾಲನೆ ಮಾಡಲು ಬದ್ಧರಾಗಿವೆ. ವ್ಯಕ್ತಿಯ ವಯಸ್ಸು, ಲಿಂಗ, ಧರ್ಮ, ಜಾತಿ, ರಾಜಕೀಯ ಒಲವು, ಆರ್ಥಿಕ ಸಾಮಾಜಿಕ ಸ್ಥಿತಿಗಳಿಂದ ಚಿಕಿತ್ಸೆ ಪ್ರಭಾವಿತವಾಗುವುದಿಲ್ಲ. ಜನರಿಗೆ ಯಾವ ಸೌಲಭ್ಯಗಳು ಲಭ್ಯವಿದೆ, ಚಿಕಿತ್ಸೆಯ ಗುಣ ಹಾಗೂ ಚಿಕಿತ್ಸೆಯನ್ನು ನಿರಾಕರಿಸಿದಲ್ಲಿ ಅಥವಾ ಚಿಕಿತ್ಸೆ ಕಡಿಮೆ ಮಟ್ಟದ್ದಾಗಿದ್ದಲ್ಲಿ ಯಾರಿಗೆ ದೂರು ಕೊಡಬೇಕು ಎಂಬುದನ್ನು ಈ ಸನ್ನದು ತಿಳಿಸುತ್ತದೆ.

ಉದ್ದೇಶಗಳು

ವೈದ್ಯಕೀಯ ಚಿಕಿತ್ಸೆ ಹಾಗೂ ಇತರೆ ಸೌಲಭ್ಯಗಳು ಜನರಿಗೆ ಆಸ್ಪತ್ರೆಯಲ್ಲಿ ದೊರಕುವಂತೆ ಮಾಡುವುದು.

ಸಲಹೆ, ಚಿಕಿತ್ಸೆ ಹಾಗೂ ಬೆಂಬಲವನ್ನು ಕೊಟ್ಟು ರೋಗವನ್ನು ವೈದ್ಯ ಸಾಧ್ಯವಾಗುವಷ್ಟು ಗುಣಪಡಿಸುವುದು.

ವೈದ್ಯನ ತೀರ್ಮಾನದ ಹಾಗೂ ರೋಗಿಯ ಒಪ್ಪಿಗೆಯ ನಂತರವೇ ಒಳ್ಳೆಯ ಹಾಗೂ ಸಮಗ್ರ ಚಿಕಿತ್ಸೆ ಸಾಧ್ಯ.

ಚಿಕಿತ್ಸೆ ಉಪಯೋಗಿಸುವವರಿಗೆ, ರೋಗದ ಬಗ್ಗೆ ಮಾಹಿತಿ, ಚಿಕಿತ್ಸೆಯ ಪ್ರಗತಿ, ಚಿಕಿತ್ಸೆಯ ಅವಧಿ ಹಾಗೂ ಆರೋಗ್ಯದ ಮೇಲೆ ಚಿಕಿತ್ಸೆ ಪರಿಣಾಮ ಮುಂತಾದವುಗಳನ್ನು ವಿವರಿಸಬೇಕಾಗುತ್ತದೆ.

ಚಿಕಿತ್ಸೆ ಬಗ್ಗೆ ಯಾವುದೇ ಅಸಮಾಧಾನವಿದ್ದಲ್ಲಿ, ಚಿಕಿತ್ಸೆಯನ್ನು ಸರಿಪಡಿಸಬೇಕಾಗುತ್ತದೆ.

ಆಸ್ಪತ್ರೆ ಸೇವೆಗಳ ಘಟಕಗಳು

ಆಸ್ಪತ್ರೆ ಹಾಗೂ ತಜ್ಞ ವೈದ್ಯರಿಂದ ವೈದ್ಯಕೀಯ ಚಿಕಿತ್ಸೆ ಎಲ್ಲರಿಗೂ ಲಭ್ಯವಾಗಬೇಕು.

ಮುಖ್ಯ ಚಿಕಿತ್ಸಾ ವೇಳೆಯ ನಂತರ ತುರ್ತು ಚಿಕಿತ್ಸೆ ದೊರಕುವ ಸೌಕರ್ಯ ಇರಬೇಕು.

ಚಿಕಿತ್ಸೆ ಉಪಯೋಗಿಸುವವರಿಗೆ ದೊರಕುವ ಸೌಲಭ್ಯಗಳು ಚಿಕಿತ್ಸೆಯ ಖರ್ಚು ಚಿಕಿತ್ಸೆಗೆ ರೋಗಿಯಿಂದ ಏನು ಅಪೇಕ್ಷಿಸಲಾಗುವುದು ಮುಂತಾದವುಗಳನ್ನು ರೋಗಿಗೆ ಸ್ಪಷ್ಟ ಹಾಗೂ ಸರಳವಾಗಿ ಹೇಳಬೇಕು.

ಉಪಕರಣ ಕೆಲಸ ಮಾಡದಿದ್ದಲ್ಲಿ ಅದನ್ನು ರೋಗಿಗೆ ತಿಳಿಸಬೇಕು.

ಚಿಕಿತ್ಸೆ ಪಡೆಯುವವರು ಚಿಕಿತ್ಸೆ ಬಗ್ಗೆ ಸ್ಪಷ್ಟೀಕರಣ ಪಡೆಯಬಹುದು ಹಾಗೂ ಸಹಾಯ ಪಡೆಯಬಹುದು.

ಚಿಕಿತ್ಸೆಯಲ್ಲಿ ಲೋಪದೋಷಗಳಿದ್ದಲ್ಲಿ ಏನು ಮಾಡಬೇಕೆಂಬುದನ್ನು ತಿಳಿಸಬೇಕು.

ಸನ್ನದಿಗೆ ಪ್ರಮಾಣಿಕತೆ

ಬೇದಭಾವವಿಲ್ಲದೆ ಸೌಲಭ್ಯಗಳನ್ನು ಎಲ್ಲರಿಗೂ ದೊರಕುವಂತೆ ಮಾಡಬೇಕು. ಆಸ್ಪತ್ರೆಗೆ ತಲುಪಿದ ಕೂಡಲೇ ಅಗತ್ಯವಿದ್ದಲ್ಲಿ ತುರ್ತು ಚಿಕಿತ್ಸೆ ನೀಡಬೇಕು.

ಅಗತ್ಯವಿದ್ದಷ್ಟು ಸೂಚನಾ ಫಟಕಗಳನ್ನು ಇರಿಸುವುದು ಹಾಗೂ ದೊರಕುವ ಸೌಲಭ್ಯಗಳನ್ನು ನಮೂದಿಸುವುದು.

ರೋಗಿ ಹಾಗೂ ಚಿಕಿತ್ಸೆ ಬಗ್ಗೆ ಸರಿಯಾದ ಮಾಹಿತಿ ಕೊಡುತ್ತಾ, ಒಳರೋಗಿಯಾದಲ್ಲಿ (Inpatient)ಪ್ರತಿದಿನಕ್ಕೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ತಿಳಿಸಬೇಕು.

ಮುಂದುವರಿಯುವುದು

ಗೋಧ್ರಾ ತನಿಖೆ

ಪುಟ 5 ರಿಂದ

ಎನ್ನುವುದನ್ನು ಪ್ರಕಟಪಡಿಸಿರುವುದಾಗಿ ಪತ್ರಿಕೆಗಳು ವರದಿ ಮಾಡಿವೆ. ಪೊಲೀಸ್ ಇನ್ಸ್‌ಪೆಕ್ಟರುಗಳು ತಮ್ಮ ಮೇಲಧಿಕಾರಿಗಳ ಆದೇಶದಂತೆ ನಡೆಯದೆ ನೇರವಾಗಿ ರಾಜಕಾರಣಿಗಳ ಆದೇಶದಂತೆ ನಡೆದರು, ಇದರಿಂದ ಹಲವು ಹಿರಿಯ ಪೋಲೀಸ್ ಅಧಿಕಾರಿಗಳು ನಿರುತ್ಸಾಹಗೊಂಡರು, ಧೃತಿಗೆಟ್ಟರು, ಕೇಸುಗಳ ಸರಿಯಾದ ತನಿಖೆಯಾಗಲಿಲ್ಲ, ಹೇಳಿಕೆಗಳನ್ನು ಸರಿಯಾಗಿ ದಾಖಲಿಸಲಿಲ್ಲ, ಎಫ್‌ಐಆರ್‌ಗಳಲ್ಲಿ ಹೆಸರಿಸಿದ ವ್ಯಕ್ತಿಗಳನ್ನು ಬಂಧಿಸಲಿಲ್ಲ ಎಂದು ಅವರು ಹೇಳಿರುವುದಾಗಿ ವರದಿಯಾಗಿದೆ. ಇದರಲ್ಲಿ 'ಏಶಿಯನ್ ಏಜ್' ಪತ್ರಿಕೆ ಹೇಳಿರುವಂತೆ 'ತಲ್ಲಣಗೊಳಿಸು'ವಂತದ್ದೇನಿಲ್ಲ. ಏಕೆಂದರೆ ಇವೆಲ್ಲಾ ಆರಂಭದಿಂದಲೇ ಎಲ್ಲರಿಗೂ ತಿಳಿದ ವಿಷಯಗಳೇ. ಆದರೆ ಈ ಹಿರಿಯ ಪೊಲೀಸ್ ಅಧಿಕಾರಿಯ ಹೇಳಿಕೆ ಅಮೂಲ್ಯ ಪುರಾವೆಗಳನ್ನು ಒದಗಿಸಿವೆ.

ಸುಪ್ರೀಂ ಕೋರ್ಟ್ ಕೂಡಾ ಗುಜರಾತ್ ಉರಿಯುತ್ತಿದ್ದಾಗ ಆಧುನಿಕ ನೀರೋಗಳು ಅಪರಾಧಿಗಳನ್ನು ಹೇಗೆ ಉಳಿಸುವುದು ಎಂದು ಯೋಚಿಸುತ್ತಿದ್ದರು ಎಂದು ಟಿಪ್ಪಣಿ ಮಾಡಬೇಕಾಗಿ ಬಂದಿರುವುದೂ ಕೊಲೆಗಡುಕರಿಗೆ ದೊರೆತಿದ್ದ ರಾಜಾಶ್ರಯವನ್ನು ಸೂಚಿಸುತ್ತದೆ.

ಅಷ್ಟೇ ಅಲ್ಲ, ಗೋಧ್ರಾ ಕಗ್ಗೊಲೆಯಲ್ಲಿ ಪಾತ್ರವಹಿಸಿದರೆಂದು 123 ಮುಸ್ಲಿಮರ ಮೇಲೆ ಪೋಟಾದ ಅಡಿಯಲ್ಲಿ ಮೊಕದ್ದಮೆ ದಾಖಲಿಸಿಕೊಂಡ ರಾಜ್ಯ ಆಡಳಿತ ಗೋಧ್ರಾ ನಂತರದ ಹತ್ಯಾಕಾಂಡದಲ್ಲಿ ಪಾಲ್ಗೊಂಡ ಒಬ್ಬನಾದರೂ ವ್ಯಕ್ತಿಯ ಮೇಲೆ ಪೋಟಾವನ್ನು ಬಳಸಲಿಲ್ಲ ಎಂಬುದು ಸಂಘ ಪರಿವಾರದ ಕೊಲೆಗಡುಕರಿಗೆ ದೊರೆತ ರಾಜಾಶ್ರಯವನ್ನು ಸ್ಪಷ್ಟವಾಗಿ ತೋರಿಸುತ್ತದೆ.

ನಾವೇನು ಮಾಡಬೇಕು?

ಒಟ್ಟಾರೆಯಾಗಿ ಬಿಜೆಪಿ ಯಡಿ ಗುಜರಾತಿನಲ್ಲಿ ಎಂತಹ ಸನ್ನಿವೇಶ ಉಂಟಾಗಿದೆಯೆಂದರೆ ದೇಶದ ಸರ್ವೋಚ್ಚ ನ್ಯಾಯಾಲಯ ರಾಜ್ಯದ ಆಡಳಿತ ಮತ್ತು ಕಾನೂನು ವ್ಯವಸ್ಥೆಯ ಬಗ್ಗೆ ಅಪನಂಬಿಕೆ ವ್ಯಕ್ತಪಡಿಸಬೇಕಾಗಿ ಬಂದಿದೆ. ಆದ್ದರಿಂದಲೇ ಬೆಸ್ಟ್ ಬೇಕರಿ ಮತ್ತು ಬಿಲ್ಕಿಸ್ ಯಾಕುಬ್ ರಸೂಲ್ ಕೇಸುಗಳ ವಿಚಾರಣೆ ಮಹಾರಾಷ್ಟ್ರದಲ್ಲಿ ನಡೆಯಬೇಕು ಎಂದು ಅದು ಆದೇಶಿಸಿತು.

ಈ ನಡುವೆ ಬಹಳಷ್ಟು ಸಂಗತಿಗಳು ಬಯಲಿಗೆ ಬಂದಿವೆ, ಇನ್ನಷ್ಟು ಬರಲಿವೆ. ತೀಸ್ತಾ ಸೆಟಲ್‌ವಾಡ್‌ರ 'ನ್ಯಾಯ ಮತ್ತು ಶಾಂತಿಗಾಗಿ ನಾಗರಿಕರು' ಎಂಬ ಸಂಸ್ಥೆ ಈಗಾಗಲೇ ಹಲವುಕೇಸುಗಳಲ್ಲಿ ಅಪರಾಧಿಗಳನ್ನು ಗುರುತಿಸಿ ಅವರ ವಿರುದ್ಧ ಅರ್ಜಿಗಳನ್ನು ಸಲ್ಲಿಸಿದೆ. ಹೆಚ್ಚಿನವನ್ನು ವಿಚಾರಣೆಗೆ ಎತ್ತಿಕೊಳ್ಳಬಹುದು. ಇನ್ನೂ ಕೆಲವು ಸಂಘಟನೆಗಳೂ ಎಫ್‌ಐಆರ್‌ಗಳಲ್ಲಿ ಸೆಕ್ಷನ್ 302(ಕೊಲೆ) ಹಾಗೂ 307(ಕೊಲೆ ಪ್ರಯತ್ನ) ನ್ನು ಪ್ರಸ್ತಾಪಿಸಿದ್ದರೂ ಪೊಲೀಸ್ ಅಧಿಕಾರಿಗಳು 'ಎ'ಅಥವಾ 'ಬಿ' ಸಾರಾಂಶ ವರದಿಯನ್ನು ಹಾಕಿ ಮುಚ್ಚಿ ಬಿಟ್ಟಿರುವ ಎಲ್ಲಾ ಕೇಸುಗಳ ಪಟ್ಟಿ ತಯಾರಿಸಲಾರಂಭಿಸಿವೆ. ನ್ಯಾಯಾಂಗ ಈ ಪ್ರಯತ್ನವನ್ನು ಪರಿಶೀಲಿಸಿದರೆ ಸುಮಾರು 60 ಇಂತಹ ಮೊಕದ್ದಮೆಗಳನ್ನು ಮತ್ತೆ ತೆರೆಯಲಾಗುವುದು ಎಂದು ಅಂದಾಜು ಮಾಡಲಾಗಿದೆ.

ಈ ಕಾರಣದಿಂದಲೇ ಯುಪಿಎ ಆಡಳಿತ ಗೋಧ್ರಾ ಬಗ್ಗೆ ತನಿಖೆ ನಡೆಸಲು ನಿರ್ಧರಿಸಿದ ನಂತರ ಬಿಜೆಪಿ ಭಯಭೀತಗೊಂಡಿದೆ. ಇಂದಿನ ಅವಶ್ಯಕತೆಯೆಂದರೆ ನಾವೆಲ್ಲ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಿರುವ ಈ ಗಲಭೆ ಪೀಡಿರಿಗೆ ನೆರವು ನೀಡಬೇಕಷ್ಟೆ ಅಲ್ಲ, ಎಷ್ಟು ಸಾಧ್ಯವೋ ಅಷ್ಟುಕೇಸುಗಳನ್ನು ಮತ್ತೆ ತೆರೆಸುವಂತೆ ಮಾಡಬೇಕು. ಅಯೋಧ್ಯೆಯಿಂದ ಗೋಧ್ರಾದ ವರೆಗೆ ಕರಸೇವಕರ ವರ್ತನೆಗಳನ್ನು ಈ ತನಿಖೆಯ ವ್ಯಾಪ್ತಿಗೆ ತರಬೇಕು. ಈ ಕೊಲೆಗಡುಕ ಪಡೆಗಳನ್ನು ಜನಗಳಿಂದ ಎಷ್ಟು ಸಾಧ್ಯವೋ ಅಷ್ಟುದೂರ ತಳ್ಳಬೇಕು. ನಮ್ಮ ಜಾತ್ಯತೀತ ಹಂದರವನ್ನು ಸಮಿಶ್ರ ಸಂಸ್ಕೃತಿಯನ್ನು, ರಾಷ್ಟ್ರೀಯ ಐಕ್ಯತೆಯನ್ನು ಮತ್ತು ನಾಗರಿಕ ಅಸ್ತಿತ್ವವನ್ನು ಉಳಿಸಿಕೊಳ್ಳಲು ಇದು ಅನಿವಾರ್ಯ.

ರಶ್ಯನ್ ಸ್ಕೂಲ್ ದುರಂತ ಮತ್ತು ಭಯೋತ್ಪಾದನೆ

ಜಗತ್ತಿನೊಂದು ಸುತ್ತು

ಶರತ್‌ಚಂದ್ರ

...ಶ್ಯಾದ ದಕ್ಷಿಣ ಪ್ರಾಂತ್ಯದ ಸ್ಕೂಲಿನಲ್ಲಿ ...ೋತ್ಪಾದಕ ದಾಳಿಯ ಮತ್ತು ದುರಂತದ ...ಚಿನ ದಿನಗಳಲ್ಲಿ ಭೀಕರ ಘಟನೆ. ...ನೂರಕ್ಕೂ ಹೆಚ್ಚು ಮಕ್ಕಳು, ಪಾಲಕರು, ...ರನ್ನು ಬಲಿ ತೆಗೆದುಕೊಂಡ ...ರ ಬಗ್ಗೆ ಸ್ವಾಭಾವಿಕವಾಗಿಯೇ ರಶ್ಯನ್‌ರಲ್ಲಿ, ...ರ ಶಾಂತಿಪ್ರಿಯ ಜನರಲ್ಲಿ ಆಕ್ರೋಶ ಇದೆ. ...ದಲ್ಲಿ ಈ ಕೋಪ ರಶ್ಯನ್ ಸರ್ಕಾರದ ವಿರುದ್ಧ ...ಗಿದೆ. ಈ ಭಯೋತ್ಪಾದಕ ದಾಳಿ ನಡೆಸಿದ್ದು ...ನ್ಯಾ ಪ್ರತ್ಯೇಕತಾವಾದಿಗಳು ಎಂದು ರಶ್ಯನ್ ...ರ್ಕಾರ ಹೇಳುತ್ತದೆ. ಅವರ ವಿರುದ್ಧ ...ತ್ತಿನಾದ್ಯಂತ ದಾಳಿ ನಡೆಸುವುದಾಗಿ ಹೇಳಿದೆ. ...ಥಹ ಘಟನೆಗಳು ಆಗದಂತೆ ನೋಡಲು, ...ಗ ಎದುರಿಸಲು ಸಿದಿಧತೆ ನಡೆಸುವುದಾಗಿ ...ಳಿದೆ. ಇಂತಹ ಘಟನೆಗಳ ಆಗದಂತೆ ...ೋಡಲು, ಆದಾಗ ಎದುರಿಸಲು ಸಿದ್ಧತೆ ...ಸುವುದಾಗಿ ಹೇಳಿದೆ. ಅಮರೀಕನ್ ಆಳುವ ...ರ್ಗಗಳ ' ಭಯೋತ್ಪಾದಕ ವಿರೋಧಿ' ...ಷೆಯಲ್ಲಿ ಮಾತನಾಡುತ್ತಿದೆ.

ಇದರಿಂದ ಬುಶ್‌ಗ್ಯಾಂಗ್‌ಗೆ ...ಶಿಯಾಗಬೇಕು. ಪುಟಿನ್ ತಮ್ಮ ಭಾಷೆಯಲ್ಲಿ ... ದುರಂತದ ಬಗ್ಗೆ ಮಾತಾಡುತ್ತಾರೆ ಎಂದು ...ಾರಾದರೂ ನಿರೀಕ್ಷಿಸುವುದು ಸಹಜ. ಆದರೆ ...ಗಾಗಿಲ್ಲ ಬದಲಾಗಿ ಬುಶ್ ಗ್ಯಾಂಗ್ ಈ ...ರಂತಕ್ಕೆ ರಶ್ಯನ್ ಸರ್ಕಾರ ಹೇಗೆ ಎನ್ನುತ್ತಿದೆ. ...ಚೆನ್ಯಾ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ ...ರಿಹರಿಸಿಲ್ಲ. ಈ ದುರಂತಕ್ಕೆ ಹೊಣೆಯಾದ ...ಚೆನ್ಯಾ ಭಯೋತ್ಪಾದಕ ಗುಂಪನ್ನು, ಖಂಡಿಸಿಲ್ಲ. ...ದಲಾಗಿ ರಶ್ಯನ್ ಅಧ್ಯಕ್ಷ ಪುಟಿನ್‌ರನನು 'ಎಲಿನ್' ಮಾಡಲಾಗುತ್ತಿದೆ. ಅಮೇರಿಕಾದ ಆಡಳಿತಪರ ಹಾದಿ ತುಳಿಯುವ ಸಾಮ್ರಾಜ್ಯಶಾಹಿ ಸುದ್ದಿ ಮಾಧ್ಯಮಗಳು ಅದೇ 'ಲೈನನ್ನು' ಗಿಳಿ ಪಾಠ ಹೇಳುತ್ತಿವೆ.



ಚೆಚೆನ್ಯಾ ಸಮಸ್ಯೆಯ ಮೂಲ ಸಿಐಎ

ಚೆಚೆನ್ಯಾ ಸಮಸ್ಯೆಯ ಮಾತು ಏನು? ಸೋವಿಯತ್ ಒಕ್ಕೂಟವನ್ನು, ಆಮೇಲೆ ರಶ್ಯಾವನ್ನು ಧಾರ್ಮಿಕ - ಜನಾಂಗೀಯ ಆಧಾರದ ಮೇಲೆ ಒಡೆಯುವ, ದುರ್ಬಲಗೊಳಿಸುವ ಅಮರೀಕನ್ ಪಿತೂರಿಯ ಭಾಗ ಇದು. ಚೆಚೆನ್ಯಾದಲ್ಲಿ ಪ್ರತ್ಯೇಕತಾವಾದಿ ಹುಟ್ಟುಹಾಕಿದ್ದು ಮಾತ್ರವಲ್ಲ, ಅವರಿಗೆ ರಾಜಾರೋಷವಾಗಿಯೇ ರಾಜಕೀಯ ಆರ್ಥಿಕ ಬೆಂಬಲ ಚೆಚೆನ್ಯಾದಲ್ಲಿ ಶಾಂತಿಗಾಗಿ ಅಮೇರಿಕನ್ ಸಮಿತಿ ಹೆಸರಲ್ಲಿ ಇದು ನಡೆದಿದೆ. ಬುಶ್‌ಗ್ಯಾಂಗ್‌ನ ಪ್ರಮುಖ ಸದಸ್ಯರು ಇದರಲ್ಲಿ ಸದಸ್ಯರಾಗಿದ್ದು, ಚೆಚೆನ್ಯಾ' ಸ್ವಾತಂತ್ರ್ಯ ಹೋರಾಟಗಾರರಿಗೆ ಬೆಂಬಲ ಕೊಡಲಾಗುತ್ತಿದೆ. 80 ರ ದಶಕದಲ್ಲಿ ಸಿಐಎ ಸೋವಿಯತ್ ಒಕ್ಕೂಟದಲ್ಲಿದ್ದ ಎಲ್ಲಾ ಜನಾಂಗೀಯ ಧಾರ್ಮಿಕ ಅಲ್ಪಸಂಖ್ಯಾತರು ಇರುವ ಪ್ರದೇಶಗಳಲ್ಲಿ ಪ್ರತ್ಯೇಕತಾವಾದ ಹುಟ್ಟುಹಾಕಲು ದೊಡ್ಡ ಯೋಜನೆ ಹಾಕಿತ್ತು. ಇದರ ಭಾಗವಾಗಿಯೇ ಒಸಾಮಾ ಬಿನ್ ಲಾಡೆನ್ ನಾಯಕತ್ವದಲ್ಲಿ ಮುಸ್ಲಿಮ್ ಮೂಲಭೂತವಾದಿಗಳ ವ್ಯಾಪಕ ಜಾಲ ಹರಡಲಾಗಿತ್ತು. ಅವರಿಗೆ ಆರ್ಥಿಕ-ರಾಜಕೀಯ ಮಿಲಿಟರಿ ಬೆಂಬಲ - ತರಬೇತಿ ನೀಡಲಾಗಿತ್ತು. ಚೆಚೆನ್ಯಾದಲ್ಲಿ ಅಲ್‌ಖೈದಾದ ಕೈವಾರ ಇದ್ದರೆ, ಅದರ ಮೂಲ ಸಿಐಎನೆ ಆದ್ದರಿಂದಲೇ ಚೆಚೆನ್ಯಾದಲ್ಲಿ 'ಭಯೋತ್ಪಾದನೆ'ಯನ್ನು ಖಂಡಿಸಲು, ಅವರ ವಿರುದ್ಧ ರಶ್ಯನ್ ಸರ್ಕಾರವನ್ನು ಬೆಂಬಲಿಸಲು ಬುಶ್-ಗ್ಯಾಂಗ್‌ಗೆ ಆಪತ್ತೇ ಇಲ್ಲ.

ಭಯೋತ್ಪಾದನೆ ಬಗ್ಗೆ ಗೋಸುಂಬೆತನ

ಬುಶ್ - ಗ್ಯಾಂಗ್‌ನ 'ಭಯೋತ್ಪಾದಕತೆ ಮೇಲೆ ಯುದ್ಧದ' ಈ ಗೋಸುಂಬೆತನದ ಬಗ್ಗೆ ರಶ್ಯನ್ ಅಧ್ಯಕ್ಷ ಪುಟಿನ್, ಸರ್ಕಾರಿ ವಕ್ತಾರರು ಸಾಕಷ್ಟು ಖಾರವಾಗಿಯೇ ಪ್ರತಿಕ್ರಿಯಿಸಿದ್ದಾರೆ. ಚೆಚೆನ್ಯಾ ಭಯೋತ್ಪಾದಕರಿಗೆ ಅಮೇರಿಕನ್ ಪ್ರತ್ಯಕ್ಷ-ಪರೋಕ್ಷ ಬೆಂಬಲ ಇದೆ. ಅವರು ನೆರೆಯ ಜಾರ್ಜಿಯಾದಲ್ಲಿ ನೆಲೆಗಳನ್ನು ಹೊಂದಿದ್ದಾರೆ. ಜಾರ್ಜಿಯಾದಲ್ಲಿ ಅತ್ಯಂತ ಅಮೇರಿಕನ್ - ಪರ ಸರ್ಕಾರ ಇರುವುದು ಆಕಸ್ಮಿಕವೇನಲ್ಲ. ಅಲ್ಲಿ ಅಮೇರಿಕನ್ ಮಿಲಿಟರಿ ನೆಲೆಗಳೂ ಇರುವುದು ರಶ್ಯನ್‌ರ ಸಂಶಯ ಬಲಪಡಿಸಿದೆ.

ರಶ್ಯನ್ ಸರ್ಕಾರದ 'ಬುಶ್-ಗ್ಯಾಂಗ್' ಭಾಷೆಯಲ್ಲಿ ಮಾತನಾಡುವುದು ನಕಾರಾತ್ಮಕ ಬೆಳವಣಿಗೆಯೇನಲ್ಲ. ಚೆಚೆನ್ಯಾ ಭಯೋತ್ಪಾದಕರ ನೆಲೆಯನ್ನು ನಾಶ ಮಾಡಲು ಜಗತ್ತಿನಲ್ಲಿ ಎಲ್ಲಿ ಬೇಕಾದರೂ ದಾಳಿ ನಡೆಸಲು ತಯಾರಿ ನಡೆಸುತ್ತಿದ್ದೇವೆ ಎಂಬ ಹೇಳಿಕೆ ಆತಂಕಕಾರಿ. ಎಲ್ಲಾ ಸಮಸ್ಯೆಗಳನ್ನು 'ಭಯೋತ್ಪಾದನೆ'ಯ ಕಪ್ಪು ಕನ್ನಡಕದಿಂದ ನೋಡುವ ಅವರ ಇತರ ಎಲ್ಲಾ-ಆಯಾಮಗಳನ್ನು ನಿರ್ಲಕ್ಷಿಸುವುದು ಶಾಂತಿ-ಪ್ರಗತಿಗೆ ಅಪಾಕಾರಿ. ಅದೇ ಸಮಯದಲ್ಲಿ ಭಯೋತ್ಪಾದಕತೆ ಹುಟ್ಟು ಹಾಕುವ ಅಮರೀಕನ್ ಸಾಮ್ರಾಜ್ಯಶಾಹಿಯ ಪಾತ್ರವನ್ನು ಮರೆಯಲು ಸಾಧ್ಯವಿಲ್ಲ.

ರಶ್ಯನ್ ಸ್ಕೂಲ್ ದುರಂತ ಭಯೋತ್ಪಾದಕತೆ ಪರಿಭಾಷೆ ಬಗ್ಗೆ ಜಗತ್ತಿನ ಗಮನ ಇನ್ನೊಮ್ಮೆ ಸೆಳೆದಿದೆ. 'ಭಯೊತ್ಪಾದನೆ' ಬಗ್ಗೆ ಬುಶ್ ಭಾಷ್ಯ ತಿರಸ್ಕರಿಸುವ ಬಗ್ಗೆ ಪ್ರಚಾರ-ಪ್ರಕ್ಷೋಭೆ ಅಗತ್ಯ.

ನುಂಗಲಾರದ ತುತ್ತಾಗಿರುವ ಮಿಲೋಸೆವಿಕ್!

ಅಂತರ್ರಾಷ್ಟರೀಯ ನ್ಯಾಯಾಲಯಲ್ಲಿ ಮಿಲೇಸೇವಿಚ್ ಅವರ ವಿಚಾರಣೆ ಸಾಮ್ರಾಜ್ಯಶಾಹಿಗಳಿಗೆ ನುಂಗಲಾರದ ತುತಾಗಿದೆಯೇಕೆ?

ಮಾಜಿ ಯುಗೋಸ್ಲಾವಮಿಯಾ ಅಧ್ಯಕ್ಷ ...ಿಲೊಸೆವಿಕ್ ನೆನಪಿದೆಯೇ? ಯುಗೋಸ್ಲಾವಿಯವನ್ನು ಜನಾಂಗೀಯ - ಧಾರ್ಮಿಕ ಆಧಾರದ ಮೇಲೆ ಛಿದ್ರ ಮಾಡುವ ಸಾಮ್ರಾಜ್ಯಶಾಹಿ ಹುನ್ನಾರಕ್ಕೆ ಪ್ರತಿರೋಧ ನೀಡಿದ ವ್ಯಕ್ತಿ. ಅಮೆರಿಕನ್ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿಗಳು ಸೇರಿ ತಮ್ಮೆಲ್ಲಾ ಮಿಲಿಟರಿ - ರಾಜಕೀಯ ಆರ್ಥಿಕ ಬಲ ಪ್ರಯೋಗಿಸಿ ಯುಗೋಸ್ಲಾವಿಯಾವನ್ನು ಬೆಂಗಾಡನ್ನಾಗಿ ಮಾಡಿದರು. ಇದಕ್ಕಾಗಿ ಜನಾಂಗೀಯ - ಧಾರ್ಮಿಕ ವಿಚ್ಛಿದ್ರಕಾರಿ ಶಕ್ತಿಗಳಿಗೆ ಮಿಲಿಟರಿ - ಆರ್ಥಿಕ ಕುಮ್ಮಕ್ಕು ಕೊಟ್ಟರು. ಅದು ಪೂರ್ಣವಾಗಿ ಫಲ ಕೊಡದಾಗ, ಭೀಕರಮಿಲಿಟರಿ ಧಾಳಿ ನಡೆಸಿ ಯುಗೋಸ್ಲಾವಿಯವನ್ನು ಹರಿಹಂಚಿದರು. ಇಂದಿಗೂ ಯುಗೋಸ್ಲಾವಿಯಾದಲ್ಲಿ ಮೊದಲಿನ ಶಾಂತಿ, ನೆಮ್ಮದಿ ನೆಲೆಸಿಲ್ಲ. ಯುಗೋಸ್ಲಾವಿಯಾ ಒಡೆದು ಮಾಡಿದ ಹಲವಾರು ದೇಶಗಳಲ್ಲಿ ರಾಜಕೀಯದಲ್ಲಿ ನೇರ ಮಧ್ಯಪ್ರವೇಶ ಮಾಡಿ ಹೆಚ್ಚಿನ ಕಡೆ ಕೈಗೊಂಬೆ ಸರ್ಕಾರಗಳನ್ನು ಸ್ಥಾಪಿಸಿದೆ. ಯುಗೋಸ್ಲಾವಿಯಾದ ಒಡೆದ ಮೇಲೂ ಸರ್ಬಿಯಾದ (ಒಕ್ಕೂಟದಲ್ಲಿ ಅತಿದೊಡ್ಡ ದೇಶವಾಗಿತ್ತು) ಚುನಾಯಿತ ಯುಗೋಸ್ಲಾವಿಯ ಅಧ್ಯಕ್ಷರಾಗಿದ್ದ ಮಿಲೋಸೆವಿಕ್ ಯುಗೋಸ್ಲಾವಿಯನ್ನು ನಿರ್ಮಾಮ ಮಾಡಿದಾಗಿನ, ಹಲವು ರಕ್ತಸಿಕ್ತ, ಪಾಪಕೃತ್ಯಗಳಿಗೆ,ಯುದ್ಧ-ಅಪರಾಧಗಳನ್ನು ಸಾಮ್ರಾಜ್ಯಶಾಹಿ ಮಿಲೊಸೆವಿಕ್ ಮೇಲೆ ಹಾಕಲು ನಿರ್ಧರಿಸಿತು. ಇದಕ್ಕಾಗಿ ಅಂತ್ರರಾಷ್ಟ್ರೀಯ ಕೋರ್ಟ್... ಮಿಸೊಲೆವಿಕ್‌ರನ್ನು 'ಯುದ್ಧಪರಾಧಗಳಿಗೆ' ಎಳೆಯಿತು.



'ದುಬಾರಿ ಕಪಟ ನಾಟಕ'

ಮಿಲೊಸೆವಿಕ್ ಸರ್ಕಾರದಲ್ಲಿ ಹಾಗೂ ಕೋರ್ಟ್‌ನಲ್ಲಿ ಇದ್ದ ಕೆಲವು ಬಾಲಬಡುಕರನ್ನು ಮತ್ತು ಆರ್ಥಿಕ ನೆರವಿನ ಆಮಿಷ-ಒತ್ತಡ ಬಳಸಿ ಅವರನ್ನು ಯುದ್ಧಪರಾಧಗಳ ವಿಚಾರಣೆಗೆ ಅಂತರ್ರಾಷ್ಟ್ರೀಯ ಕೋರ್ಟ್‌ಗೆ ಒಪ್ಪಿಸುವಂತೆ ಮಾಡಿತು. ಅಂದಿನಿಂದ ಮಿಲೊಸೆವಿಕ್ ಮೇಲೆ ವಿಚಾರಣೆ ಮುಂದುವರೆದಿದೆ. ಸಾಮ್ರಾಜ್ಯಶಾಹಿಗೆ ತನ್ನೆಲ್ಲಾ ರಾಜಕೀಯ-ಆರ್ಥಿಕ ಬಳಸಿದರೂ, ಮಿಲೊಸೆವಿಕ್ ಮೇಲೆ ಅಪರಾಧ ಸಿದ್ಧಪಡಿಸಲು ಸಾಧ್ಯವಾಗುತ್ತಿಲ್ಲ. ತಮ್ಮ ಪರ ವಾದವನ್ನು ತಾವೇ ಮಾಡುವುದಾಗಿ ಹೇಳಿರುವ ಮಿಲೊಸೆವಿಕ್ ತಮ್ಮ ವಾದ ಆರಂಭಿಸಿದ್ದಾರೆ. ತಮ್ಮ ಮೇಲೆ ಅಪಾದನೆಗಳನ್ನು 'ಚರಿತ್ರೆಯನ್ನು ತಿರುಚುವ ಪ್ರಯತ್ನ' ಎಂದು ಕರೆದಿದ್ದಾರೆ. ಯುರೋಪು ಮತ್ತು ಅಮೆರಿಕಾದ ಸಾಮ್ರಾಜ್ಯಶಾಹಿ ದೇಶಗಳು ಯುಗೋಸ್ಲಾವಿಯಾದ ರಕ್ತಪಾತಕ್ಕೆ ನೇರ ಹೊಣೆ. ಯುಗೋಸ್ಲಾವಿಯಾ ಒಡೆದು ಹೋದಮೇಲೆ 'ವಿಶಾಲ ಸರ್ಬಿಯ' ಯೋಜನೆ ಹಾಕಿ ಇತರ ದೇಶಗಳ ಜನರ ನರಮೇಧ ಮಾಡಿದ ಆಪಾದನೆ ಶುದ್ಧ ಸುಳ್ಳು ಎಂದು ಮಿಲೊಸೆವಿಕ್ ಹೇಳಿದ್ದಾರೆ. ಸರ್ಬಿಯದ ಪ್ರತ್ಯೇಕತವಾದಿ ಶಕ್ತಿಗಳ ವಿರುದ್ಧ ಮಾತ್ರ ನಾವು ಹೋರಾಡಿದ್ದು ಎಂದಿದ್ದಾರೆ. ಈ ಇಡೀ ವಿಚಾರಣೆ 'ಕಪಟ ನಾಟಕ' ಎಂದು ಕರೆದ. ಅವರು ಆದರೆ ಬಹಳ 'ದುಬಾರಿ ಕಪಟನಾಟಕ' ಎಂದು ಮೂದಲಿಸಿದ್ದಾರೆ. ಈ ವಿಚಾರಣೆಗೆ 27 ಕೋಟಿ ಡಾಲರುಗಳ ವಾರ್ಷಿಕ ಬಜೆಟ್ ಇದೆ. ಅದನ್ನು ಅವರು ಮೂದಲಿಸಿದ್ದು, ತಾವು ತಮ್ಮ ಪ್ರತಿವಾದದಲ್ಲಿ ಬ್ರಿಟಿಷ್ ಪ್ರಧಾನಿ ಟೋನಿಬ್ಲೇರ್, ಮಾಜಿ ಅಮೆರಿಕನ್ ಅಧ್ಯಕ್ಷ ಬಿಲ್ ಕ್ಲಿಂಟನ್ ಸೇರಿದಂತೆ ಸಾವಿರ ಸಾಕ್ಷಿಗಳನ್ನು ಕರೆಯುವುದಾಗಿ ಹೇಳಿದ್ದಾರೆ.

ನುಂಗಲಾರದ ತುತ್ತು

ಮಿಲೊಸೆವಿಕ್ ವಿಚಾರಣೆಯ ಈ 'ಕಪಟ ನಾಟಕ' ಈಗ ಸಾಮ್ರಾಜ್ಯಶಾಹಿಗಳಿಗೆ ನುಂಗಲಾರದ ತುತ್ತಾಗಿದೆ. ಅಮೆರಿಕ ತನ್ನ ಸೈನ್ಯ, ಸೈನಿಕರು, ಅಧಿಕಾರಿಗಳಿಗೆ ಯುದ್ಧಪರಾಧಗಳ ಅಂತರ್ರಾಷ್ಟ್ರೀಯಕಾನೂನು ಅನ್ವಯವಾಗುವುದಿಲ್ಲ ಎಂದು ಹಿಂದಿನಿಂದ ಹೇಳುತ್ತಾ ಬಂದಿದೆ. ಹಲವು ಅಂತರ್ರಾಷ್ಟ್ರೀಯ ಯುದ್ಧ-ವಿರೋಧಿ ಗುಂಪುಗಳು ಅಮೆರಿಕ ಮತ್ತು ಬ್ರಿಟನ್ ಸರ್ಕಾರ ಮತ್ತು ಸೈನ್ಯವನ್ನು ಇರಾಕ್‌ನಲ್ಲಿ ಯುದ್ಧಪರಾಧಗಳ ಅಂತರ್ರಾಷ್ಟ್ರೀಯ ಕೋರ್ಟ್‌ಗೆ ಒಯ್ಯುವ ಪ್ರಯತ್ನ ಮಾಡುತ್ತಿದ್ದಾರೆ. ಇನ್ನೊಂದು ಕಡೆ ಅಮೆರಿಕನ್, ಯುರೋಪಿಯನ್ ಶಕ್ತಿಗಳ ಯುಗೋಸ್ಲಾವಿಯಾದಲ್ಲಿ ಯುದ್ಧಪರಾಧಗಳನ್ನು ಮಿಲೊಸೆವಿಕ್ ಮುಖಕ್ಕೆ ಬಳಿಯುವ 'ಕಪಟ ನಾಟಕ' ನಡೆಯುತ್ತಿದೆ. ಮಿಲೊಸೆವಿಕ್ ಪ್ರತಿವಾದ ಆರಂಭವಾಗಿ ಮುಂದುವರೆದಂತೆ ಇದು ಅಮೆರಿಕ-ಬ್ರಿಟನ್-ಜರ್ಮನಿಗಳಿಗೆ ಭಾರಿ ಮುಖಭಂಗಕ್ಕೆ ಕಾಣಬಹುದು. ಇನ್ನೊಂದುಕಡೆ ಇರಾಕ್‌ನ ಯುದ್ಧಪರಾಧಗಳ ವಿಚಾರಣೆಗೆ ಒತ್ತಡ ಹೆಚ್ಚಬಹುದು. ಇದು ಸಾಮ್ರಾಜ್ಯಶಾಹಿಗಳಿಗೆ ನುಂಗಲಾರದ ತುತ್ತಾಗಿದೆ.

. . . .


ಪಾಬ್ಲೋ ನೆರೂದ ಪ್ರೆಸೆಂಟ್

ಪುಟ 12 ರಿಂದ

ಹನ್ನೆರಡು ವರ್ಷಗಳ ಅವಧಿಯ ಕವನಗಳಲ್ಲಿ 'ಮೆಚ್ಚು ಪಿಚ್ಚುವಿನ ಶಿಖರಗಳಲ್ಲಿ', 'ಚಿಲಿಯ ಶೋಧಕರು', 'ಪಶುಗಳ್ಳು', 'ಮೆಗೆಲಾನ್ನರ ಹೃದಯ' ಮುಂತಾದವು ಪ್ರಮುಖವಾದವು. ಈ ಕವನಗಳ ಮೂಲಕ ಚಿಲಿಯ, ಇಡೀ ದಕ್ಷಿಣ ಅಮೆರಿಕಾದ ಜನಸಮುದಾಯ ಸಂವಾದದಲ್ಲಿ ತೊಡಗಿವೆ ಎನ್ನಬಹುದು. ಮಹಾನ್ ಕಲಾವಂತಿಕೆ ಮತ್ತು ಮಾನವೀಯ ಬದ್ಧತೆಯಲ್ಲಿ ನೆರೂದಾರವರು ಶಿಖರಪ್ರಾಯ ಸಾಧನೆ ಈ ಕವನಗಳಲ್ಲಿದೆ.

ನೆರೂದಾ ತಮ್ಮ ಕೊನೆಯ ದಿನದವರೆಗೂ ಬರೆಯುತ್ತಲೇ ಇದ್ದರು. ಅವರ ಸಾವಿರಾರು ಕವನಗಳಲ್ಲದೆ, ಅವರು ಬರೆದ 'ನನ್ನ ನೆನಪುಗಳು' ಎಂಬ ಆತ್ಮಕಥನ ಪ್ರಸಿದ್ಧವಾಗಿದೆ. 1971 ರಲ್ಲಿ ಅವರಿಗೆ ನೋಬೆಲ್ ಪ್ರಶಸ್ತಿ ಸಿಕ್ಕಿದಾಗ, ಆಗಲೇ ಅವರು '20ನೇ ಶತಮಾನದ ಮಹಾನ್ ಕವಿ' ಎಂದು ಪ್ರಸಿದ್ಧರಾಗಿದ್ದರು. ಅವರಿಗೆ ನೊಬೆಲ್ ಪ್ರಶಸ್ತಿ ಕೊಡದಿದ್ದರೆ, ನೊಬೆಲ್ ಪ್ರಶಸ್ತಿಗೆ ಅಪಕೀರ್ತಿ ಬರುತ್ತಿತ್ತು ಅಷ್ಟೇ. 'ನನ್ನ ಕಾವ್ಯ ಅಮೆರಿಕನ್ ನದಿಯಂತೆ...' ಅವರು ಹೇಳಿದ್ದು ಅಕ್ಷರಶಃ ನಿಜ. ನೆರೂದಾ ಕವನ ಜಗತ್ತಿನ ದುಡಿಯುವ ಜನರ ಎದೆಯಲ್ಲಿ ನಟ್ಟಿದೆ. ನೆರೂದಾ ಕಾವ್ಯ ಇಂದಿಗೂ ಇಡೀ ಜಗತ್ತಿನ ದುಡಿಯುವ ಜನರ ಸಂವೇದನೆಯ ಶಕ್ತ ಅಭಿವ್ಯಕ್ತಿಯಾಗಿ ಮುಂದುವರೆದಿದೆ. ನೆರೂದಾರ ಜನ್ಮಶತಮಾನೋತ್ಸವ ಮಹಾನ್ ಕಲಾವಂತಿಕೆ, ಮಾನವೀಯ ಬದ್ಧತೆಯ ಸಂಗಮವಾಗಿ ಸಾಹಿತ್ಯ ಹೇಗೆ ಪ್ರಬಲ ಶಕ್ತಿಯಾಗಲು ಸಾಧ್ಯ ಎಂಬ ಬಗ್ಗೆ ನೆನಪಿಸಿಕೊಳ್ಳುವ ಸಂದರ್ಭವಾಗಲಿ.


...ಶರತ್‌ಚಂದ್ರ



ಪಾಬ್ಲೋ ನೆರೂದ ಶತಮಾನ ವರ್ಷ

ಚಿಲಿಯ ಪಾಬ್ಲೋ ನೆರೂದಾ ನೊಬೆಲ್ ಪ್ರಶಸ್ತಿ ಸಿಗುವ ಹಲವಾರು ವರ್ಷಗಳ ಮೊದಲೇ ಅತ್ಯಂತ ಜನಪ್ರಿಯ ಕವಿ ಆಗಿದ್ದವರು. ಚಿಲಿಯಲ್ಲಿ ಮಾತ್ರವಲ್ಲ, ಸ್ಪಾನಿಷ್ ಮಾತಾಡುವ ದಕ್ಷಿಣ -ಮಧ್ಯ ಅಮೇರಿಕಾದಲ್ಲಿ ಮಾತ್ರವಲ್ಲ - ಬಹುಶಃ ಇಡೀ ಜಗತ್ತಿನ ಶ್ರಿಸಾಮಾನ್ಯರಿಗೆ ನಿಲುಕಿದ ಏಕಮಾತ್ರ ಕವಿ ನೆರೂದಾ. ಭಾರತದಲ್ಲಿ ಮಾತ್ರವಲ್ಲ, ಹಲವು ದೇಶಗಳಲ್ಲಿ ಅತ್ಯಂತ ಹೆಚ್ಚು ಭಾಷಾಂತರವಾದ ಜನಪ್ರಿಯವಾದ ಕವಿತೆಗಳು ನೆರೂದಾರದ್ದು. ಕವಿ, ರಾಯಭಾರಿ, ರಾಜಕಾರಣಿಯಾಗಿ ಪ್ರಸಿದ್ಧರಾಗಿದ್ದ ನೆರೂದಾರನ್ನು '20ನೇ ಶತಮಾನದ ಅತ್ಯಂತ ಮಹಾನ್ ಕವಿ' ಎಂದು ಹಲವರು ಪರಿಗಣಿಸುತ್ತಾರೆ. ಚಿಲಿ ಕಮ್ಯೂನಿಸ್ಟ್ ಪಾರ್ಟಿಯ ಸದಸ್ಯರಾಗಿದ್ದ ನೆರೂದಾರನ್ನು ಅಧ್ಯಕ್ಷ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿತ್ತು. ತಮ್ಮ ಮಿತ್ರ ಅಲೆಂದೆಯ ಪರವಾಗಿ ಹಿಂದೆ ಸರಿದರು ನೆರೂದಾ. ಅಲೆಂದೆಯವರ ಪದಚ್ಯುತಿ/ ಮರಣದ ಎರಡೇ ವಾರಗಳಲ್ಲಿ ತೀರಿಕೊಂಡ ನೆರೂದಾರವರ ಶವಯಾತ್ರೆ, ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ಪ್ರಥಮ ಸಾಮೂಹಿಕ ಪ್ರತಿಭಟನೆಯಾಗಿತ್ತು ಎಂಬುದು ಅವರ ತುಂಬು ಜೀವನಕ್ಕೆ ಹಿಡಿದ ಕನ್ನಡಿ. ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ನೆರೂದಾ ಕಿರು ಪರಿಚಯ.

ಪಾಬ್ಲೋ ನೆರೂದ ಪ್ರೆಸೆಂಟ್



ಸೆಪ್ಟೆಂಬರ್ 25, 1973. ಚಿಲಿಯ ಕುಖ್ಯಾತ ಅರೆ ಫ್ಯಾಸಿಸ್ಟ್ ಕ್ಷಿಪ್ರಕ್ರಾಂತಿ ನಡೆದು ಎರಡು ವಾರಗಳು ಆಗಿವೆ. ಚಿಲಿಯ ರಾಜಧಾನಿ ಸ್ಯಾಂಟಿಯಾಗೊದಲ್ಲಿ, ದೇಶದ ತುಂಬಾ ಬೀದಿಗಳಲ್ಲಿ ರಕ್ತ ಹರಿಯುತ್ತಿದೆ. 'ಬೀದಿಯಲ್ಲಿ ರಕ್ತ ಹರಿಯುತ್ತಿರುವಾಗ ನಾನು ಹೇಗೆ, ಎಲೆಗಳ, ಕನಸುಗಳ, ಮಹಾನ್ ಅಗ್ನಿ ಪರ್ವತಗಳ ಬಗ್ಗೆ ಹಾಡಲಿ ಎಂದಿದ್ದ. ಮಹಾನ್ ಕವಿಯ ಹೆಣ ಆತನ ಮನೆಯಲ್ಲಿ ಬಿದ್ದಿದೆ. ಆತನ ಮನೆಯೋ ಫ್ಯಾಸಿಸ್ಟ್ ಸರ್ವಾಧಿಕಾರಿ ಪಿನೋಚೆಯ ರಕ್ಕಸ ಸೈನಿಕರ ದಾಂಧಲೆಯಿಂದ ಅಸ್ತವ್ಯಸ್ತವಾಗಿದೆ. ಮುಂದಿನ ಗಾಜು, ಚೆಲ್ಲಾಪಿಲ್ಲಿಯಾದ ಮೇಜು-ಕುರ್ಚಿ, ಕಸದ ರಾಶಿ ತುಂಬಿದ ನೆರೂದಾ ಮನೆಗೆ ಆತನ ಇಚ್ಛೆಯಂತೆ ತರಲಾಗಿತ್ತು. ಅಲ್ಲಿಂದ ನೆರೂದಾ ಶವಯಾತ್ರೆ ಹೊರಟಿತ್ತು.

ಶವಯಾತ್ರೆ ಪ್ರತಿಭಟನೆಯಾದಾಗ

ನೆರೂದಾ ಸ್ನೇಹಿತ ಲೊಯೊಲಾ ಆ ಕರಾಳ ದಿನದ ಚಿತ್ರಣ ನೀಡುತ್ತಾರೆ. ಕಾರ್ಮಿಕರು ಮತ್ತು ವಿದ್ಯಾರ್ಥಿಗಳ ದೊಡ್ಡ ಗುಂಪು ನೆರೂದಾ ಮನೆ ಹೊರಗೆ ಸೇರಿತ್ತು. ಯಾರೋ ಕೂಗಿದರು - 'ಕಾಮ್ರೇಡ್ ಪಾಬ್ಲೋ ನೆರೂದಾ!....... ಉಳಿದವರೆಲ್ಲಾ 'ಪ್ರೆಸೆಂಟ್ (ಇಲ್ಲಿದ್ದಾರೆ)' ಎಂದು ಕೂಗಿದರು... ಯಾವುದೇ ದೊಡ್ಡ ಮೆರವಣಿಗೆ ನಿಷಿದ್ಧವಾಗಿತ್ತು. ಶವದ ಮೆರವಣಿಗೆ ಹೊರಟಿತು.... ಸ್ಮಶಾನಕ್ಕೆ ಬರುವ ಹೊತ್ತಿಗೆ ಮೆರವಣಿಗೆ ಹಿಗ್ಗಿ ಭಾರಿ ದೊಡ್ಡ ಪ್ರತಿಭಟನಾ ಪ್ರದರ್ಶನವಾಗಿಬಿಟ್ಟಿತ್ತು. ಸೆಪ್ಟೆಂಬರ್ 11 ರ ನಂತರ ಪ್ರಥಮ ಪ್ರದರ್ಶನವಾಗಿತ್ತು. ಸತ್ಯ ಹೇಳಬೇಕೆಂದರೆ ನಾನು ಬೆದರಿ ಕಲ್ಲಾಗಿದ್ದೆ. ಜನ ಉತ್ತೇಜಿತರಾಗಿ 'ಅಂತರ್ರಾಷ್ಟ್ರೀಯ' ಹಾಡು ಹಾಡುತ್ತಿದ್ದರು. ಹೆದರಿ ಕಲ್ಲಾಗಿದ್ದ ನಾನೂ ಎಲ್ಲರ ಜತೆ ಸೇರಿ ಮುಷ್ಟಿ ಬಿಗಿದು 'ಅಂತರ್ರಾಷ್ಟ್ರೀಯ' ಹಾಡಲಾರಂಭಿಸಿದ್ದೆ. ಸ್ಮಶಾನದ ಎದುರಿನ ಚೌಕವನ್ನು ಶಸ್ತ್ರಸಜ್ಜಿತ ಸೈನಿಕರು ಸುತ್ತುವರೆದಿದ್ದರು. ಕೆಲವು ಸೆಕೆಂಡು ಅವರ ಮಶೀನ್ ಗನ್ನುಗಳು ನಮ್ಮನ್ನೆಲ್ಲಾ ಸುಟ್ಟು ಬಿಡುವುದು ಖಂಡಿತ ಎಂದುಕೊಂಡಿದ್ದೆ. ಯಾರೋ ಪುನಃ ಕೂಗಿದರು. "ಕಾಮ್ರೇಡ್ ಪಾಬ್ಲೋ ನೆರೂದಾ!' ಎಂದು ನಾವೆಲ್ಲಾ ಗಟ್ಟಿಯಾಗಿ ಕೂಗಿದೆವು. 'ಪ್ರೆಸೆಂಟ್ (ಇಲ್ಲಿದ್ದಾರೆ)! ಅಂತ..



ಅಪಾಯಕಾರಿ .... ಕಾವ್ಯ!

ಇದಾಗಲೇ ದಂತಕಥೆಯಾಗಿದ್ದ ನೆರೂದಾ ಸತ್ತ ಮೇಲೂ ಜನರಿಗೆ ಸ್ಫೂರ್ತಿ, ಧೈರ್ಯ ತುಂಬಿದ್ದರು. ಫ್ಯಾಸಿಸ್ಟ್ ಪಿನೋಚೆ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿದ್ದರು. ಜಗತ್ತಿನ ಪ್ರಥಮ ಚುನಾಯಿತ ಮಾರ್ಕ್ಸ್‌ವಾದಿ ಅಧ್ಯಕ್ಷ ಅಲೆಂದೆಯವರನ್ನು ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಪದಚ್ಯುತ/ ಕೊಲೆಯಾಗಿ ಕೆಲವು ದಿನಗಳಲ್ಲಿ ನೆರೂದಾ ಮನೆಗೂ ಬಸ್-ಲೋಡು ಪಿನೋಚೆ ಸೈನಿಕರು ಬಂದಿದ್ದರು. ಮೈತುಂಬಾ ಶಸ್ತ್ರಾಸ್ತ್ರಗಳನ್ನು ಧರಿಸಿ ಮನೆಯೆಲ್ಲಾ ಹುಡುಕಾಡಿದರು. ಅವರ ಕಮಾಂಡರ್‌ಗೆ ನೆರೂದಾ ಹೇಳಿದರಂತೆ 'ಬೇಕಾದಷ್ಟು ಹುಡುಕಿ... ನಿಮಗೆ ಅಪಾಯಕಾರಿಯಾಗುವ ಒಂದೇ ವಸ್ತು ಇಲ್ಲಿದೆ.... ಕಾವ್ಯ!' ಅಷ್ಟು ಹೊತ್ತಿಗೆ ನೆರೂದಾ ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಫ್ಯಾಸಿಸಂ ಮತ್ತು ತುಳಿತದ ವಿರುದ್ಧ ತಮ್ಮ ಜೀವನದ ತುಂಬಾ ಹೋರಾಡಿದ್ದ ನೆರೂದಾ, ಕೊನೆ ದಿನಗಳಲ್ಲಿ ಕೆಲವು ವರ್ಷಗಳ ಕಾಲ ಉತ್ತಮ ಬದುಕಿನ ಕನಸು ಚಿಗುರು ಕಮರಿದ್ದು ನೋಡಿ ಸಾಯಬೇಕಾಯಿತು.

1904 ಜುಲೈ 12 ರಂದು ಚಿಲಿಯ ದಕ್ಷಿಣ ಪ್ರಾಂತ್ಯದ ಟೆಮುಕೊ ಎಂಬ ಚಿಕ್ಕ ಪಟ್ಟಣದಲ್ಲಿ ಬಡ ಕುಟುಂಬದಲ್ಲೇ ಹುಟ್ಟಿದ್ದರು ನೆರೂದಾ. ಅವರ ನಿಜವಾದ ಹೆಸರು ರಿಕಾರ್ಡೋ. ತಮ್ಮ 16ನೇ ವಯಸ್ಸಿನಲ್ಲಿ ಜೆಕೊಸ್ಲೋವಿಯಾಕಿಯಾದ ಮಹಾನ್ ಲೇಖಕ ಜಾನ್ ನೆರೂದಾರವರ ಹೆಸರು ತಮ್ಮದಾಗಿಸಿಕೊಂಡರು! ಪ್ರಕೃತಿಯ ಮಡಿಲಲ್ಲಿ ಬೆಳೆದ ನೆರೂದಾ ಮೊದಲ ಕವಿತೆ ತಮ್ಮ 13ನೇ ವಯಸ್ಸಿನಲ್ಲಿ ಬರೆದರಂತೆ. ಅವರ ಮೊದಲ ಕವನ ಸಂಕಲನ (1924) 'ಇಪ್ಪತ್ತು ಪ್ರೇಮ ಕವಿತೆಗಳು ಮತ್ತು ಒಂದು ಹತಾಶೆಯ ಹಾಡು'. ಹಲವಾರು ದಶಕಗಳ ಕಾಲ ಸ್ಪಾನಿಷ್ ಭಾಷಿಕರ ಜಗತ್ತಲ್ಲಂತೂ ಪ್ರೇಮಿಗಳು ಈ ಹಾಡುಗಳ ಮೂಲಕವೇ ಸಲ್ಲಾಪಿಸುತ್ತಿದ್ದರಂತೆ.

'ನನ್ನದೆಯಲ್ಲಿ ಸ್ಪೈನ್'

ಚಿಲಿಯ ರಾಯಭಾರ ಸೇವೆಯಲ್ಲಿ ಸೇರಿದ ನೆರೂದಾ, ತಮ್ಮ ಉದ್ಯೋಗದಿಂದಾಗಿ ದೂರದ ದೇಶಗಳಲ್ಲಿ ಒಂಟಿ, ನೀರಸ ಜೀವನ ಸಾಗಿಸಬೇಕಾಯಿತು. ಅವರ ರಾಯಭಾರಿ ಕಛೇರಿ ಉದ್ಯೋಗ ಅವರನ್ನು 1934 ರಲ್ಲಿ ಸ್ಪೈನ್‌ಗೆ ತಂದಿತು. ಈ ನಡುವೆ ಹಲವು ದೇಶಗಳನ್ನು ಕಂಡು, ಹಲವು ಮಿತ್ರರನ್ನು ಪಡೆದು, ಜೀವನಾನುಭವ ಪಡೆದಿದ್ದು ನೆರೂದಾ ಅದನ್ನು ತಮ್ಮ ಕವನಗಳಲ್ಲಿ ದಾಖಲಿಸಿದ್ದಾರೆ.

ನೆರೂದಾ ಸ್ಪೈನ್‌ನಲ್ಲಿ ಕಳೆದ ವರ್ಷಗಳು ಮಹತ್ವದ ಅವಧಿ ಅದು ಸ್ಪೈನ್‌ನಲ್ಲಿ ಫ್ಯಾಸಿಸ್ಟ್ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ (ರಿಪಬ್ಲಿಕನ್‌ರ) ನಡುವೆ ಭೀಷಣ ಘರ್ಷಣೆಯ ಅವಧಿ. ನೆರೂದಾರ ಜನಪರ ರಾಜಕೀಯ ಧೋರಣೆಗಳನ್ನು ರೂಪಿಸಿದ ಕಾಲ. ಅವರ ಕಾವ್ಯದ ವಸ್ತು, ಶೈಲಿ, ಭಾಷೆಯಲ್ಲಿ ಬದಲಾವಣೆ ತಂದ ಅವಧಿ. ಈ ಅವಧಿಯಲ್ಲಿ ಜನಸಾಮಾನ್ಯರ ಜತೆ ವಿಶೇಷ ಸಂಬಂಧ ಹೊಂದಿದ್ದ ಕವಿಗಳ - ಲೋತಾಶ, ಅಲ್ಬರ್ಟಿ, ಮಿಗೆಲ್, ಲೂಯಿ ಕೆರ್ನುಡಾ, ಲಿಯೋನ್ ಫೆಲಿಫ್ - ಒಡನಾಟ ಮಾಡಿದರು. ನೆರೂದರ ರಾಜಕೀಯ ಪ್ರಜ್ಞೆ ರೂಪಿಸುವಲ್ಲಿ ಈ ಕವಿಗಳು ಪ್ರಮುಖ ಪಾತ್ರ ವಹಿಸಿದರು. ಸ್ಪೈನ್‌ನಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಗೆದ್ದ ಮೇಲೆ ನಡೆದ ಫ್ಯಾಸಿಸ್ಟ್ ದಮನ - ಚಕ್ರದಲ್ಲಿ ನೆರೂದಾ ನಿಕಟ ಮಿತ್ರ ಲೋತಾಶ ಕೊಲೆ ಆಯಿತು. ನೆರೂದಾ ಸ್ವಾಭಾವಿಕವಾಗಿಯೇ ರಿಪಬ್ಲಿಕನ್ನರ ಪರ ವಹಿಸಿದರು. ಸ್ಪೈನ್‌ನ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ತಮ್ಮ ಕಾವ್ಯದ ಮೂಲಕ ದನಿ ಎತ್ತಿದ್ದು ಮಾತ್ರವಲ್ಲ, ಪ್ರಾಣಭಯ ಎದುರಿಸುತ್ತಿದ್ದ ನೂರಾರು ರಿಪಬ್ಲಿಕನ್ನರನ್ನು ಸ್ಪೈನ್‌ನಿಂದ ಆಚೆಗೆ ಸಾಗಿಸುವಲ್ಲಿ ಸಕ್ರಿಯ ಪಾತ್ರ ವಹಿಸಿದರು. ಅದಕ್ಕಾಗಿ ನೆರೂದಾ ತಮ್ಮ ರಾಯಭಾರ ಸವಲತ್ತು ಉಪಯೋಗಿಸಲು ಹಿಂದೆ ಮುಂದೆ ನೋಡಲಿಲ್ಲ. ಅದರ ಫಲವಾಗಿ ರಾಯಭಾರ ಪದವಿ ಕಳೆದುಕೊಳ್ಳಬೇಕಾಯಿತು. 'ನನ್ನದೆಯಲ್ಲಿ ಸ್ಪೈನ್' (1936) ಕವನ ಸಂಕಲನ ಈ ಅವಧಿಯ ನೆರೂದರ ಕಾವ್ಯದ ಹೊಸ ಘಟ್ಟ ಪ್ರತಿನಿಧಿಸುವಂತಹದು.

ನಾನೇಕ ಮಾತನಾಡುವುದಿಲ್ಲ
ಬಯಕೆಗಳ ಬಗ್ಗೆ; ಎಲೆಗಳ ಬಗ್ಗೆ
ನನ್ನ ದೇಶದ ಮಹಾನ್ ಅಗ್ನಿ ಪರ್ವತಗಳ ಬಗ್ಗೆ
ಎಂದು
ನೀವು ಕೇಳುತ್ತೀರಿ!
ನೋಡಿ! ಬೀದಿಯ ಮೇಲೆ ರಕ್ತ ಇದೆ
ರಕ್ತವಿದೆ ಬೀದಿಯ ಮೇಲೆ!

ಎಂಬ ಪ್ರಸಿದ್ಧ ಸಾಲುಗಳು ಇರುವ ಕವಿತೆ ಈ ಸಂಕಲನದ್ದೆ. ನೆರೂದಾರ 'ನನ್ನೆದೆಯಲ್ಲಿ ಸ್ಪೈನ್' ಕವಿತೆಗಳು, ಯುದ್ಧದಬಗ್ಗೆ ಜನಸಾಮಾನ್ಯರ ಸ್ಪಂದನದ ದನಿಯಾದವು. ಈ ಅವಧಿಯಲ್ಲೇ ನೆರೂದಾರ ಕವನ ಗುಂಪಿನಲ್ಲಿ ಒಡುವ... ಸಮುದಾಯದ ಆಶಯಗಳಿಗೆ ಮಿಡಿಯುವವು ಆದವು. ಕಾವ್ಯ ಖಾಸಗಿ ಕ್ರಿಯೆಯಲ್ಲ, ಸಮುದಾಯದ ಸಂವಾದದ ಭಾಗ - ಎನ್ನುವ ನಿಲುವಿಗೆ ನೆರೂದಾ ತಲುಪಿದ್ದರು. ಇದೇ ಸಮಯದಲ್ಲಿ ಸ್ಪೈನ್‌ನಿಂದ ಓಡಿಹೋಗಿ ಫ್ರಾನ್ಸ್‌ನ ಯಾತನಾ ಶಿಬಿರಗಳಲ್ಲಿ ನರಳುತ್ತಿದ್ದ ಸಾವಿರಾರು ರಿಪಬ್ಲಿಕನ್ನರಲ್ಲಿ ಹಲವರನ್ನು ದೋಣಿಗಳಲ್ಲಿ ಚಿಲಿಗೆ ಸಾಗಿಸುವ ಅತ್ಯಂತ ಅಪಾಯಕಾರಿ ಕಾರ್ಯಾಚರಣೆಯಲ್ಲೂ ಸಫಲರಾದರು. ಇದಕ್ಕೆ ಚಿಲಿಯಲ್ಲಿ ಬಂದ ರಾಜಕೀಯ ವಿರೋಧವನ್ನು ಸಮರ್ಥವಾಗಿ ಎದುರಿಸಿದರು.

'ನನ್ನ ಪಾರ್ಟಿಗೆ'

ಚಿಲಿಗೆ ಮರಳಿದ ನೆರೂದಾ ರಾಜಕೀಯದಲ್ಲಿ ಹೆಚ್ಚೆಚ್ಚು ತೊಡಗಿಕೊಳ್ಳತೊಡಗಿದರು. ಚಿಲಿಯ ಉತ್ತರದ ಮರಳುಗಾಡು ಪ್ರಾಂತ್ಯಗಳ ಜನ ಅವರನ್ನು ತಮ್ಮ ಸೆನೆಟರ್ ಆಗಬೇಕೆಂದು ಕೋರಿದರು. ಆ ಪ್ರದೇಶದಲ್ಲೇ ನೆರೂದಾಗೆ ಮೊದಲ ಬಾರಿಗೆ ಜನಸಾಮಾನ್ಯರ ಕಿತ್ತುತಿನ್ನುವ ಬಡತನದ ನೇರ ಅನುಭವ ಪಡೆದರು. ಆಗಲೇ ಅವರು ಕಮ್ಯುನಿಸ್ಟ್ ಪಕ್ಷದ ಜತೆ ಸಂಬಂಧ ಹೊಂದಿದ್ದು ಪಕ್ಷ ಸೇರುವ ನಿರ್ಧಾರ ಮಾಡಿದರು. ಮಾರ್ಚ್ 1945 ರಲ್ಲಿ ನೆರೂದಾ ಚಿಲಿಯ ಉತ್ತರ ಪ್ರಾಂತ್ಯದ ಸೆನೆಟರ್ ಆಗಲು ಕಮ್ಯುನಿಸ್ಟ್ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಿ ಆಯ್ಕೆಯಾದರು. ಕಮ್ಯುನಿಸ್ಟ್ ಪಕ್ಷ ಸೇರಿದ ಸಮಾರಂಭದ ಬಗ್ಗೆ ಬರೆದ 'ನನ್ನ ಪಾರ್ಟಿಗೆ' ಕವನ, ನೆರೂದಾರ ಪಾರ್ಟಿಯ ಪರಿಕಲ್ಪನೆಯನ್ನು ಮನಮೋಹಕವಾಗಿ ಬಿಂಬಿಸುತ್ತದೆ. ಗೊತ್ತಿಲ್ಲದ ಮನುಜನ ಜತೆ ಸೋದರತ್ವ, ಮನುಜರಲ್ಲಿರುವ ವೈವಿಧ್ಯತೆ ಮತ್ತು ಏಕತೆ, ಒಬ್ಬನ ನೋವು ಎಲ್ಲರ ವಿಜಯದಲ್ಲಿ ಹೇಗೆ ಮುಳುಗಬಹುದು - ಇವೆಲ್ಲ ಪಾರ್ಟಿ ನನಗೆ ಕೊಟ್ಟಿತು. ಪಾರ್ಟಿ ನನ್ನನ್ನು ವಿನಾಶ-ರಹಿತ, ಕೊನೆಯಿಲ್ಲದವನನ್ನಾಗಿಸಿತು. ನಾನು ಕೊನೆಗೊಂಡರೂ, ವಿನಾಶವಾದರೂ ಪಾರ್ಟಿಯಲ್ಲಿದ್ದ ನಾನು ಮುಂದುವರೆಯುತ್ತೇನೆ ಎಂದೂ ನೆರೂದಾ ಆ ಕವನದಲ್ಲಿ ಹೇಳುತ್ತಾರೆ.

ಕ್ಯಾಂಟೋ ಜನರಲ್

40-50 ರ ದಶಕ ಚಿಲಿಯಲ್ಲಿ ಮಿಲಿಟರಿ ಜನರಲ್‌ಗಳು, ಸರ್ವಾಧಿಕಾರಿಗಳು ಪ್ರಜಾಪ್ರಭುತ್ವ ಹೊಸಕಿ ಹಾಕಿದ ಅವಧಿ. ಕಾರ್ಮಿಕರ, ದುಡಿಯುವ ಜನರ ಉತ್ತಮ ಬದುಕಿಗೆ ಹೋರಾಟ, ಸರ್ವಾಧಿಕಾರಿಗಳ ವಿರುದ್ಧ ಹೋರಾಟ ತಾರಕಕ್ಕೇರಿಸಿತು. ಸೆನೆಟರ್ ಆಗಿ, ಕಮ್ಯುನಿಸ್ಟ್ ನಾಯಕರಾಗಿ ನೆರೂದಾ ಇವೆಲ್ಲದರಲ್ಲೂ ಧುಮುಕಿದರು. ನೆರೂದಾ ಈ ಮಿಲಿಟರಿ ದಬ್ಬಾಳಿಕೆಯನ್ನು ಪಾರ್ಲಿಮೆಂಟಿನಲ್ಲೂ, ಹೊರಗೂ (ರಾಷ್ಟ್ರೀಯವಾಗಿ, ಅಂತರ್ರಾಷ್ಟ್ರೀಯವಾಗಿ) ತಮ್ಮೆಲ್ಲ ಪ್ರತಿಷ್ಠೆ ಬಳಸಿ ಬಯಲು ಮಾಡಿದರು. ಸ್ವಾಭಾವಿಕವಾಗಿಯೇ ಚಿಲಿಯ ಸರ್ವಾಧಿಕಾರಿ ನೆರೂದಾರ ಬೆನ್ನಹಿಂದೆ ಬಿದ್ದಿದ್ದ. ಇದರಿಂದಾಗಿ ನೆರೂದಾ ಒಂದು ವರ್ಷ ಕಾಲ ಭೂಗತರಾಗಿ, ಮೂರು ವರ್ಷಗಳ ಕಾಲ ದೇಶಾಂತರ ಹೋಗಬೇಕಾಯಿತು.

ಈ ಅವಧಿಯಲ್ಲೇ 'ಚಿಲಿಯ ಮಹಾಕಾವ್ಯ' ಎಂದು ಕರೆಯಲಾದ ಅವರ ಕವನ ಸಂಕಲನ 'ಕ್ಯಾಂಟೋ ಜನರಲ್' ನ ಕವನಗಳನ್ನು ಬರೆದರು.

ಪುಟ 11 ನೋಡಿ

> **ನನ್ನ ಕಾವ್ಯ ಅಮೆರಿಕನ್ ನದಿಯಂತೆ...**
>
> ನನ್ನ ಕಾವ್ಯ ಮತ್ತು ಜೀವನ ಅಮೆರಿಕನ್ ನದಿಯಂತೆ ದಕ್ಷಿಣದ ಪರ್ವತಗಳ ಬಚ್ಚಿಟ್ಟ ಹೃದಯದಲ್ಲಿ ಹುಟ್ಟಿ ಹರಿಯುವ ಚಿಲಿಯ ನೀರಿನಂತೆ, ಕೊನೆಯಿಲ್ಲದೆ ಹರಿಯುತ್ತಾ ಸಾಗರದತ್ತ ಸಾಗಿದೆ. ತನ್ನ ದಾರಿಯ ಉದ್ದಕ್ಕೂ ಒಯ್ಯಬಹುದಾದ ಯಾವುದನ್ನೂ ನನ್ನ ಕಾವ್ಯ ತಿರಸ್ಕರಿಸಲಿಲ್ಲ........ ಅದು ಜನರ ಹೃದಯದೆಡೆಗೆ ಹರಿಯಿತು....
>
> - 'ನನ್ನ ನೆನಪುಗಳು' ಆತ್ಮಕಥನದಲ್ಲಿ
> **ಪಾಬ್ಲೊ ನೆರೂದಾ.**

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್ ವೈ ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by ...